ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ


Swabhimani Sahakari

Pages : 32 / 12₹

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume - 17
Issue - 03
March - 2020




ರಾಜ್ಯ ಬಜೆಟ್ 2020-21

## ಸುಭಿಕ್ಷ ಮತ್ತು ಸಮೃದ್ಧ ಕರ್ನಾಟಕ ನಿರ್ಮಾಣ

### ಹೊಸ ಕೃಷಿ ನೀತಿ ಅನುಷ್ಠಾನ

* DCC, PCARD ಹಾಗೂ PACS ಗಳಿಂದ ನೀಡಿರುವ ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸುಸ್ತಿ ಸಾಲಗಳ ಮೇಲಿನ ಬಡ್ಡಿ ಮನ್ನಾ ರೂ.466 ಕೋಟಿ ನೆರವಿನಿಂದ 92 ಸಾವಿರ ರೈತರಿಗೆ ಪ್ರಯೋಜನ.
* ಅಡಿಕೆ ಬೆಳೆಗಾರರ ಸಹಕಾರ ಸಂಘಗಳಲ್ಲಿ ನೀಡುವ ದೀರ್ಘಾವಧಿ ಕೃಷಿ ಸಾಲದ ಪೈಕಿ ಗರಿಷ್ಠ ಎರಡು ಲಕ್ಷ ರೂ.ವರೆಗಿನ ಸಾಲಕ್ಕೆ ಶೇ.5ರಷ್ಟು ಬಡ್ಡಿ ವಿನಾಯಿತಿ
* ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರು ನಿರ್ವಹಿಸುತ್ತಿರುವ ಸಹಕಾರ ಸಂಘಗಳಿಗೆ ನೀಡುವ ಷೇರು ಬಂಡವಾಳ ದ್ವಿಗುಣಗೊಳಿಸಿ ರೂ.20ಲಕ್ಷಗಳಿಗೆ ಹೆಚ್ಚಳ.



## ನೂತನ ಸಹಕಾರ ಸಚಿವ
## ಶ್ರೀ ಎಸ್.ಟಿ.ಸೋಮಶೇಖರ್

08 ಮಾರ್ಚ್ 2020
ಅಂತರರಾಷ್ಟ್ರೀಯ ಮಹಿಳಾ
ದಿನಾಚರಣೆ ಶುಭಾಶಯಗಳು

ಸೌಹಾರ್ದ ಸಹಕಾರಿಗಳ
ಸಂಖ್ಯೆ : 4951

ಇ-ಸ್ಟಾಂಪಿಂಗ್
ಕೇಂದ್ರಗಳ ಸಂಖ್ಯೆ : 1331

25 ಮಾರ್ಚ್ 2020




ಶುಭಾಶಯಗಳು



ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ

“

ಶ್ರೀಯುತ ಸೋಮಶೇಖರರವರು ಕಳೆದ 25 ವರ್ಷಗಳಿಂದಲೂ ಸಹಕಾರಿ ಕ್ಷೇತ್ರದ ಮುಖ್ಯವಾಹಿನಿಯಲ್ಲಿ ಕಾರ್ಯನಿರ್ವಹಿಸಿದವರು. ಸಹಕಾರಿ ಕ್ಷೇತ್ರದ ಆಶಯ ಹಾಗೂ ತತ್ವಗಳನ್ನು ಅಧ್ಯಯನ ಮಾಡಿದವರು. ಸಹಕಾರಿ ತತ್ವಗಳಲ್ಲಿ ನಂಬಿಕೆ ಇರುವವರು ತತ್ವಗಳ ಅನುಷ್ಠಾನಕ್ಕೆ ಬದ್ಧರಾಗಿರುವವರು, ಪ್ರಾಥಮಿಕ ಹಂತದಿಂದ ರಾಜ್ಯ ಹಾಗು ರಾಷ್ಟ್ರಮಟ್ಟದವರೆಗೆ ಉತ್ತಮ ಸಹಕಾರಿಯಾಗಿ ಕಾರ್ಯನಿರ್ವಹಿಸಿದ ಅನುಭವಹೊಂದಿದವರಾಗಿರುವುದು ಜೊತೆಗೆ ವಿಧಾನಸಭಾ ಸದಸ್ಯರಾಗಿ 3 ಬಾರಿ ಕಾರ್ಯನಿರ್ವಹಿಸಿರುವುದು ಸಹಕಾರಿ ಕ್ಷೇತ್ರಕ್ಕೆ ಮರುಜೀವ ಬಂದಂತಾಗಿದೆ.

“

# ಸಹಕಾರಿ ಸಮಸ್ಯೆಗಳಿಗೆ ಸ್ಪಂದಿಸುವ, ಸಹಕಾರಿ ಕ್ಷೇತ್ರದ ವಿಶ್ವಾಸಾರ್ಹತೆ ಹೆಚ್ಚಿಸುವ, ಸಹಕಾರಿ ನಾಯಕರುಗಳ ಗೌರವ ಘನತೆಗಳನ್ನು ಎತ್ತಿ ಹಿಡಿಯುವ ಧ್ವನಿ : ಅನುಭವಿ ಹಿರಿಯ ಸಹಕಾರಿ ಶ್ರೀ ಎಸ್.ಟಿ.ಸೋಮಶೇಖರರವರಿಗೆ ಸಹಕಾರ ಸಚಿವ ಪಟ್ಟ : ರಾಜ್ಯದ ಸಹಕಾರಿಗಳಿಗೆ ಸಂತಸ

ರಾಜ್ಯದ ಸಹಕಾರಿ ಬಂಧುಗಳಿಗೆ ಯುಗಾದಿ ಹಬ್ಬದ ಶುಭಾಶಯಗಳು. ಯುಗಾದಿ ಹಬ್ಬವು ಎಲ್ಲ ಸಹಕಾರಿಗಳ ಬಾಳಲ್ಲಿ ಹೊಸ ವರ್ಷಕ್ಕೆ ಹೊಸ ಚೈತನ್ಯವನ್ನು ಹೊಸ ಉತ್ಸಾಹವನ್ನು ತರಲಿ. ಹೊಸ ಸಂವತ್ಸರ ಶಾರ್ವರಿ ನಾಮ ಸಂವತ್ಸರದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಎಲ್ಲ ತೊಂದರೆಗಳು ನಿವಾರಣೆಯಾಗಿ ಅಭಿವೃದ್ಧಿಯತ್ತ ಸಾಗುವ ಸಂಕಲ್ಪವನ್ನು ಮಾಡೋಣ.

ಮಾನ್ಯ ಸಹಕಾರಿಗಳಿಗೆ ರಾಜ್ಯ ಸರಕಾರದ ನೂತನ ಸಹಕಾರ ಮಂತ್ರಿಯಾಗಿ ಹಿರಿಯ ಸಹಕಾರಿ ಮುಖಂಡ ಕರ್ನಾಟಕ ರಾಜ್ಯ ಸಹಕಾರಿ ವಸತಿ ಮಹಾಮಂಡಳದ ಅಧ್ಯಕ್ಷ ಶ್ರೀ ಎಸ್.ಟಿ. ಸೋಮಶೇಖರವರನ್ನು ನೇಮಕ ಮಾಡಿರುವುದಕ್ಕೆ ರಾಜ್ಯದ ಎಲ್ಲ ಸಹಕಾರಿಗಳು ಸಂತಸ ವ್ಯಕ್ತ ಪಡಿಸಿದ್ದಾರೆ. ಕಳೆದ ಹಲವಾರು ವರ್ಷಗಳಿಂದ ಸಹಕಾರಿ ಖಾತೆಗೆ ಒಬ್ಬ ಅನುಭವಿ ಸಹಕಾರಿ ಮುಖಂಡರು ಸಚಿವರಾಗಿ ನೇಮಕವಾಗದಿರುವುದು ಸಹಕಾರಿ ಖಾತೆಯನ್ನು ಸಹಕಾರಿ ಕ್ಷೇತ್ರದ ಆಶಯ ಹಾಗೂ ಸಹಕಾರಿ ತತ್ವಗಳ ಮಾಹಿತಿ ಇಲ್ಲದಿರುವವರಿಗೆ ನೀಡಲಾಗಿತ್ತು. ಹೀಗಾಗಿ ಸಹಕಾರಿ ಕ್ಷೇತ್ರದ ಅಭಿವೃದ್ಧಿಯ ಕಡೆಗೆ ಗಮನ ಕಡಿಮೆಯಾಗಿ ಸಹಕಾರ ಕ್ಷೇತ್ರದ ಆರೋಗ್ಯಕರ ಬೆಳವಣಿಗೆಗೆ ಹಿನ್ನಡೆಯಾಗಿರುವುದನ್ನು ಸಹಕಾರಿ ಕ್ಷೇತ್ರದ ಅನೇಕ ಸಮಸ್ಯೆಗಳು ಸಮಸ್ಯೆಯಾಗಿಯೇ ಉಳಿದಿರುವುದನ್ನು ನಾವುಗಳೆಲ್ಲ ನೋಡಿದ್ದೇವೆ.

ಶ್ರೀಯುತ ಸೋಮಶೇಖರರವರು ಕಳೆದ 25 ವರ್ಷಗಳಿಂದಲೂ ಸಹಕಾರಿ ಕ್ಷೇತ್ರದ ಮುಖ್ಯವಾಹಿನಿಯಲ್ಲಿ ಕಾರ್ಯನಿರ್ವಹಿಸದವರು. ಸಹಕಾರಿ ಕ್ಷೇತ್ರದ ಆಶಯ ಹಾಗೂ ತತ್ವಗಳನ್ನು ಅಧ್ಯಯನ ಮಾಡಿದವರು. ಸಹಕಾರಿ ತತ್ವಗಳಲ್ಲಿ ನಂಬಿಕೆ ಇರುವವರು ತತ್ವಗಳ ಅನುಷ್ಠಾನಕ್ಕೆ ಬದ್ಧರಾಗಿರುವವರು, ಪ್ರಾಥಮಿಕ ಹಂತದಿಂದ ರಾಜ್ಯ ಹಾಗು ರಾಷ್ಟ್ರಮಟ್ಟದವರೆಗೆ ಉತ್ತಮ ಸಹಕಾರಿಯಾಗಿ ಕಾರ್ಯನಿರ್ವಹಿಸಿದ ಅನುಭವ ಹೊಂದಿದವರಾಗಿರುವುದು ಜೊತೆಗೆ ವಿಧಾನಸಭಾ ಸದಸ್ಯರಾಗಿ 3 ಬಾರಿ ಕಾರ್ಯನಿರ್ವಹಿಸಿರುವುದು ಸಹಕಾರಿ ಕ್ಷೇತ್ರಕ್ಕೆ ಮರುಜೀವ ಬಂದಂತಾಗಿದೆ.

ರಾಜ್ಯದ ಎರಡೂ ಸಹಕಾರಿ ಕಾಯ್ದೆಗಳಲ್ಲಿ ಅನೇಕ ತಿದ್ದುಪಡಿಗಳು ಕಳೆದ ಕೆಲವು ವರ್ಷಗಳಿಂದ ಬಾಕಿಇದ್ದು ಸಹಕಾರಿ ಕ್ಷೇತ್ರದ ದಿನ ನಿತ್ಯದ ಆಡಳಿತದಲ್ಲಿ ಕಾರ್ಯಚರಣೆಯಲ್ಲಿ ಆಗುತ್ತಿರುವ ತೊಂದರೆಗಳನ್ನು ಶೀಘ್ರವಾಗಿ ಪರಿಹಾರ ಕಂಡುಕೊಳ್ಳಬೇಕಿದೆ. ಸಹಕಾರಿ ಕ್ಷೇತ್ರದ ಬಗ್ಗೆ ಜನರ ವಿಶ್ವಾಸಾರ್ಹತೆ ಹೆಚ್ಚಿಸಬೇಕಿದೆ. ರಾಜ್ಯದ ಸಹಕಾರಿ ನಾಯಕರುಗಳ ಗೌರವ ಘನತೆಗಳನ್ನು ಎತ್ತಿ ಹಿಡಿಯುವ ಧ್ವನಿ ಇವರದ್ದಾಗಿದೆ. ಸಹಕಾರಿ ಸಂಸ್ಥೆಗಳ ವಿಶೇಷವಾಗಿ ಆದಾಯ ತೆರಿಗೆ ಸಮಸ್ಯೆಗಳ ಬಗ್ಗೆ ಕೇಂದ್ರದವರೊಡನೆ ಸ್ಪಂದಿಸಬಲ್ಲ ಸಮರ್ಥ ಸಹಕಾರಿ ನಾಯಕತ್ವ ನಮ್ಮ ರಾಜ್ಯಕ್ಕೆ ಒದಗಿ ಬಂದಿರುವುದು ನಮಗೆ ಸಮಾಧಾನ ತಂದಿದೆ. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಪರವಾಗಿ ಹಾಗೂ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ ಪರವಾಗಿ ನೂತನ ಸಹಕಾರ ಸಚಿವ ಶ್ರೀ ಎಸ್.ಟಿ.ಸೋಮಶೇಖರರವರಿಗೆ ತುಂಬು ಹೃದಯದ ಅಭಿನಂದನೆಗಳು.

ಸ್ವಾಭಿಮಾನಿ ಸಹಕಾರಿ
ಸಂಪಾದಕ ಮಂಡಳಿ

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಗೌರವ ಅಧ್ಯಕ್ಷರು

ಶ್ರೀ ಜಗದೀಶ ಕವಟಗಿಮಠ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ ಪಾಟೀಲ
ಸಂಪಾದಕರು

ಶ್ರೀ ವಿ.ಜೆ. ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ನಿರ್ಮಾನ ಭವನ", ಡಾ. ರಾಜಕುಮಾರ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು–560010.
ದೂರವಾಣಿ/ ಫ್ಯಾಕ್ಸ್ :
080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop

ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ........................................ 2
ಸಂಪಾದಕೀಯ..................................... 3
ಜ್ಞಾನ ಜ್ಯೋತಿ........................................ 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು ....
............................................... 5–15
ಸೌಹಾರ್ದ ಸಹಕಾರಿಗಳ ಸಮಾಚಾರಗಳು ...
................................................... 16–20
ಲೇಖನ......................................... 21–32

# ಸಂಪಾದಕೀಯ

## ಕಳವಳಕಾರಿ ಬೆಳವಣಿಗೆ ದಮನಕ್ಕೆ ಸಂಯುಕ್ತ ಸಹಕಾರಿಯ ಕಟ್ಟುನಿಟ್ಟಿನ ಕಾನೂನು ಕ್ರಮ

ಸಹಕಾರಿ ಕ್ಷೇತ್ರ ಸಂಖ್ಯಾತ್ಮಕವಾಗಿ ಬೆಳೆಯುತ್ತಿರುವ ಬೆನ್ನಲ್ಲಿಯೇ ಸಹಕಾರಿ ಕ್ಷೇತ್ರದ ಅನೇಕ ಬೆಳವಣಿಗೆಗಳು ಸಹಕಾರಿಗಳಿಗೆ ಕಳವಳವನ್ನುಂಟು ಮಾಡುತ್ತಿರುವುದು ಅತ್ಯಂತ ವಿಷಾದದ ಸಂಗತಿ. ಒಂದಾದ ಮೇಲೊಂದರಂತೆ ಸಹಕಾರಿ ಬ್ಯಾಂಕುಗಳು ಸಹಕಾರಿ ಕ್ರೆಡಿಟ್ ಸಹಕಾರ ಸಂಸ್ಥೆಗಳು, ಸೌಹಾರ್ದ ಸಹಕಾರಿ ಸಂಸ್ಥೆಗಳು, ವಿಧವಿಧವಾದ ಆಸೆಗಳನ್ನು ಸದಸ್ಯರಲ್ಲಿ ತುಂಬಿ ಠೇವಣಿಗಳನ್ನು ಸಂಗ್ರಹಿಸಿ, ಸಂಗ್ರಹಿಸಿದ ಠೇವಣಿಯನ್ನು ಕಾನೂನಾತ್ಮಕವಾಗಿ ಉಪಯೋಗಿಸದೆ ತಮಗೆ ಇಷ್ಟ ಬಂದಹಾಗೆ ಉಪಯೋಗಿಸಿ ಸದಸ್ಯರ ಠೇವಣಿಗೆ ಭದ್ರತೆ ಇಲ್ಲದ ಹಾಗೆ ಮಾಡುತ್ತಿರುವುದು ಠೇವಣಿದಾರರು ತಮ್ಮ ಹಣಕ್ಕಾಗಿ ಸೌಹಾರ್ದ ಸಹಕಾರಿಗಳಿಗೆ ಹಾಗೂ ಸಹಕಾರಿ ಬ್ಯಾಂಕುಗಳಿಗೆ ಪರದಾಡುವ ಸ್ಥಿತಿಗೆ ಬಂದಿರುವುದು ಕಳವಳಕಾರಿ ಬೆಳವಣಿಗೆ.

ಈ ಬೆಳವಣಿಗೆಯನ್ನು ಸಂಯುಕ್ತ ಸಹಕಾರಿಯು ಸಹಿಸುವುದಿಲ್ಲ. ಯಾವುದೇ ಕಾರಣಕ್ಕೂ ಠೇವಣಿದಾರರಿಗೆ ಅನ್ಯಾಯವಾಗದ ಹಾಗೆ ಅಗತ್ಯವೆನಿಸುವ ಕಾನೂನಿನ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳಲು ಸಂಯುಕ್ತ ಸಹಕಾರಿ ಬದ್ಧವಾಗಿದೆ. ವಿಷಯಗಳನ್ನು ರಾಜ್ಯದ ಸಹಕಾರಿಗಳ ನಿಬಂಧಕರ ಹಂತದಲ್ಲಿ ಹಾಗೂ ಸರಕಾರದ ಹಂತದಲ್ಲಿ ಚರ್ಚೆ ನಡೆಸಲಾಗಿದೆ. ಈ ರೀತಿ ಕಾರ್ಯನಿರ್ವಹಿಸುವ ಆಡಳಿತ ಮಂಡಳಿಯವರ ಮೇಲೆ ಕಠಿಣ ಕ್ರಮಗಳನ್ನು ಜರುಗಿಸುವುದು ಖಂಡಿತ ಮತ್ತು ಸದಸ್ಯರ ಹಿತ ಕಾಪಾಡುವುದಕ್ಕೆ ಮೊದಲ ಆದ್ಯತೆ.

ಒಂದೆರಡು ಬ್ಯಾಂಕುಗಳು ಹಾಗೂ ಒಂದೆರಡು ಸೌಹಾರ್ದ ಸಹಕಾರಿ ಸಂಸ್ಥೆಗಳು ಸದಸ್ಯರ ನಂಬಿಕೆಗೆ ದ್ರೋಹವನ್ನು ಮಾಡಿವೆ. ಸದಸ್ಯರನ್ನು ನಂಬಿಸಿ ವಿವಿಧ ರೀತಿಯ ಆಸೆ ಆಮಿಷಗಳನ್ನು ತೋರಿಸಿ ಠೇವಣಿಗಳನ್ನು ಸಂಗ್ರಹಿಸುವ ವಿಧಾನವನ್ನು ಅನುಸರಿಸಿರುವುದನ್ನು ಸಂಯುಕ್ತ ಸಹಕಾರಿಯು ಖಂಡಿಸುತ್ತದೆ. ರಿಸರ್ವ ಬ್ಯಾಂಕಿನವರೂ ಸಹ ಈ ಬಗ್ಗೆ ಪತ್ರವನ್ನು ಬರೆದಿದ್ದು ಈ ಪತ್ರದ ಆಧಾರದ ಮೇಲೆ ಸಂಯುಕ್ತ ಸಹಕಾರಿಯೂ ಸಹ ರಾಜ್ಯದ ಎಲ್ಲ ಸಹಕಾರಿಗಳಿಗೆ ಸುತ್ತೋಲೆ ಮೂಲಕ ಎಚ್ಚರಿಕೆ ನೀಡುತ್ತ ಬಂದಿದೆ. ಮತ್ತು ಪ್ರತಿಯೊಂದು ಸಭೆ ಸಮಾರಂಭಗಳಲ್ಲಿ ತರಬೇತಿ ಕಾರ್ಯಕ್ರಮಗಳಲ್ಲಿ ಈ ಬಗ್ಗೆ ತಿಳುವಳಿಕೆ ನೀಡುತ್ತ ಬಂದಿದೆ.

ಸದಸ್ಯರ ಸಕ್ರೀಯ ಪಾಲ್ಗೊಳ್ಳುವಿಕೆಯ ಅಭಾವದಿಂದಾಗಿ ಆಡಳಿತ ಮಂಡಳಿಯವರು ಆಡಿದ್ದೇ ಆಟವಾಗಬಾರದು. ಸದಸ್ಯರು ಸಹಕಾರಿಯ ಆಡಳಿತ ವ್ಯವಸ್ಥೆಯ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸುವುದು ಅಗತ್ಯ. ಸಂಯುಕ್ತ ಸಹಕಾರಿಯ ಈ ಬಾರಿಯ ಘೋಷವಾಕ್ಯ **"ಸೌಹಾರ್ದ ಸಹಕಾರಿಗಳ ನಡೆ ಗುಣಮಟ್ಟದ ಕಡೆಗೆ"** ಎಂಬುದನ್ನು ಕಟ್ಟುನಿಟ್ಟಾಗಿ ಪಾಲಿಸಲು ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಸಹಕಾರ ನೀಡುವುದು ಮತ್ತು ಸಹಕಾರಿ ಕ್ಷೇತ್ರದ ವಿಶ್ವಾಸಾರ್ಹತೆಯನ್ನು ಹೆಚ್ಚಿಸುವುದು ಸದಸ್ಯರಿಗೆ ಹಾಗೂ ಠೇವಣಿದಾರರಿಗೆ ಅನ್ಯಾಯವಾಗದಂತೆ ಕ್ರಮವಿಡುವುದು ಇಂದಿನ ಅವಶ್ಯಕತೆ.

ಶ್ರೇಣಿ 46



## ಜ್ಞಾನ ಜ್ಯೋತಿ

ಎಂ .ಬಸಪ್ಪ, ಸಹಕಾರ ಸಂಘಗಳ
ನಿವೃತ್ತ ಉಪನಿಬಂಧಕರು, ಬೆಂಗಳೂರು.

## "ಮಾತಲ್ಲಿ ಸತ್ಯವಿರಲಿ, ಮೊಗದಲ್ಲಿ ನಗುವಿರಲಿ"

ಆಧುನಿಕ ಜಗತ್ತಿನ ಬಾಹ್ಯ ಆಕರ್ಷಣೆಗೊಳಗಾಗಿರುವ ಇಂದಿನ ನಾವುಗಳು ಸುಖವನ್ನರಸುತ್ತಾ ಅತ್ಯಾಧುನಿಕ ಟಿವಿ, ಬಹುಕೋಟಿ ಮೌಲ್ಯದ ಸುಸಜ್ಜಿತ ಕಾರು, ಬೆಲೆ ಬಾಳುವ ಉಡುಪು, ಒಡವೆಗಳು ಹಾಗೂ ವೈಭವೋಪೇತ ಗೃಹ ಇತ್ಯಾದಿಗಳನ್ನು ಹೊಂದಿದ್ದರೂ ಸುಖಶಾಂತಿ ನೆಮ್ಮದಿಗಳಿಂದ ದೂರವೇ ಉಳಿಯುತ್ತಿದ್ದು ಮುಖದಲ್ಲಿ ಸಿಡುಕು, ಅಸಹನೆ ಆಡುವ ಮಾತಿನಲ್ಲಿ ಸುಳ್ಳು, ಠಕ್ಕು, ಕೊಳ್ಳುಬಾಕುತನ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಹಾಗೂ ಜಗಳವೇ ಜಗದ ಜನರ ಜಾಯಮಾನವೆನಿಸಿರುವ ಅಂಶವನ್ನು ಅಂದೇ ಗಮನಿಸಿದ್ದ ಆಧ್ಯಾತ್ಮ ಕವಿ ಡಿ.ವಿ.ಜಿ ಯವರು ಹೊರಗಿನ ವಸ್ತುಗಳ ಸಂಗ್ರಹಣೆಯಿಂದ ಸುಖಶಾಂತಿ ನೆಮ್ಮದಿ ಸಿಗದು, ಬದಲಾಗಿ ಆಡುವ ಮಾತಿನಲ್ಲಿ ಸತ್ಯಸಂಧತೆಯಿರಲಿ, ವದನದಲ್ಲಿ ಮಂದಹಾಸ ಹೊರಸೂಸುತ್ತಿರಲಿ. ಸುಖಾನುಭವದ ಕೋರಿಕೆಯಲ್ಲೂ ಮಿತಿಗಳಿರಲೆಂಬ ಹಾಗೂ ಅತಿಯಾದ ಉದ್ವೇಗ ಯಾವುದೇ ಕಾರಣಕ್ಕೂ ಬೇಡವೆಂಬ ಹಿತವಚನದ ಸುಂದರ ಸಂದೇಶವನ್ನು ನಮಗೆ ದೊರಕಿಸಿಕೊಟ್ಟಿದ್ದಾರೆ. ಆ ಪದ್ಯದ ಸೌಂದರ್ಯ, ಲಯ ಬದ್ಧತೆಗಳನ್ನು ನೋಡಿದರೆ ಇವುಗಳನ್ನು ಪಾಲಿಸಬೇಕೆಂಬ ಆಸೆ ಎಲ್ಲರಲ್ಲಿಯೂ ಮೂಡುವುದರಲ್ಲಿ ಸಂಶಯವಿಲ್ಲ.

ಸ್ಮಿತವಿರಲಿ ವದನದಲಿ ಕಿವಿಗೆ ಕೇಳಿಸದಿರಲಿ
ಹಿತವಿರಲಿ ವಚನದಲಿ ಋತವ ಬಿಡದಿರಲಿ
ಮಿತವಿರಲಿ ಮನಸಿನುದ್ವೇಗದಲಿ ಭೋಗದಲಿ
ಅತಿ ಬೇಡವೆಲ್ಲಿಯುಂ ॥ಮಂಕುತಿಮ್ಮ॥

ದೇವತೆಗಳ ಭಾವಚಿತ್ರಗಳನ್ನು ನಾವು ವೀಕ್ಷಿಸಿದಲ್ಲಿ ಅವರ ಮುಖವು ಮಂದಹಾಸದಿಂದ ಹೊರಸೂಸುತ್ತಿರುತ್ತದೆ. ನಗುವೆಂದರೆ ದೈತ್ಯ ಪಾತ್ರದಾರಿಯ ಗಹಗಹಿಸುವ ಕೇಕೆಯಾಗಿರಕೂಡದು. ನಗುವಿನ ಭಾವ ಹೊಂದಿದವರ ಕಿವಿಗೂ ಸಹ ಕೇಳಿಸದಂಥಹ ನಗುವದಾಗಿರಬೇಕು. ಇಂದಿನ ಜನರ ಮೊಗದಲ್ಲಿ ನಗುವೇ ಇರದೆ ನಗಿಸಲೋಸುಗವೇ 'ನಗೆಜಾಗರಣೆ' ಹಾಸ್ಯಸಂಭ್ರಮ' ಕಾರ್ಯಕ್ರಮಗಳನ್ನು ಹುಟ್ಟು ಹಾಕಿ ಬಲವಂತದಿಂದ ನೋಡಬೇಕಾದ ಸ್ಥಿತಿಯೊದಗಿದೆ ಎಂಬುದರ ಅರಿವು ಮೂಡುತ್ತದೆ. ಆಡುವ ಮಾತಿನಲ್ಲೋ ಹಿತವೆಂಬುದರ ಅಂಶವೂ ಇಲ್ಲದೇ ಸತ್ಯರಹಿತವಾಗಿದೆ. ಆಸೆಗಳ ಸುರಿಮಳೆಯೇ ಅಸಂಖ್ಯಾತವಾಗಿ ಬೆಳೆದು ಯಾವುದನ್ನು ಪಡೆದುಕೊಂಡರೂ ನೆಮ್ಮದಿಯಿಲ್ಲ. ಇನ್ನಷ್ಟು ಬೇಕೆಂದು ದುಂಬಾಲು ಬೀಳುವ ಸಾದೃಶ್ಯತೆಯೇ ಕಾಣಸಿಗುತ್ತದೆ. ಬೇಕಾದ್ದಕ್ಕಿಂತ ಹೆಚ್ಚಿನದನ್ನು ಪಡೆಯುವ ಈ ಆಸೆಬುರುಕುತನ ಎಲ್ಲರಲ್ಲಿಯೂ ನೈತಿಕ ಬಡತನವನ್ನು ಸೃಷ್ಟಿಸಿದೆ.

ಕೊಡುವ ಭಗವಂತನು ಬಡವನಲ್ಲ. ಪಡೆವ ನಾವು ನಮ್ಮ ನಮ್ಮ ಮನಸ್ಥಿತಿಯಿಂದ ದಿನದಿಂದ ದಿನಕ್ಕೆ ದೈನ್ಯತೆಯತ್ತ ಸಾಗುತ್ತಿದ್ದೇವೆ. ಇದನ್ನು ಬಿಟ್ಟು ನಾವೆಲ್ಲರೂ ಒಂದು ಸಂಸಾರದ ಸದಸ್ಯರು, ಸಿಕ್ಕದ್ದೆಲ್ಲವನ್ನು ಎಲ್ಲರೂ ಹಂಚಿ ತಿನ್ನೋಣ ನಗುನಗುತ್ತಾ ಬಾಳೋಣ, ವೈರಮತ್ಸರಗಳನ್ನು ದೂರವಿಡೋಣ ಎನ್ನುತ್ತಾ ಬದುಕನ್ನು ನಡೆಸಿದಲ್ಲಿ ನಿಜಕ್ಕೂ ನಮ್ಮಗಳ ಮನದಾಳದಲ್ಲಿ ಶಾಂತಿಯೇರ್ಪಟ್ಟು ಮೊಗದಲ್ಲಿ ನಗುವೂ ವಚನದಲಿ ಸತ್ಯವೂ ಬಯಕೆಗಳಲ್ಲಿ ಮಿತಿಯೂ ತಲೆದೋರಿ ಶಾಂತಿಯ ಜಗತ್ತು ನಿರ್ಮಾಣವಾಗಿರುತ್ತದೆ. ಇಂಥಹ ಒಂದು ಸುಸ್ಥಿಯ ಜಗತ್ತನ್ನು ನಿರ್ಮಿಸಲು ಈ ಮೇಲಿನ ಪದ್ಯವು ನೀಡುವ ಸಂದೇಶವು ದಾರಿದೀಪವಾಗಲೆಂದು ಭಗವಂತನನ್ನು ಪ್ರಾರ್ಥಿಸೋಣ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಬೆಳಗಾವಿ:–8,487, ಬೆಂಗಳೂರು:–1,913, ಮೈಸೂರು:–922 ಹಾಗೂ ಕಲಬುರಗಿ:–2,078 ವಿಭಾಗಗಳಿಂದ ದಾಖಲಾದ ದಾವಾ ಪ್ರಕರಣಗಳ ಒಟ್ಟು 13,400 ಆಗಿರುತ್ತದೆ. ಇವುಗಳ ಪೈಕಿ 6,222 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 7,178.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 2,410 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 224 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 146 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 2040 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 998 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 91 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 80 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 827 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ.

## ಸಹಕಾರ ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ ರವರಿಗೆ ಅಭಿನಂದನೆ



ಬೆಂಗಳೂರು : ದಿನಾಂಕ 13.02.2020 ರಂದು ನೂತನ ಸಹಕಾರ ಸಚಿವರಾದ ಶ್ರೀ ಎಸ್.ಟಿ ಸೋಮಶೇಖರ ಇವರಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಟಿ ಹೆಚ್ ಕೃಷ್ಣಾರೆಡ್ಡಿ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ಭೇಟಿ ಮಾಡಿ ಅಭಿನಂದನೆ ಸಲ್ಲಿಸಿದರು.

## ಸಹಕಾರ ಸಚಿವ ಶ್ರೀ ಎಸ್.ಟಿ ಸೋಮಶೇಖರ ಇವರ ಪರಿಚಯ


ರಾಮನಗರ ಜಿಲ್ಲೆ ಚನ್ನಪಟ್ಟಣ ತಾಲೂಕು ಶೆಟ್ಟಹಳ್ಳಿ ತಿಮ್ಮೇಗೌಡರ ಮಗನಾದ ಎಸ್.ಟಿ. ಸೋಮಶೇಖರ್ ರಾಜಕೀಯದಲ್ಲಿ ಬೆಳೆದದ್ದು ಒಂದು ವಿಸ್ಮಯ. ಸಹಕಾರ ಕ್ಷೇತ್ರದ ಅದ್ಭುತ ಸಂಘಟನಾಕಾರ, ನಿವೃತ್ತ ಜಿಲ್ಲಾಧಿಕಾ–ರಿಯಾಗಿದ್ದ ಬಿ.ಎಲ್ ಲಕ್ಕೇಗೌಡರು 1998ರಲ್ಲಿ ವಿಧಾನಪರಿಷತ್ ಚುನಾವಣೆಗೆ ಸ್ಪರ್ಧಿಸಿದ್ದರು. ಆ ಚುನಾವಣೆಯ ಪ್ರಚಾರ ಕಾರ್ಯದಲ್ಲಿ ತೊಡಗಿಕೊಂಡವರಿಗೆ ಎಸ್.ಟಿ ಸೋಮಶೇಖರ್ ಪರಿಚಯವಾದರು. ಆ ಚುನಾವಣೆಯಲ್ಲಿ ಲಕ್ಕೇಗೌಡರು ಸೋತರು. ಆ ಸೋಲು ಅವರು ಬೆಂಗಳೂರು 2 ಜಿಲ್ಲೆಗಳ ಪದವೀಧರರ ಪತ್ತಿನ ಸಹಕಾರ ಸಂಘವನ್ನು ಹುಟ್ಟುಹಾಕುವ ಘಟನೆಗೆ ಸಾಕ್ಷಿಯಾಯಿತು.

ಆ ಸಂಘಕ್ಕೆ ಸಂಸ್ಥಾಪಕ ಕಾರ್ಯದರ್ಶಿಯನ್ನಾಗಿ ಎಸ್.ಟಿ. ಸೋಮಶೇಖರ್ ಅವರನ್ನು ನೇಮಿಸಿದರು. ಈ ಮೂಲಕ ಸಹಕಾರ ರಂಗವನ್ನು ಪ್ರವೇಶಿಸಿದ ಎಸ್.ಟಿ. ಸೋಮಶೇಖರ 1992ರಲ್ಲಿ ಭಾರತ ಹೌಸಿಂಗ್ ಕೋ–ಆಪರೇಟಿವ್ ಸಂಘದ ನಿರ್ದೇಶಕರಾದರು. ಆ ಸಂಘದಲ್ಲೂ ಗೌರವ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸಿದರು. ಅದೇ ಸಂಘಕ್ಕೆ ಎರಡು ಬಾರಿ ಅಧ್ಯಕ್ಷರಾದರು. ಅಲ್ಲಿಂದ ಅವರು ಸಹಕಾರಿ ವಸತಿ ವಲಯದ ಉನ್ನತ ಸಂಸ್ಥೆಯಾದ ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳದಲ್ಲಿ 16 ವರ್ಷಗಳಿಂದಲೂ ತನ್ನ ಹಿಡಿತವನ್ನೂ ಸಾಧಿಸಿ ಸತತವಾಗಿ ಅಧ್ಯಕ್ಷರಾಗಿದ್ದಾರೆ.

ಅಲ್ಲದೆ ಭಾರತ್ ಕೋ ಆಪರೇಟಿವ್ ಬ್ಯಾಂಕ್, ಜಿಲ್ಲಾ ಸಹಕಾರಿ ಯೂನಿಯನ್ ನಿರ್ದೇಶಕರಾಗಿಯೂ, ಹಾಗೂ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಲದಲ್ಲಿ ಹಿರಿಯ ನಿರ್ದೇಶಕರಾಗಿದ್ದು, ಮಹಾಮಂಡಳದ ತಮ್ಮ ಹಿಡಿತವನ್ನು ಇಟ್ಟುಕೊಂಡಿದ್ದಾರೆ, ಇದು ಲಕ್ಕೇಗೌಡರ ನೀಲಿಕಣ್ಣಿನ ಹುಡುಗ ಸೋಮಶೇಖರ್ ಸಹಕಾರಿ ಕ್ಷೇತ್ರದಲ್ಲಿ ಬೆಳೆದು ಬಂದ ಪರಿ.

ಯಶವಂತಪುರ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದಿಂದ ಎರಡು ಸಲ ಸೋತರು. ಕ್ಷೇತ್ರದಲ್ಲಿ ಬೇರುಮಟ್ಟದ ಕಾರ್ಯಕರ್ತರನ್ನು ಕಟ್ಟಿಕೊಂಡು ಮೂರು ಬಾರಿ ಗೆಲುವು ಸಾಧಿಸುವ ಮೂಲಕ ವಿಧಾನ ಸಭಾ ಪ್ರವೇಶಿಸಿ ತಮ್ಮ ಪ್ರಭಾವ ಗಳಿಸಿಕೊಂಡವರು. ಸಹಕಾರ ಮತ್ತು ರಾಜಕೀಯ ಎರಡು ಕ್ಷೇತ್ರಗಳನ್ನು ಮೆಟ್ಟಿಲುಗಳನ್ನಾಗಿ ಮಾಡಿಕೊಂಡವರು.

### ಸಹಕಾರ ಸಚಿವರ ಆಪ್ತ ಕಾರ್ಯದರ್ಶಿಯಾಗಿ ಅಪರ ನಿಬಂಧಕರಾದ ಶ್ರೀ ಕೆ.ಎಸ್. ನವೀನ್



ಸಹಕಾರ ಸಚಿವರ ಆಪ್ತ ಕಾರ್ಯದರ್ಶಿಯಾಗಿರುವ ಕೆ.ಎಸ್. ನವೀನ್ ಇವರು ಅನುಭವವುಳ್ಳ ಅಧಿಕಾರಿ ಇವರು ಹಾಸನ ಜಿಲ್ಲೆಯ ಶಾಂತಿ ಗ್ರಾಮದವರು. ಬಿ.ಇ. ಪದವೀಧರರು. 1997ರಲ್ಲಿ ಕರ್ನಾಟಕ ಲೋಕಸಭಾ ಆಯೋಗದ ಪರೀಕ್ಷೆಯಲ್ಲಿ ಪಾಸುಮಾಡಿ ಎ.ಆರ್.ಸಿ.ಎಸ್ ಆಗಿ ಸಹಕಾರ ಇಲಾಖೆ ಸೇವೆಗೆ ಸೇರಿದವರು. ಬೆಂಗಳೂರಿನ ನಿಬಂಧಕರ ಕಛೇರಿಯಲ್ಲಿ ಹೆಚ್ಚು ಸೇವೆ ಸಲ್ಲಿಸಿದವರು. ಈ ಹಿಂದೆ ಇವರಿಗೆ ಹಿರಿಯ ಸಹಕಾರಿ ಜಿ.ಟಿ. ದೇವೇಗೌಡ ಸಹಕಾರ ಸಚಿವರಾಗಿದ್ದಾಗ ಅವರ ಆಪ್ತ ಕಾರ್ಯದರ್ಶಿಯಾಗಿ ಕೆಲಸ ಮಾಡಿರುವ ಅನುಭವವಿದೆ. ಪ್ರಸ್ತುತ ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದಲ್ಲಿ ಬೆಂಗಳೂರು ಪ್ರಾಂತ್ಯದ ಪಂಚಾಯತ್ ನ್ಯಾಯಾಲಯದಲ್ಲಿ ಅಪರ ನಿಬಂಧಕರಾಗಿದ್ದರು ಹಾಗೂ ಸಹಕಾರ ಇಲಾಖೆಯ ರಾಜ್ಯ ಪತ್ರಾಂಕಿತ ಅಧಿಕಾರ ಸಂಘದ ಅಧ್ಯಕ್ಷರಾಗಿದ್ದಾರೆ.

# Autonomous Cooperative : Myth or Reality

## ಐಎಸ್‌ಎಸ್‌ಸಿ 35ನೇ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಸಂಯುಕ್ತ ಸಹಕಾರಿಯಿಂದ ಸಂಶೋಧನಾ ವರದಿ ಮಂಡನೆ.



ಇಂಡಿಯನ್ ಸೋಸೈಟಿ ಫಾರ್ ಸ್ಟಡೀಸ್ ಇನ್ ಕೋ–ಆಪರೇಷನ್, ಪುಣೆ ಇವರ 35ನೇ ಅಂತರರಾಷ್ಟ್ರೀಯ ಸಮ್ಮೇಳನವನ್ನು ದಿನಾಂಕ 28 ಹಾಗೂ 29ನೇ ಫೆಬ್ರವರಿ 2020ರಂದು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಬ್ಯಾಂಕ್ ಮೇನೆಜ್‌ಮೆಂಟ್ (ಐಐಬಿಎಂ) ಖಾನಾಪುರ, ಜವಹರನಗರ, ಗುವಾಹಟಿ (ಅಸ್ಸಾಂ) ಇಲ್ಲಿ ಆಯೋಜಿಸಲಾಗಿತ್ತು. ಈ ಸಮ್ಮೇಳನದ ಉದ್ಘಾಟನೆಯನ್ನು ಶ್ರೀ ಎಸ್. ಎಸ್. ಸಹಾ, ವ್ಯವಸ್ಥಾಪಕರು, ನ್ಯಾಷನಲ್ ಬ್ಯಾಂಕ್ ಫಾರ್ ಅಗ್ರಿಕಲ್ಚರ್ ಅಂಡ್ ರೂರಲ್ ಡೆವಲಪ್‌ಮೆಂಟ್ (ನಬಾರ್ಡ್), ಗುವಾಹಟಿ ಇವರು ನೆರವೇರಿಸಿದರು. ಸಮ್ಮೇಳನದ ಪ್ರಧಾನ ವಿಷಯವನ್ನು ರಿಸರ್ವ್ ಬ್ಯಾಂಕಿನ ನಿರ್ದೇಶಕರಾದ ಶ್ರೀ ಸತೀಶ ಮರಾಠೆ ಇವರು ಮಂಡಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಇಂಡಿಯನ್ ಸೋಸೈಟಿ ಫಾರ್ ಸ್ಟಡೀಸ್ ಇನ್ ಕೋ–ಆಪರೇಷನ್ ಪುಣೆ ಇದರ ಅಧ್ಯಕ್ಷರಾದ ಶ್ರೀ ಘನಶ್ಯಾಮಬಾಯಿ ಅಮೀನ್‌ರವರು ವಹಿಸಿಕೊಂಡಿದ್ದರು. ವಂದನಾರ್ಪಣೆಯನ್ನು ಐಐಬಿಎಂ ನಿರ್ದೇಶಕರಾದ ಡಾ. ಕೆ. ರಮೇಶ ಇವರು ನಡೆಸಿಕೊಟ್ಟರು. Autonomous Cooperative : Myth or Reality ಎನ್ನುವುದು ಈ ಸಮ್ಮೇಳನದ ಪ್ರಧಾನ ವಿಷಯವಾಗಿತ್ತು.

ಹಲವು ರಾಜ್ಯಗಳ ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಿ ತಮ್ಮ ಸಂಶೋಧನಾ ವರದಿಗಳನ್ನು/ಪ್ರಬಂಧಗಳನ್ನು ಮಂಡಿಸಿದರು. ಸಂಯುಕ್ತ ಸಹಕಾರಿಯಿಂದ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು Autonomous Cooperative are Reality ಎನ್ನುವ ಕುರಿತು ಸೌಹಾರ್ದ ಸಹಕಾರ ಕ್ಷೇತ್ರವನ್ನು ಆಧಾರವಾಗಿರಿಸಿಕೊಂಡ ಸಂಶೋಧನಾ ವರದಿಯನ್ನು ಮಂಡಿಸಿದರು.

ಈ ಸಮ್ಮೇಳನದಲ್ಲಿ ಸಂಯುಕ್ತ ಸಹಕಾರಿಯಿಂದ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತೀಕರ, ಶ್ರೀ ಪ್ರಸನ್ನ ಕುಮಾರ್, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ, ಶ್ರೀ ಶ್ರೀಕಾಂತ ಬರುವೆ ಹಾಗೂ ಶ್ರೀ ರಘುನಂದನ ಇವರು ಭಾಗವಹಿಸಿದ್ದರು.




ಕಾರ್ಯಕ್ರಮದಲ್ಲಿ ಭಾಗವಹಿಸಿದ ಆರ್.ಬಿ.ಐ ನಿರ್ದೇಶಕರಾದ ಶ್ರೀ ಸತೀಶ್ ಮರಾಠೆ, ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ, ಶ್ರೀ ಪ್ರಸನ್ನ ಕುಮಾರ್, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಹಾಗೂ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ, ಶ್ರೀ ಶ್ರೀಕಾಂತ ಬರುವೆ, ಶ್ರೀ ರಘುನಂದನ್ ಕೆ.

## ಸನ್ಮಾನ



**ಕಲಬುರಗಿ** : ಸಹಕಾರ ಕ್ಷೇತ್ರದಲ್ಲಿನ ಸಾಧನೆಗಾಗಿ ವಾಸವಿ ಜೀವಮಾನ ಸಾಧನೆ ಪ್ರಶಸ್ತಿ 2019 ಪಡೆದ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ತಿಮ್ಮಯ್ಯ ಶೆಟ್ಟಿ ಇವರನ್ನು ದಿನಾಂಕ 03.02.2020ರಂದು ಸಿದ್ಧಿವಿನಾಯಕ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ ಕಲುಬುರಗಿ ಪ್ರಾಂತದ ನಿರ್ದೇಶಕರ ವತಿಯಿಂದ ಹಾಗೂ ಪ್ರಾಂತೀಯ ಸಿಬ್ಬಂದಿಗಳ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

# ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೆಜ್‌ಮೆಂಟ್ ಡಿಪ್ಲೋಮಾ ಕೋರ್ಸ್‌ನ 2ನೇ ತಂಡದ ಪ್ರಥಮ ಸಂಪರ್ಕ ವರ್ಗ ತರಬೇತಿ ಕಾರ್ಯಕ್ರಮದ ಉದ್ಘಾಟನೆ

## ಬೆಂಗಳೂರು ಕೇಂದ್ರ



**ಬೆಂಗಳೂರು:** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಜನವರಿ 2020ರಿಂದ ಪ್ರಾರಂಭಿಸಿರುವ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೆಜ್‌ಮೆಂಟ್ ಡಿಪ್ಲೋಮಾ ದೂರ ಶಿಕ್ಷಣ ಕುರಿತಾದ ಮೊದಲನೆಯ ಸಂಪರ್ಕ ತರಗತಿಯು ದಿನಾಂಕ 15 ಹಾಗೂ 16ನೇ ಫೆಬ್ರವರಿ 2020ರಂದು "ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ" ಬೆಂಗಳೂರು ಇಲ್ಲಿ ಜರುಗಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ಎಲ್ಲಾ ಮುಖ್ಯ ಅತಿಥಿಗಳಿಂದ ನೆರವೇರಿಸಲಾಯಿತು. ಇದೇ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ನಿರ್ದೆಶಕರಾದ ಶ್ರೀ ಬಿ.ಎಸ್.ಗುಂಡುರಾವ್ ಹಾಗೂ ವ್ಯವಸ್ಥಾಪಕ ನಿರ್ದೆಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣ ಸಂಸ್ಥೆಯ ನಿವೃತ್ತ ನಿರ್ದೆಶಕರಾದ ಡಾ.ಎಸ್.ಎ.ಸಿದ್ಧಾಂತಿ ಇವರು ಎರಡನೇ ತಂಡದ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್, ದೂರ ಶಿಕ್ಷಣ ಕೋರ್ಸ್‌ನ ಅಧ್ಯಯನ ಸಾಹಿತ್ಯವನ್ನು ಬಿಡುಗಡೆಗೊಳಿಸಿದರು.

ಸಂಯುಕ್ತ ಸಹಕಾರಿಯ ನಿರ್ದೆಶಕರಾದ ಶ್ರೀ ಬಿ.ಎಸ್.ಗುಂಡುರಾವ್‌ರವರು ಮಾತನಾಡಿ ಸಂಯುಕ್ತ ಸಹಕಾರಿ ವತಿಯಿಂದ ನೂತನವಾಗಿ ಸಹಕಾರ ಹಾಗೂ ಬ್ಯಾಂಕಿಂಗ್ ಮೆನೆಜ್‌ಮೆಂಟ್ ಡಿಪ್ಲೋಮಾ ಕೋರ್ಸ್‌ನ್ನು 2019ರಲ್ಲಿ ಪ್ರಾರಂಭಿಸಲಾಗಿದ್ದು ಮೊದಲನೇ ತಂಡದಲ್ಲಿ 181 ಅಭ್ಯರ್ಥಿಗಳು ಭಾಗವಹಿಸಿದ್ದು ಮೊದಲನೇ ತಂಡವನ್ನು ಯಶಸ್ವಿಯಾಗಿ ಪೂರ್ಣಗೊಳಿಸಲಾಗಿದೆ. ಈಗ ಎರಡನೇ ತಂಡವನ್ನು ಇದೇ ಜನವರಿ 2020ರಿಂದ ಪ್ರಾರಂಭಿಸಲಾಗಿದ್ದು ಎಲ್ಲಾ ಉಪಯುಕ್ತವಾದ ವಿಷಯಗಳನ್ನು ಒಳಗೊಂಡಿದೆ ಎಲ್ಲರಿಗೂ ಪ್ರಯೋಜನವಾಗಲಿದೆ ಎಂದು ತಿಳಿಸಿದರು. ನಂತರ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೆಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು, ಸಂಯುಕ್ತ ಸಹಕಾರಿಯು ಪ್ರಾರಂಭಿಸಿರುವ ಸಹಕಾರ ಹಾಗೂ ಬ್ಯಾಂಕಿಂಗ್ ಮೆನೆಜ್‌ಮೆಂಟ್ ಡಿಪ್ಲೋಮಾ ಕೋರ್ಸ್‌ನ ಮೊದಲನೇ ತಂಡವನ್ನು ಯಶಸ್ವಿಯಾಗಿ ಬೆಂಗಳೂರು ಹಾಗೂ ಬೆಳಗಾವಿ ಕೇಂದ್ರಗಳಲ್ಲಿ ಪೂರ್ಣಗೊಳಿಸಲಾಗಿದೆ. ಎರಡನೇ ತಂಡದಲ್ಲಿ ಬೆಂಗಳೂರು, ಬೆಳಗಾವಿ, ಮುಧೋಳ, ರಾಯಚೂರು ಹಾಗೂ ಶಿವಮೊಗ್ಗ ಕೇಂದ್ರಗಳಲ್ಲಿ ನಡೆಸಲಾಗುತ್ತಿದೆ ಎಂದು ತಿಳಿಸಿದರು. ಎರಡನೇ ತಂಡದಲ್ಲಿ ಒಟ್ಟು 271 ಅಭ್ಯರ್ಥಿಗಳು ಪ್ರವೇಶಪಡೆದಿದ್ದಾರೆ ಎಂದು ತಿಳಿಸಿದರು. ಡಿಸಿಬಿಎಂ ಕೋರ್ಸ್ ಒಟ್ಟು 6 ವಿಷಯಗಳನ್ನು ಒಳಗೊಂಡಿದ್ದು, ಒಂದು ಕೇಸ್ ಸ್ಟಡೀಸ್‌ಅನ್ನು ಒಳಗೊಂಡಿದ್ದು, ಸಂಪರ್ಕ ವರ್ಗ ತರಗತಿಗಳಿಗೆ ಕಡ್ಡಾಯವಾಗಿ ಹಾಜರಾಗುವುದರ ಬಗ್ಗೆ ತಿಳಿಸಿದರು, ಡಿಸಿಬಿಎಂ ಕೋರ್ಸ್‌ನ ಪಠ್ಯಕ್ರಮವನ್ನು ಅನುಭವ ಹಾಗೂ ವಿಷಯ ತಜ್ಞರುಗಳಿಂದ ಸಿದ್ಧಪಡಿಸಲಾಗಿದ್ದು ಇದು ಎಲ್ಲಾ ಅಭ್ಯರ್ಥಿಗಳಿಗೂ ಅನುಕೂಲವಾಗುವಂತೆ ಇದೆ ಎಂದು ತಿಳಿಸಿದರು.

ಉದ್ಘಾಟನಾ ಕಾರ್ಯಕ್ರಮದ ನಂತರ, ಮೊದಲ ಭಾಗವನ್ನು ಡಾ.ಎಸ್.ಎ.ಸಿದ್ಧಾಂತಿರವರು ನಡೆಸಿಕೊಟ್ಟರು. ನಂತರ, ಶ್ರೀ ಶಶಿಧರ ಎಲೆ, ಅಪರ ನಿಬಂಧಕರು(ನಿ), ಬೆಂಗಳೂರು ಇವರು ನಡೆಸಿಕೊಟ್ಟರು. ಮಧ್ಯಾಹ್ನದ ಭಾಗವನ್ನು ಡಾ.ಎಸ್.ಎ.ಸಿದ್ಧಾಂತಿಯವರು ನಡೆಸಿಕೊಟ್ಟರು. ಕಾರ್ಯಕ್ರಮದ ವಂದನಾರ್ಪಣೆಯನ್ನು ಶ್ರೀ ಶಿವಕುಮಾರ್ ಬಿರಾದರ್, ಹಿರಿಯ ವ್ಯವಸ್ಥಾಪಕರು ನಡೆಸಿಕೊಟ್ಟರು.

ಎರಡನೇ ದಿನದ ಸಂಪರ್ಕ ವರ್ಗತರಗತಿಯ ಮೊದಲ ಭಾಗವನ್ನು ಶ್ರೀ ಸಿ.ಎಸ್.ಪುಟ್ಟರಾಜು, ಅಪರ ನಿಬಂಧಕರು(ನಿ), ಬೆಂಗಳೂರು ಇವರು ನಡೆಸಿಕೊಟ್ಟರು. ಮಧ್ಯಾಹ್ನನದ ಅವಧಿಯನ್ನು ಶ್ರೀ ಜಿ.ಎಸ್.ರವೀಂದ್ರ, ಕಾರ್ಪೋರೇಟರ್ ಟ್ರೈನರ್, ಬೆಂಗಳೂರು ಇವರು ನಡೆಸಿಕೊಟ್ಟರು. ಬೆಂಗಳೂರು ಕೇಂದ್ರದಿಂದ ಒಟ್ಟು 52 ಅಭ್ಯರ್ಥಿಗಳು ಭಾಗವಹಿಸಿ ಪ್ರಯೋಜನ ಪಡೆದರು.




ಡಿ.ಸಿ.ಬಿ.ಎಂ ಅಧ್ಯಯನ ಸಾಹಿತ್ಯ ಬಿಡುಗಡೆ

## ಬೆಳಗಾವಿ ಕೇಂದ್ರ



**ಬೆಳಗಾವಿ:** ದಿನಾಂಕ 15.02.2020 ರಂದು ಸಹಕಾರ ಬ್ಯಾಂಕಿಂಗ್ ಮ್ಯಾನೆಜ್‌ಮೆಂಟ್ ಡಿಪ್ಲೊಮಾ (ದೂರ ಶಿಕ್ಷಣದ)ದ ಪ್ರಥಮ ಸಂಪರ್ಕ ವರ್ಗದ ಉದ್ಘಾಟನಾ ಕಾರ್ಯಕ್ರಮವು ಆಲ್ ಇಂಡಿಯಾ ಇನ್ಸ್ಟಿಟ್ಯೂಟ್ ಆಫ್ ಲೋಕಲ್ ಸೆಲ್ಫ ಗವರ್ನಮೆಂಟ್, ಬೆಳಗಾವಿಯಲ್ಲಿ ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ನೇರವೇರಿಸಿದರು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸರಸ್ವತಿ ಎನ್.ರವಿ ಹಾಗೂ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಮಾನ್ಯ ಉಪಾಧ್ಯಕ್ಷರಾದ ಶ್ರೀ ಭಾಸ್ಕರ ಹೆಗಡೆ ಕಾಗೇರಿ ಇವರುಗಳು ಉಪಸ್ಥಿತರಿದ್ದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಶ್ರೀಮತಿ ಸರಸ್ವತಿ ಎನ್.ರವಿ ಇವರು ಮಾತನಾಡುತ್ತಾ ಮನುಷ್ಯನ ಜೀವನದಲ್ಲಿ ಕಲಿಕೆಯು ನಿರಂತರವಾಗಿರಬೇಕು, ಪ್ರಪಂಚದಲ್ಲಿ ಹೊಸತನವನ್ನು ಕಲಿಯಬೇಕಾಗಿರುವುದು ತುಂಬಾ ಇರುತ್ತದೆ ಅದನ್ನು ಕಲಿಯುತ್ತಾ ಯಾವಾಗಲೂ ವಿದ್ಯಾರ್ಥಿಗಳಾಗಿರಬೇಕು. ವೃತ್ತಿಪರ ಜೀವನದಲ್ಲಿ ಒಳ್ಳೆಯ ನಡತೆ, ಕೌಶಲ್ಯತೆ ಮತ್ತು ಜ್ಞಾನ ತುಂಬಾ ಪ್ರಮುಖ ಪಾತ್ರ ವಹಿಸುತ್ತವೆ. ಈ ಮೂರು ಗುಣಗಳನ್ನು ಅಳವಡಿಸಿಕೊಂಡಿರುವ ವ್ಯಕ್ತಿಯ ಜೀವನವು ತುಂಬಾ ಅಭಿವೃದ್ಧಿದಾಯಕವಾಗಿರುತ್ತದೆ. ಸಹಕಾರ ಬ್ಯಾಂಕಿಂಗ್ ಮ್ಯಾನೆಜಮೆಂಟ್ ಡಿಪ್ಲೋಮಾ (ದೂರ ಶಿಕ್ಷಣ) ಕೋರ್ಸನ್ನು ಪೂರ್ಣಗೊಳಿಸಿರಿ ಇದರಿಂದ ನಿಮ್ಮ ವೃತ್ತಿ ಜೀವನದಲ್ಲಿ ತುಂಬಾ ಅನುಕೂಲಕರವಾಗಲಿದೆ. ಹೆಚ್ಚಿನ ಜ್ಞಾನ ಪ್ರಾಪ್ತಿ ಆಗುತ್ತದೆ ಎಲ್ಲಾ ತರಗತಿಗಳಿಗೂ ತಪ್ಪದೇ ಹಾಜರಾಗಿರಿ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಶ್ರೀ ಜಗದೀಶ ಕವಟಗಿಮಠ ಇವರು ಮಾತನಾಡುತ್ತಾ ಇವತ್ತಿನ ಈ ಸಹಕಾರ ಬ್ಯಾಂಕಿಂಗ್ ಮ್ಯಾನೆಜಮೆಂಟ್ ಡಿಪ್ಲೋಮಾ (ದೂರ ಶಿಕ್ಷಣ) ಕೋರ್ಸನ ಅಭ್ಯರ್ಥಿಗಳಾದ ತಾವು ಸಹಕಾರಿ ಸಂಸ್ಥೆಗಳಲ್ಲಿ ಸಿಬ್ಬಂದಿಗಳಾಗಿಯೂ ಸಹ ಕಾರ್ಯನಿರ್ವಹಿಸುತ್ತಿದ್ದೀರಿ ಮೊದಲು ಸಿಬ್ಬಂದಿಗಳು ಸಂಸ್ಥೆಯ ಮೂಲ ವಿಷಯಗಳನ್ನು ಅರಿತಿರಬೇಕು. ಸಿಬ್ಬಂದಿಗಳು ನಿಮ್ಮ ಜವಾಬ್ದಾರಿಗಳು ಸಂಸ್ಥೆಗಳಲ್ಲಿ ತುಂಬಾ ಹೆಚ್ಚಾಗಿ ಇರುತ್ತವೆ. ಸಂಸ್ಥೆಯ ಸದಸ್ಯರಿಗೋಸ್ಕರ ಕಾರ್ಯನಿರ್ವಹಿಸಬೇಕು, ಠೇವಣಿದಾರರ ಹಿತಾಸಕ್ತಿ ಕಾಪಾಡಬೇಕು, ಸಾಲ ವಿತರಣೆಯಾದ ನಂತರ ಮರುಪಾವತಿಗೆ ಸರಿಯಾದ ಕ್ರಮವಿಡಬೇಕು. ನಿಧಿಗಳ ಹೂಡಿಕೆಯ ಬಗ್ಗೆ ಗಮನಹರಿಸಬೇಕು, ಆಡಳಿತ ಮಂಡಲಿಯವರಿಗೆ ಕಾನೂನಾತ್ಮಕ ವಿಷಯಗಳನ್ನು, ನಿಯಮಗಳ ಕುರಿತು ಗಮನಕ್ಕೆ ತರುವ ಕೆಲಸ ನಿರಂತರವಾಗಿರಬೇಕು. ಸಹಕಾರ ಬ್ಯಾಂಕಿಂಗ್ ಮ್ಯಾನೆಜ್‌ಮೆಂಟ್ ಡಿಪ್ಲೋಮಾ (ದೂರ ಶಿಕ್ಷಣ) ಕೋರ್ಸನ್ನು ಪೂರ್ಣಗೊಳಿಸಿರಿ, ಇದರಲ್ಲಿ ಅಳವಡಿಸಲಾದ ವಿಷಯಗಳ ಕುರಿತು ಚಿತ್ತವಿಟ್ಟು ಅಭ್ಯಾಸ ಮಾಡಿ ತರಗತಿಗಳಿಗೆ ಗೈರುಹಾಜರಾಗದೇ ಕೋರ್ಸನ್ನು ಸಂಪೂರ್ಣಗೊಳಿಸಿರಿ ಎಂದು ಹೇಳಿದರು.

ದಿನಾಂಕ 15.02.2020 ರಂದು ಮೊದಲ ಸಂಪರ್ಕ ವರ್ಗ ತರಗತಿಯ ಮೊದಲ ಅವಧಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಇವರು ಸಹಕಾರ ಪರಿಸರ ಹಾಗೂ ಆಡಳಿತ ನಿರ್ವಹಣೆ ವಿಷಯದ ಕುರಿತು ಹಾಗೂ ಸಹಕಾರಿ ಪತ್ತು ನಿರ್ವಹಣೆ ವಿಷಯದ ಕುರಿತು ಕೆ.ಡಿ.ಸಿ.ಸಿ. ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಭಾಸ್ಕರ ಹೆಗಡೆ ಕಾಗೇರಿ ಮತ್ತು ಮಧ್ಯಾಹ್ನದ ಅವಧಿಯಲ್ಲಿ ಬ್ಯಾಂಕಿಂಗ್ ಮೂಲ ಮಾಹಿತಿ ವಿಷಯದ ಕುರಿತು ಶ್ರೀ ಎಸ್.ಜಿ. ಕುಲಕರ್ಣಿ ಇವರು ಉಪನ್ಯಾಸ ನೀಡಿದರು.

ದಿನಾಂಕ 16.02.2020 ರಂದು ಮೊದಲಿನ ಅವಧಿಯಲ್ಲಿ ವಕೀಲರಾದ ಶ್ರೀ ಸಿ.ಟಿ.ಮಜಗಿ ಇವರು ಸಹಕಾರ ಕಾಯ್ದೆಗಳು, ಬ್ಯಾಂಕಿಂಗ್ ಕಾಯ್ದೆಗಳು ಇತರೆ ಅನ್ವಯಿಸುವ ಕಾಯ್ದೆಗಳು ವಿಷಯದ ಕುರಿತು ಹಾಗೂ ಶ್ರೀ ಎಸ್.ಜಿ.ಕುಲಕರ್ಣಿ ಇವರು ಲೆಕ್ಕ ಪತ್ರಗಳು ಹಾಗೂ ಲೆಕ್ಕ ಪರಿಶೋಧನೆ, ಮಾಹಿತಿ ತಂತ್ರಜ್ಞಾನ ವಿಷಯಗಳ ಕುರಿತು ಉಪನ್ಯಾಸ ನೀಡಿದರು.

## ರಾಯಚೂರು ಕೇಂದ್ರ



**ರಾಯಚೂರು:** ದಿನಾಂಕ 22 ಮತ್ತು 23 ಫೆಬ್ರವರಿ 2020 ರಂದು ರಾಯಚೂರಿನ ಕೃಷಿ ವಿಶ್ವವಿದ್ಯಾಲಯದಲ್ಲಿ 2ನೇ ತಂಡದ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೆಜ್‌ಮೆಂಟ ಡಿಪ್ಲೋಮ ಕೋರ್ಸ–2020 ಉದ್ಘಾಟನೆಯನ್ನು ಸಹಕಾರಿಗಳ ಅಪರ ನಿಬಂಧಕರು ಹಾಗೂ ಡಿಸಿಸಿ ಬ್ಯಾಂಕಿನ ವ್ಯವಸ್ಥಾಪಕರಾದ ಶ್ರೀ ಐ.ಎಸ್.ಗಿರಡ್ಡಿಯವರು ನೇರವೆರಿಸಿದರು. ವೇದಿಕೆಯ ಮೇಲೆ ಉಪನ್ಯಾಸಕರಾದ ಶ್ರೀ ಶಶಿಧರ ಎಲೆ ಹಾಗೂ ಸಂಯುಕ್ತ ಸಹಕಾರಿಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ರಘುನಂದನ ಕೆ ಮತ್ತು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್ ಉಪಸ್ಥಿತರಿದ್ದರು. ಒಟ್ಟು 43 ವಿದ್ಯಾರ್ಥಿಗಳು ಭಾಗವಹಿಸಿದರು.

## ಮುಧೋಳ ಕೇಂದ್ರ



**ಮುಧೋಳ:** ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜಮೆಂಟ್ ಡಿಪ್ಲೋಮ ಕೋರ್ಸನ ಪ್ರಥಮ ಸಂಪರ್ಕ ವರ್ಗ ತರಗತಿ ದಿನಾಂಕ 15 ಫೆಬ್ರುವರಿ 2020 ರಂದು ವಿಜಯ ಸೌಹಾರ್ದ ಸಹಕಾರಿ ನಿ, ಮುಧೋಳ ಕೇಂದ್ರದಲ್ಲಿ ಜರುಗಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಹಾಲಿ ವಿಧಾನ ಸಭಾ ಸದಸ್ಯರು ಮತ್ತು ಮಾಜಿ ಸಚಿವರು ಆದ ಶ್ರೀ ಮುರುಗೇಶ ನಿರಾಣಿ ಇವರು ನೇರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾರ್ಪೋರೇಟಿವ ಟ್ರೈನರ್ ಆದ ಶ್ರೀ ವೈ.ವಿ. ಗುಂಡುರಾವ್ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ವಾಟ್ನಾಳ ಮತ್ತು ಶ್ರೀ ಸಂಗಮೇಶ ನಿರಾಣಿ ಆಗಮಿಸಿದ್ದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ತರಬೇತಿ ವ್ಯವಸ್ಥಾಪಕರಾದ ಶ್ರೀ ವಿ.ಜೆ. ಕಾರಕೂನ, ಶ್ರೀ ಗುರುರಾಜ್ ಎಮ್ ವೈದ್ಯ, ವಿಜಯ ಪತ್ತಿನ ಸೌಹಾರ್ದ ಸಹಕಾರಿ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಕೃಷ್ಣ ಕಾವಿ ಇವರು ಉಪಸ್ಥಿತರಿದ್ದರು.

ಉದ್ಘಾಟಕರಾದ ಶ್ರೀ ಮುರುಗೇಶ ನಿರಾಣಿ ಇವರು ಮಾತನಾಡುತ್ತಾ ಸೌಹಾರ್ದ ಸಹಕಾರಿಗಳು ಗುಣಮಟ್ಟದ ಕಡೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿ ನಡೆದರೆ ಎತ್ತರದಲ್ಲಿ ಬೆಳೆಯಲೂ ಸಾಧ್ಯ ಎಂದು ತಿಳಿಸಿದರು. ಹಣದುಬ್ಬರ ಆದಂತಹ ಸಂದರ್ಭದಲ್ಲಿ ಅಮೇರಿಕಾ, ಜರ್ಮನ್, ಜಪಾನ್ ದೇಶಗಳು ಆರ್ಥಿಕ ಸಂಕಷ್ಟಕ್ಕೆ ಒಳಗಾಗಿದ್ದವು ಆದರೆ ಭಾರತದ ಹಣಕಾಸಿನ ವ್ಯವಸ್ಥೆ ಸುಭದ್ರವಾಗಿರುವುದರಿಂದ ಭಾರತವು ಸಂಕಷ್ಟಕ್ಕೆ ಸಿಲುಕಲಿಲ್ಲ. ಇದಕ್ಕೆ ಕಾರಣ ಭಾರತದಲ್ಲಿ ಬ್ಯಾಂಕಿಂಗ್ ವ್ಯವಸ್ಥೆ ಸಧೃಡವಾಗಿದೆ. ಎಲ್ಲ ಸೌಹಾರ್ದ ಸಹಕಾರಿಗಳು ತಮ್ಮ ಹಣಕಾಸಿನ ವ್ಯವಹಾರಗಳಲ್ಲಿ ಪಾರದರ್ಶಕತೆ ಮತ್ತು ಶಿಸ್ತು ಅಳವಡಿಸಿಕೊಳ್ಳುವುದು ಅತ್ಯಾವಶ್ಯವಾಗಿದೆ ಎಂದು ಸಲಹೆ ನೀಡಿದರು. ಪ್ರತಿ ಹಂತದಲ್ಲೂ ತರಬೇತಿ ಅವಶ್ಯವಾಗಿದ್ದು ಅದರ ಸದುಪಯೋಗ ಪಡೆದುಕೊಳ್ಳಲು ಕರೆ ನೀಡಿದರು. ದಿನಾಂಕ 15.02.2020 ರಂದು ಒಟ್ಟು 58 ಅಭ್ಯರ್ಥಿಗಳು ಭಾಗವಹಿಸಿದ್ದರು ಹಾಗೂ ದಿನಾಂಕ 16.02.2020 ರಂದು ಒಟ್ಟು 62 ಅಭ್ಯರ್ಥಿಗಳು ಭಾಗವಹಿಸಿದ್ದರು.

ದಿನಾಂಕ 15.02.2020 ರಂದು ಮೊದಲನೆಯ ಸಂಪರ್ಕ ವರ್ಗ ತರಗತಿಯ ಮೊದಲ ತರಗತಿಯನ್ನು ಸಂಯುಕ್ತ ಸಹಕಾರಿಯ ತರಬೇತಿ ವ್ಯವಸ್ಥಾಪಕರಾದ ಶ್ರೀ ವಿ.ಜೆ. ಕಾರಕೂನ ಇವರು ಸಹಕಾರ ಪರಿಸರ ಹಾಗೂ ಆಡಳಿತ ನಿರ್ವಹಣೆ ವಿಷಯದ ಕುರಿತು ಉಪನ್ಯಾಸ ನೀಡಿದರು ಹಾಗೂ ಶ್ರೀ ವೈ.ವಿ.ಗಂಡುರಾವ್ ಇವರು ಸಹಕಾರಿ ಪತ್ತು ನಿರ್ವಹಣೆಯ ಕುರಿತು ಮತ್ತು ಮಾಹಿತಿ ತಂತ್ರಜ್ಞಾನ ವಿಷಯದ ಕುರಿತು ಉಪನ್ಯಾಸ ನೀಡಿದರು.

ದಿನಾಂಕ 16.02.2020 ರಂದು ಮೊದಲಿನ ಅವಧಿಯನ್ನು ಶ್ರೀ ಶಶಿಧರ ಎಲೆ, ಇವರು ಸಹಕಾರ ಕಾಯ್ದೆಗಳು, ಬ್ಯಾಂಕಿಂಗ್ ಕಾಯ್ದೆಗಳು ಇತರೆ ಅನ್ವಯಿಸುವ ಕಾಯ್ದೆ ವಿಷಯದ ಕುರಿತು ಹಾಗೂ ಲೆಕ್ಕಪರಿಶೋಧಕರಾದ ಶ್ರೀ ಸುನೀಲ ಪತ್ತಾರ, ಇವರು ಲೆಕ್ಕಪತ್ರಗಳು ಹಾಗೂ ಲೆಕ್ಕಪರಿಶೋಧನೆಯ ವಿಷಯದ ಕುರಿತು ಮತ್ತು ನಂತರದ ಅವಧಿಯಲ್ಲಿ ಶ್ರೀ ಕೆ. ಆರ್. ಕಾವಿ ಇವರು ಬ್ಯಾಂಕಿಂಗ್ ಮೂಲ ಮಾಹಿತಿ ವಿಷಯದ ಕುರಿತು ಉಪನ್ಯಾಸ ನೀಡಿದರು.

## ಶಿವಮೊಗ್ಗ ಕೇಂದ್ರ



**ಶಿವಮೊಗ್ಗ:** ದಿನಾಂಕ 22.02.2020 ರಂದು ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮ ಕೋರ್ಸ್ (ದೂರ ಶಿಕ್ಷಣ) –2020 ಇದರ ಉದ್ಘಾಟನಾ ಕಾರ್ಯಕ್ರಮವನ್ನು ಶಿವಮೊಗ್ಗ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಇದರ ಸಹ್ಯಾದ್ರಿ ತರಬೇತಿ ಆವರಣದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಎ.ಆರ್. ಪ್ರಸನ್ನಕುಮಾರ್ ರವರು ನೇರವೇರಿಸಿದರು. ಬೆಂಗಳೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ, ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ರವೀಂದ್ರ ರವರು ಹಾಗೂ ಜಿಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ್ ರವರು ಉಪಸ್ಥಿತರಿದ್ದರು. ಶಿವಮೊಗ್ಗ ಕೇಂದ್ರದಲ್ಲಿ 07 ಜಿಲ್ಲೆಗಳಿಂದ 58 ಜನ ಅಭ್ಯರ್ಥಿಗಳು ಭಾಗವಹಿಸಿದ್ದರು.

# "ಆಡಳಿತ ಪರಿಣಿತಿ" ತರಬೇತಿ ಕಾರ್ಯಕ್ರಮ

## ಸಹಕಾರಿಗಳು ತರಬೇತಿ ಪಡೆದು ಗುಣಾತ್ಮಕವಾಗಿ ಬೆಳೆಯಲಿ – ಶ್ರೀ ಗುರುನಾಥ ಜ್ಯಾಂತಿಕರ



**ಕಲಬುರಗಿ:** ದಿನಾಂಕ 24 ಮತ್ತು 25 ಫೆಬ್ರವರಿ 2020 ರಂದು ಕಮಲಾಪೂರ ತಾಲೂಕಿನ ಮೈರಾಡ ತರಬೇತಿ ಕೇಂದ್ರದಲ್ಲಿ ಸೋಮವಾರ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಕಲಬುರಗಿ ಪ್ರಾಂತದ ವತಿಯಿಂದ ಆಯೋಜಿಸಲಾಗಿದ್ದ ಕಲಬುರಗಿ ಮತ್ತು ಬೀದರ ಜಿಲ್ಲೆಯ ಸೌಹಾರ್ದ ಸಹಕಾರಿಯ ಅಧ್ಯಕ್ಷರು/ಉಪಾಧ್ಯಕ್ಷರುಗಳಿಗಾಗಿ 2 ದಿನದ ಆಡಳಿತ ಪರಿಣಿತಿ ತರಬೇತಿಯ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು. ಸೌಹಾರ್ದ ಸಹಕಾರಿಗಳು ಉತ್ತಮವಾಗಿ ಕಾರ್ಯನಿರ್ವಹಿಸಬೇಕಾದರೆ ಕಾಲಕಾಲಕ್ಕೆ ತರಬೇತಿಗಳನ್ನು ಪಡೆದು ಉತ್ತಮ ಗುಣಮಟ್ಟದ ಸಹಕಾರಿಯಾಗಿ ಬೆಳವಣಿಗೆ ಹೊಂದಬೇಕು. ಸಹಕಾರಿಯ ಆಡಳಿತ ಮಂಡಳಿಯಲ್ಲಿ ಅಧ್ಯಕ್ಷರು / ಉಪಾಧ್ಯಕ್ಷರುಗಳ ಪಾತ್ರ ಪ್ರಮುಖವಾಗಿರುತ್ತದೆ. ತಮ್ಮ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಅರಿತು ಕಾರ್ಯನಿರ್ವಹಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಸಹಕಾರಿ ಮತ್ತು ಮಾಧ್ಯಮದ ಕುರಿತು ಮಾತನಾಡಿದ ವಿಜಯವಾಣಿ ಕಲಬುರಗಿ ಸ್ಥಾನಿಯ ಸಂಪಾದಕರಾದ ಶ್ರೀ ವ್ಯಾದಿರಾಜ ವ್ಯಾಸಮುದ್ರ ಅವರು ಸಹಕಾರಿ ಸಂಸ್ಥೆಗಳು ಸದೃಢವಾಗಲು ಸದಸ್ಯರು ತಮ್ಮ ಠೇವಣಿಗಳನ್ನು ಸಹಕಾರಿಗಳಲ್ಲಿ ಹೂಡಿಕೆ ಮಾಡಬೇಕು ಮತ್ತು ಸಕಾಲದಲ್ಲಿ ಸಾಲಗಳನ್ನು ಪಡೆದು ಅವುಗಳನ್ನು ಮರುಪಾವತಿ ಮಾಡಬೇಕು ಎಂದರು. ಉತ್ತಮ ಸಹಕಾರಿಗಳನ್ನು ಮಾಧ್ಯಮ ಗುರುತಿಸಿ ಅವುಗಳಿಗೆ ಪ್ರೋತ್ಸಾಹಿಸುತ್ತವೆ ಎಂದು ನುಡಿದರು. ಸಹಕಾರ ಮತ್ತು ಮಾಧ್ಯಮ ಜೊತೆಯಾಗಿ ಕಾರ್ಯನಿರ್ವಹಿಸಿದರೆ ಉತ್ತಮ ಸಮಾಜ ನಿರ್ಮಾಣ ಮಾಡಬಹುದು ಎಂದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಬೀದರ ಜಿಲ್ಲೆಯ ಹಿರಿಯ ಸಹಕಾರಿ ಹಾಗೂ ಬಿಜೆಪಿ ಜಿಲ್ಲಾ ಅಧ್ಯಕ್ಷರಾದ ಶ್ರೀ ಶಿವಾನಂದ ಮಂಠಾಳಕರ ಅವರಿಗೆ ಸಹಕಾರಿಯ ಕ್ಷೇತ್ರದ ಕೊಡುಗೆಯನ್ನು ಪರಿಗಣಿಸಿ ಸನ್ಮಾನಿಸಲಾಯಿತು. ತರಬೇತಿ ಕಾರ್ಯಾಗಾರದ ಉದ್ಘಾಟನೆಯನ್ನು ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಮಹಾಮಂಡಳದ ನಿರ್ದೇಶಕರಾದ ಶ್ರೀ ಎಸ್.ಎಸ್.ಪಾಟೀಲ, ಸಂಪನ್ಮೂಲ ವ್ಯಕ್ತಿಗಳಾದ ನಿವೃತ್ತ ಅಪರ ನಿಬಂಧಕರು ಶ್ರೀ ಎಚ್.ಎಸ್ ನಾಗರಾಜಯ್ಯ, ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್, ಕಾನೂನು ಅಧಿಕಾರಿ ಶ್ರೀ ಸೂರ್ಯಕಾಂತ ರ್‍ಯಾಕಲೆ ವೇದಿಕೆಯ ಮೇಲೆ ಉಪಸ್ಥಿತರಿದ್ದು ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ ಇವರು ವಹಿಸಿಕೊಂಡಿದ್ದರು.

ಕಾರ್ಯಕ್ರಮದಲ್ಲಿ ಕಲಬುರಗಿ ಮತ್ತು ಬೀದರ ಜಿಲ್ಲೆಯ ಸೌಹಾರ್ದ ಸಹಕಾರಿಯ 62 ಅಧ್ಯಕ್ಷರು/ಉಪಾಧ್ಯಕ್ಷರು ತರಬೇತಿಯಲ್ಲಿ ಭಾಗವಹಿಸಿದರು.

# ಗೌರವ ಮಧ್ಯಸ್ಥಗಾರರ ತರಬೇತಿ ಕಾರ್ಯಕ್ರಮ



**ಬೆಳಗಾವಿ:** ಬೆಳಗಾವಿ ಪ್ರಾಂತದ ಸೌಹಾರ್ದ ಸಹಕಾರಿಗಳ ವಿವಾದದ ಇತ್ಯರ್ಥಕ್ಕಾಗಿ ನೇಮಕಗೊಂಡ ಗೌರವ ಮಧ್ಯಸ್ಥಗಾರರ ತರಬೇತಿಯನ್ನು ದಿನಾಂಕ 10 ಫೆಬ್ರವರಿ 2020ರಂದು ಮಹಾಂತ್ ಭವನ, ಮಹಾಂತೇಶ ನಗರ ಬೆಳಗಾವಿಯಲ್ಲಿ ಆಯೋಜಿಸಲಾಗಿರುತ್ತದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಹಕಾರ ಸಂಘಗಳ ಇಲಾಖೆಯ ಸಹಾಯಕ ನಿಬಂಧಕರಾದ(ನಿವೃತ್ತ) ಶ್ರೀ ಎಸ್.ಜಿ.ಜೋಷಿ ಮತ್ತು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 110 ಗೌರವ ಮಧ್ಯಸ್ಥಗಾರರು ಭಾಗವಹಿಸಿರುತ್ತಾರೆ. ಸಂಪನ್ಮೂಲ ವ್ಯಕ್ತಿಯಾದ ಶ್ರೀ ಎಸ್.ಜಿ.ಜೋಷಿ ಇವರು ಮಧ್ಯಸ್ಥಗಾರಿಕೆಯ ಪ್ರಕ್ರಿಯೆಗಳ ಕುರಿತು ಉಪನ್ಯಾಸ ನೀಡಿದರು.

## ಮೈಸೂರಿನಲ್ಲಿ ಕೃಷಿ ಮೇಳ
## ಸಂಯುಕ್ತ ಸಹಕಾರಿಯ ಪ್ರದರ್ಶನ ಹಾಗೂ ಮಾರಾಟ ಮಳಿಗೆ



**ಮೈಸೂರು:** ದಿನಾಂಕ 21.02.2020 ರಿಂದ 23.02.2020ರವರೆಗೆ ವಿಜಯವಾಣಿ ಮತ್ತು ದಿಗ್ವಿಜಯ ನ್ಯೂಸ್ 24*7 ಇವರ ನೇತೃತ್ವದಲ್ಲಿ ಆಯೋಜಿಸಿರುವ 3 ದಿನಗಳ ಕೃಷಿ ಮೇಳ – 2020ರ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ವತಿಯಿಂದ ಪ್ರದರ್ಶನ ಹಾಗೂ ಪುಸ್ತಕ ಮಾರಾಟ ಮಳಿಗೆಯ ಉದ್ಘಾಟನೆಯನ್ನು ಮಾನ್ಯ ಶಾಸಕರಾದ ಶ್ರೀ ಜಿ.ಟಿ. ದೇವೇಗೌಡರವರು ನೇರವೇರಿಸಿದರು. ಈ ಸಂದರ್ಭದಲ್ಲಿ ಎಂ.ಸಿ.ಡಿ.ಸಿ.ಸಿ ಬ್ಯಾಂಕ್‌ನ ಅಧ್ಯಕ್ಷರಾದ ಶ್ರೀ ಹರೀಶ್ ಗೌಡರವರು, ಪ್ರಾಂತೀಯ ನಿರ್ದೇಶಕರಾದ ಶ್ರೀ ಹೆಚ್.ವಿ. ರಾಜೀವ್‌ರವರು ಹಾಗೂ ವಿಜಯವಾಣಿ ಮುಖ್ಯಸ್ಥರಾದ ಶ್ರೀ ಸಿ.ಕೆ. ಮಹೇಂದ್ರ ಹಾಗೂ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ್ ಬಿರಾದಾರ ಹಾಗೂ ಜಿಲ್ಲಾ ಸಂಯೋಜಕರಾದ ಶ್ರೀ ಸುರೇಶ ಆರ್.ಎಸ್ ರವರು ಉಪಸ್ಥಿತರಿದ್ದರು. ಕೃಷಿ ಮೇಳ–2020ರ ಕಾರ್ಯಕ್ರಮದಲ್ಲಿ ಪ್ರಾಂತದ ಸಿಬ್ಬಂದಿಗಳು ಸಕ್ರೀಯವಾಗಿ ಹಾಗೂ ಕ್ರಿಯಾಶೀಲರಾಗಿ ಭಾಗವಹಿಸಿದ್ದರು.

## ಬಜೆಟ್ ವಿಶ್ಲೇಷಣೆ ಮತ್ತು ಆದಾಯ ತೆರಿಗೆ ಕುರಿತು ತರಬೇತಿ ಕಾರ್ಯಕ್ರಮ



**ಚಾಮರಾಜನಗರ:** ದಿನಾಂಕ 25.02.2020ರಂದು ನಡೆದ ಚಾಮರಾಜನಗರ ಜಿಲ್ಲಾ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿ ಸದಸ್ಯರಿಗಾಗಿ ಆಯೋಜಿಸಿದ್ದ "ಬಜೆಟ್– 2020 ವಿಶ್ಲೇಷಣೆ ಮತ್ತು ಆದಾಯ ತೆರಿಗೆ ಪೀರ್ಪು" ತರಬೇತಿಯನ್ನು ಶ್ರೀ ಬಿ.ಎನ್ ಚಂದ್ರಶೇಖರ, ಲೆಕ್ಕ ಪರಿಶೋಧಕರು, ಮೈಸೂರು ಇವರು ಉದ್ಘಾಟಿಸಿದರು, ಪ್ರಾಸ್ತಾವಿಕವನ್ನು ಶ್ರೀ ಎಸ್. ಬಾಲಸುಬ್ರಮ್ಮಣ್ಯ, ಅಧ್ಯಕ್ಷರು ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ನಿ., ನುಡಿದರು, ಶ್ರೀಮತಿ ರೇಣುಕಾ ಕೆ.ಜಿ., ಅಧ್ಯಕ್ಷರು, ಶ್ರೀ ಮದ್ದಾನೇಶ್ವರ ಮಹಿಳಾ ಸೌಹಾರ್ದ ಸಹಕಾರಿ ನಿ., ಗುಂಡ್ಲುಪೇಟೆ ಇವರು ಅಧ್ಯಕ್ಷತೆಯನ್ನು ವಹಿಸಿದ್ದರು. ಎಂ. ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು, ಇವರು ಉಪಸ್ಥಿತರಿದ್ದರು. ಸದರಿ ಕಾರ್ಯಕ್ರಮದಲ್ಲಿ ಜಿಲ್ಲೆಯಲ್ಲಿನ 13 ಸೌಹಾರ್ದ ಸಹಕಾರಿಗಳು, 03 ಉದ್ದೇಶಿತ ಸೌಹಾರ್ದ ಸಹಕಾರಿಗಳು, 01 ಸಹಕಾರ ಸಂಘದಿಂದ ಒಟ್ಟು 38 ಸದಸ್ಯರುಗಳು ಭಾಗವಹಿಸಿದ್ದರು.

ಕುಮಾರಿ ನಾಗಪೂಜಾ, ಸಿಇಓ, ಶ್ರೀ ಮುಪ್ಪಿನ ಷಡಾಕ್ಷರದೇವ ಸೌ.ಸ.ನಿ., ಯಳಂದೂರು ಇವರು ಕಾರ್ಯಕ್ರಮದ ನಿರೂಪಣೆಯನ್ನು, ಶ್ರೀಮತಿ ರಾಜಮ್ಮ, ನಿರ್ದೇಶಕರು, ಸ್ನೇಹಜ್ಯೋತಿ ಮಹಿಳಾ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಇವರು ಪ್ರಾರ್ಥನೆಯನ್ನು, ಶ್ರೀ ಶಿವಕುಮಾರ. ಆರ್, ಸಿಇಓ, ನವ್ಯ ಕರ್ನಾಟಕ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಇವರು ಸ್ವಾಗತ & ಪರಿಚಯವನ್ನು ಹಾಗೂ ಶ್ರೀಮತಿ ಭಾಗ್ಯ ಹೆಚ್. ಬಿ, ನಿರ್ದೇಶಕರು, ಸ್ನೇಹಜ್ಯೋತಿ ಮಹಿಳಾ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಇವರು ವಂದಾನಾರ್ಪಣೆಯನ್ನು ನೇರವೇರಿಸಿದರು.

# NCUI Leadership Development Program



**Udupi :** Sri Sathya Narayanan C.E.O of the National Cooperative Union of india inaugurated the Leadership Development Program for the office bearers of the udupi district Souharda Cooperative on 5th March 2020. in the presence of Sri S.R Satishchandra, President Camco, Sri yashpal suverna, president Fish federation, Sri Manjunath, Director, karnataka state souharda federal co-op Ltd., Bengaluru ,Sri Sharanagouda G patil, Managing Director, karnataka state souharda federal co-op Ltd., Bengaluru and others.

35 Co-operators participated in the programme.

# ರಾಷ್ಟ್ರೀಯ ಮಹಿಳಾ ಸಮಾವೇಶ




**ನಾಗಪುರ:** ಸಹಕಾರ ಭಾರತಿ ಇದರ ನೇತೃತ್ವದಲ್ಲಿ ನಡೆದ ಮಹಾರಾಷ್ಟ್ರ ರಾಜ್ಯದ ನಾಗಪುರದಲ್ಲಿ 'ರಾಷ್ಟ್ರೀಯ ಮಹಿಳಾ ಅಧೀವೇಶನ' ಬೃಹತ್ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, "ಬಿನ ಸಂಸ್ಕಾರ ನಹಿ ಸಹಕಾರ ಬಿನ ಸಹಕಾರ ನಹಿ ಉದ್ದಾರ" ಎನ್ನುವ ಧ್ಯೇಯ ವಾಕ್ಯದೊಂದಿಗೆ ಛತ್ತಿಸಗಡದ ರಾಜ್ಯಪಾಲರಾದ ಅನುಸೂಯ ಉಯಿಕೆ ರವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ರಾಷ್ಟ್ರದ 23 ರಾಜ್ಯಗಳಿಂದ 3000 ಮಹಿಳೆಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು ಇದರ ನಿರ್ದೇಶಕರಾದ ಶ್ರೀಮತಿ ಸರಸ್ವತಿ ಎನ್. ರವಿ ಕುಮಾರ್‌ರವರೊಂದಿಗೆ ಸಂಯುಕ್ತ ಸಹಕಾರಿಯ ಸಿಬ್ಬಂದಿಗಳಾದ ಶ್ರೀಮತಿ ಶೋಭ ಆರ್, ಶ್ರೀಮತಿ ಸವಿತ ಎನ್. ಇ. ಶ್ರೀಮತಿ ಸಿಂಧು ಸಿ.ಟಿ., ಶ್ರೀಮತಿ ವಿಜಯಶ್ರೀ ಪಿ., ಶ್ರೀಮತಿ ಹರ್ಷಪ್ರಭ ಬಿ.ಆರ್, ಶ್ರೀಮತಿ ರೇಣುಕಾ–ಎಮ್. ವಿ., ಶ್ರೀಮತಿ ಅಶ್ವಿನಿಕಮ್ಮಾರ್, ಶ್ರೀಮತಿ ಮಲ್ಲಮ್ಮದೇಗಾಮ್ ಹಾಗೂ ಶ್ರೀಮತಿ ಶ್ರೀದೇವಿ ಇವರುಗಳು ಭಾಗವಹಿಸಿರುತ್ತಾರೆ. ನಾಗಪುರದ ICMನ ಪ್ರಾಂತೀಯ ನಿರ್ದೇಶಕರಾದ ಸಿ.ವಸಂತ್‌ಕುಮಾರ್ ನಾಯಕ್ ಇವರನ್ನು ಭೇಟಿ ಮಾಡಿ ICM ನ ಕಾರ್ಯ ಚಟುವಟಿಕೆಗಳ ಬಗ್ಗೆ ತಿಳಿದುಕೊಳ್ಳಲಾಯಿತು.

ದಿನಾಂಕ 01.02.2020ರಂದು SNDT ವಿಶ್ವವಿದ್ಯಾನಿಲಯ ಮುಂಬಯಿ ಇದರ ಕುಲಪತಿಯಾದ ಡಾ. ಶಶಿತಾಯಿ ವಂಜಾರಿರವರು ಹಾಗೂ ರಾಷ್ಟ್ರ ಸೇವಕ ಸಮಿತಿಯ ಪ್ರಮುಖ ಸಂಚಾಲಕರಾದ ವಂದನಿಯ ಶಾಂತಕ್ಕರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಸಹಕಾರ ಭಾರತಿಯ ಪ್ರಮುಖರಾದ ಶ್ರೀ ಸತೀಶ್ ಮರಾಠೆ ಹಾಗೂ ಶ್ರೀ ರಮೇಶ ವೈದ್ಯ ಇವರುಗಳು ಉಪಸ್ಥಿತರಿದ್ದರು.

ಡಾ. ಮನೀಶ ಕೊರೆಕರ್‌ರವರು ಮಹಿಳಾ ಸಂಘದ ಸ್ಥಿತಿ ಗತಿಯ ಬಗ್ಗೆ ವಿವರಣೆ ನೀಡಿದರು, ಸಹಕಾರ ಭಾರತೀಯ ರಾಷ್ಟ್ರೀಯ ಸಂಘಟನಾ ಮಂತ್ರಿಯಾದ ಸಂಜಯಾಜಿ ಪಚಪೇರ್‌ರವರು ಸಂಘಟನಾತ್ಮಕ ಬಗ್ಗೆ ತಿಳಿಸಿದರು. ಮಧ್ಯಾಹ್ನ ಭೋಜನದ ನಂತರ ಸಹಕಾರ ಭಾರತೀಯ ಉಪಾಧ್ಯಕ್ಷರಾದ ಡಿ.ಎನ್. ಠಾಕೂರ್‌ರವರು ಸಹಕಾರ ಕಾನೂನು ಮತ್ತು ಸಹಕಾರ ಹುಟ್ಟಿ ಬಂದ ಹಾದಿ ಇದರ ಬಗ್ಗೆ ಮತ್ತು ಈಗಿನ ಸಹಕಾರ ಸಂಘಗಳ ಸ್ಥಿತಿ ಗತಿ ಬಗ್ಗೆ ಉಪನ್ಯಾಸ ನೀಡಿದರು. ಶ್ರೀ ಸುಧಾಕರ್ ಕುಲಕರ್ಣಿರವರು ಅರ್ಥಸಾಕ್ಷಾರತ ಇದರ ಬಗ್ಗೆ ವಿವರಣೆ ನೀಡಿದರು. ಶ್ರೀಮತಿ ಮಧುಬಾಲ ಸಾಬುರವರು ದೇಸಿಯ ಉತ್ಪಾದನೆ ಬಗ್ಗೆ ಉಪನ್ಯಾಸ ನೀಡಿದರು.

ದಿನಾಂಕ: 02.02.2020 ರಂದು VAMNICOM ನ ಪ್ರೊಫೆಸರ್ ಆದ ಡಾ.ಡಿ ವಿ ದೇಶಪಾಂಡೆರವರು ಸ್ವಯಂ ಸಹಯತಾ ಸಮೂಹದ ಬಗ್ಗೆ ವಿವರಣೆ ನೀಡಿದರು. ತದನಂತರ ಕೇಂದ್ರೀಯ ಮಂತ್ರಿಯಾದ ನಿತಿನ್‌ಗಡ್ಕರಿರವರು ಮಹಿಳೆಯರನ್ನು ಕುರಿತು ಸಮಾರೋಪ ಸಮಾರಂಭದ ಭಾಷಣ ಮಾಡಿದರು.

# ಪತ್ರಿಕಾ ಗೋಷ್ಠಿ

## ಸೌಹಾರ್ದ ಸಹಕಾರಿಗೆ ತೆರಿಗೆ ವಿನಾಯತಿ : ಹೈಕೋರ್ಟ್ ಆದೇಶಕ್ಕೆ ಸ್ವಾಗತ - ಶ್ರೀ ಜಿ.ಎನ್ ಪಾಟೀಲ



**ಬಾಗಲಕೋಟ:** ರಾಜ್ಯದ ಸೌಹಾರ್ದ ಸಹಕಾರಿಗಳು ಆದಾಯ ತೆರಿಗೆ ವಿನಾಯಿತಿಗೆ ಅರ್ಹ ಎಂದು ಹೈಕೋರ್ಟ ನೀಡಿರುವ ತೀರ್ಪಿನ ಹಿನ್ನಲೆಯಲ್ಲಿ ದಿನಾಂಕ 07.02.2020, ಶುಕ್ರವಾರದಂದು ಪತ್ರಿಕಾ ಭವನ, ನವನಗರ, ಬಾಗಲಕೋಟೆಯಲ್ಲಿ ಪತ್ರಿಕಾ ಗೋಷ್ಠಿ ಜರುಗಿತು.

ಪತ್ರಿಕಾಗೋಷ್ಠಿಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ.ಎನ್.ಪಾಟೀಲ ಇವರು ಮಾತನಾಡುತ್ತಾ ಸೌಹಾರ್ದ ಸಹಕಾರ ಕ್ಷೇತ್ರಕ್ಕೆ ಎದುರಾಗಿದ್ದ ಆದಾಯ ತೆರಿಗೆ ತೊಂದರೆ ನಿವಾರಣೆ ಸಂಬಂಧ ಈಗಾಗಲೇ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ ಹಾಗೂ ಸನ್ಮಾನ್ಯ ಗೃಹ ಸಚಿವರಾದ ಶ್ರೀ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿ ಕಾಯ್ದೆಗೆ ತಿದ್ದುಪಡಿ ತರುವಂತೆ ಕೋರಲಾಗಿತ್ತು, ಅದೇ ಸಂದರ್ಭದಲ್ಲಿ ನ್ಯಾಯಾಲಯದ ಆದೇಶವೂ ಹೊರಬಂದಿರುವುದು ಅದಕ್ಕೆ ಪೂರಕವಾಗಿದೆ ಎಂದರು. ಸೌಹಾರ್ದ ಸಹಕಾರಿಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವುದರಿಂದ ಠೇವಣಿ ಪ್ರಮಾಣ ಹೆಚ್ಚಳಗೊಂಡಿದೆ. ಇದರಿಂದಾಗಿ ಆದಾಯ ತೆರಿಗೆ ಇಲಾಖೆಯ ಕಣ್ಣು ಸಹಕಾರಿಗಳ ಮೇಲೆ ಬಂದಿದೆ ಎಂದು ತಿಳಿಸಿದರು.

ಸಹಕಾರಿ ಸಂಸ್ಥೆಗಳಿಗೆ 80ಪಿ ಅಡಿಯಲ್ಲಿ ತೆರಿಗೆ ವಿನಾಯಿತಿಯಿದ್ದರೂ, ಆದಾಯ ತೆರಿಗೆ ಇಲಾಖೆಯ ವತಿಯಿಂದ ಸೌಹಾರ್ದ ಸಹಕಾರಿಗಳು ಸಹ ತೆರಿಗೆ ಪಾವತಿಸಬೇಕೆಂದು ನೋಟಿಸ್ ನೀಡುತ್ತಿರುವುದನ್ನು ಪ್ರಶ್ನಿಸಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಸಂಸ್ಥೆಯಿಂದ ಕಳೆದ 2 ವರ್ಷಗಳಿಂದ ನಿರಂತರ ಕಾನೂನು ಹೋರಾಟದ ಪರಿಣಾಮ ಆದಾಯ ತೆರಿಗೆ ಕಲಂ 80ಪಿ(2)ರ ಅಡಿಯಲ್ಲಿ ಉಚ್ಚನ್ಯಾಯಾಲಯವು ತೆರಿಗೆ ವಿನಾಯಿತಿಗೆ ಸೌಹಾರ್ದ ಸಹಕಾರಿಗಳು ಅರ್ಹ ಎಂದು ತೀರ್ಪು ನೀಡಿರುತ್ತದೆ.




**ಧಾರವಾಡ:** ರಾಜ್ಯದ ಸೌಹಾರ್ದ ಸಹಕಾರಿಗಳು ಆದಾಯ ತೆರಿಗೆ ವಿನಾಯಿತಿಗೆ ಅರ್ಹ ಎಂದು ಹೈಕೋರ್ಟ ನೀಡಿರುವ ತೀರ್ಪಿನ ಹಿನ್ನಲೆಯಲ್ಲಿ ದಿನಾಂಕ 17.02.2020 ರಂದು ಪತ್ರಕರ್ತರ ಭವನ ಹುಬ್ಬಳ್ಳಿಯಲ್ಲಿ ಪತ್ರಿಕಾ ಗೋಷ್ಠಿ ಜರುಗಿತು.

ಪತ್ರಿಕಾಗೋಷ್ಠಿಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಚಂದ್ರಕಾಂತ್ ಪಡಚಣ್ಣವರ ಇವರು ಮಾತನಾಡುತ್ತಾ ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಉಚ್ಚನ್ಯಾಯಾಲಯ ಆದಾಯ ತೆರಿಗೆ ವಿನಾಯಿತಿಗೆ ಅರ್ಹವೆಂದು ತೀರ್ಪು ನೀಡಿದ್ದು, ನಮಗೆಲ್ಲ ಸಂತಸ ತಂದಿದೆ ಎಂದರು. ರಾಜ್ಯದಲ್ಲಿ ನಾಲ್ಕು ಸಾವಿರಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳು ಕಾರ್ಯನಿರ್ವಹಿಸುತ್ತಿವೆ. ತೆರಿಗೆ ಇಲಾಖೆಯಿಂದ ಸಹಕಾರಿಗಳಿಗೆ ತೆರಿಗೆ ನೋಟಿಸ್ ನೀಡುವುದಲ್ಲದೇ ಆದೇಶ ಹೊರಡಿಸುತ್ತಿದ್ದರು ಇದರಿಂದ ಸೌಹಾರ್ದ ಸಹಕಾರಿಗಳಿಗೆ ಆತಂಕ ಮನೆ ಮಾಡಿತ್ತು. ಎರಡು ವರ್ಷಗಳ ಪ್ರಯತ್ನದ ಫಲವಾಗಿ ನ್ಯಾಯಾಲಯ ವಿನಾಯಿತಿಗೆ ಅರ್ಹ ಎಂದಿರುವುದು ಸಂತಸ ತಂದಿದೆ ಎಂದರು.

## ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಮಹಾಮಂಡಳಕ್ಕೆ ಸರಕಾರದ ಸಂಪೂರ್ಣ ಬೆಂಬಲ – ಸಹಕಾರ ಸಚಿವ ಎಸ್. ಟಿ. ಸೋಮಶೇಖರ್

ಕರ್ನಾಟಕ ರಾಜ್ಯ ಬಸವೇಶ್ವರ ಸುದ್ಧಿ ಮಾಧ್ಯಮದ ಸಂಸ್ಥಾಪಕ ಮಾರ್ಗದರ್ಶಕರಾದ ಎಸ್. ಎಸ್ ಪಾಟೀಲ ರವರು ಸಹಕಾರ ಕ್ಷೇತ್ರದಲ್ಲಿ ಮಂತ್ರಿಗಳಾಗಿ ಹಾಗೂ ಸಹಕಾರ ಕ್ಷೇತ್ರದಲ್ಲಿ ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿದರು. ಅವರು ಮಂತ್ರಿಗಳಾಗಿದ್ದಾಗ ನಾನು ಸಹ ರಾಜ್ಯ ಮಟ್ಟದ ಅಧ್ಯಕ್ಷನಾಗಿ ಅವರೊಂದಿಗೆ ಕಾರ್ಯನಿರ್ವಹಿಸಿರುತ್ತೇನೆಂದು ಸಹಕಾರ ಸಚಿವರಾದ ಶ್ರೀ ಎಸ್.ಟಿ ಸೋಮಶೇಖರ್ ರವರು ತಿಳಿಸಿದರು. ಈ ಮಹಾಮಂಡಳವು ಪ್ರತಿಯೊಂದು ಗ್ರಾಮಕ್ಕೂ ಸಹ 100ಕ್ಕೆ 100 ಅವಶ್ಯಕತೆವಿದೆವೆಂದು ತಿಳಿಸಿದರು. ಮಾನ್ಯ ಮುಖ್ಯಮಂತ್ರಿಗಳು ಸಹ ಇದಕ್ಕೆ ಸಂಪೂರ್ಣ ಬೆಂಬಲವನ್ನು ನೀಡಿರುತ್ತಾರೆ ಹಾಗೂ ಸಹಕಾರ ಸಚಿವನಾಗಿ ಸಹಕಾರ ಇಲಾಖೆಯಿಂದ ಸಂಪೂರ್ಣ ಬೆಂಬಲವನ್ನು ನೀಡುವುದ್ದಾಗಿ ತಿಳಿಸಿದರು.

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

ಶಾಸನಬದ್ಧ ಸಹಕಾರಿ ಸಂಸ್ಥೆ

ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010

www.souharda.coop, Ph: 080–23378375–80, Email:souharda@souharda.coop

## ಕಣ್ವ ಸೌಹಾರ್ದ ಸಹಕಾರಿಗೆ ಸಂಬಂಧಿಸಿದಂತೆ ಸಾರ್ವಜನಿಕ ಪ್ರಕಟಣೆ

ಶ್ರೀ ಕಣ್ವ ಸೌಹಾರ್ದ ಕೋ–ಆಪರೇಟಿವ್ ಕ್ರೆಡಿಟ್ ಲಿ., ಕಣ್ವ ಶ್ರೀ ಸಾಯಿ ಕಾಂಪ್ಲೆಕ್ಸ್, ಡಾ. ಮೋದಿ ಆಸ್ಪತ್ರೆ ರಸ್ತೆ, ರಾಜಾಜಿನಗರ, ಬೆಂಗಳೂರು–560086 ಇದರಲ್ಲಿ ಸಾವಿರಾರು ಸದಸ್ಯರು ಹೂಡಿಕೆ ಮಾಡಿದ್ದು, ಹೂಡಿಕೆದಾರರಿಗೆ ಮೊತ್ತ ಮರುಪಾವತಿ ಮಾಡದ ಹಿನ್ನೆಲೆಯಲ್ಲಿ ಪೋಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯಿಂದ ಪರಿವೀಕ್ಷಣೆ ಮಾಡಲಾಗಿದ್ದು, ಪರಿವೀಕ್ಷಣಾ ವರದಿ ಪ್ರಕಾರ ಹಣಕಾಸು ಅಕ್ರಮ/ಅವ್ಯವಹಾರ ನಡೆದಿರುವುದು ಕಂಡುಬಂದಿರುತ್ತದೆ. ಆದಕಾರಣ ಸಹಕಾರಿಯ ನಿರ್ದೇಶಕರನ್ನು ಅನರ್ಹಗೊಳಿಸಿ, ಸಂಯುಕ್ತ ಸಹಕಾರಿಯ ಪ್ರಾಂತೀಯ ವ್ಯವಸ್ಥಾಪಕರನ್ನು ಸದರಿ ಸಹಕಾರಿಯ ವಿಶೇಷಾಧಿಕಾರಿಯಾಗಿ ಆದೇಶ ಸಂಖ್ಯೆ: ಸಂ.ಸ/ಶಾ–10/ನಿ/ಬಿಜಿಯು–0056/2019–20 ರಡಿಯಲ್ಲಿ ದಿನಾಂಕ: 07.02.2020 ರಿಂದ ಅನ್ವಯವಾಗುವಂತೆ ನೇಮಕಾತಿ ಮಾಡಿ ಆದೇಶಿಸಿದೆ. ಕರ್ನಾಟಕ ಸರ್ಕಾರದ ಸಹಕಾರ ಇಲಾಖೆಯ ಸಹಕಾರಿಗಳ ನಿಬಂಧಕರ ಕಛೇರಿಯಿಂದ ಸಹಕಾರಿ ಸಂಘಗಳ ಉಪ ನಿಬಂಧಕರು, 1ನೇ ವಲಯ, ಸಹಕಾರ ಸೌಧ, 8ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು ಇವರನ್ನು ಆದೇಶ ಸಂಖ್ಯೆ:ಆರ್‌ಸಿಎಸ್/ಆರ್‌ಎಸ್‌ಆರ್/ಸೌಹಾರ್ದ/142/2019–20 ದಿನಾಂಕ: 30.11.2019 ರಂತೆ ವಿಚಾರಣಾಧಿಕಾರಿಯನ್ನಾಗಿ ನೇಮಕ ಮಾಡಲಾಗಿದೆ.

ಸದರಿ ಸಹಕಾರಿಯ ಆಡಳಿತ ಮಂಡಲಿ ಸದಸ್ಯರ ಮೇಲೆ ದಾವಾಪಂಚಾಯತಿ ನ್ಯಾಯಾಲಯದಲ್ಲಿ "ಅಧಿಭಾರ ಅರ್ಜಿ (ಸರ್‌ಚಾರ್ಜ್)" ಪ್ರಕರಣ ದಾಖಲಿಸಲಾಗಿದೆ. ಶ್ರೀ ಕಣ್ವ ಸೌಹಾರ್ದ ಕೋ–ಆಪರೇಟಿವ್ ಕ್ರೆಡಿಟ್ ಲಿ., ಇದರ ಮರುಲೆಕ್ಕಪರಿಶೋಧನೆ ಮಾಡಲು ಲೆಕ್ಕಪರಿಶೋಧಕರನ್ನು ನೇಮಕಾತಿ ಮಾಡುವಂತೆ ರಾಜ್ಯ ಸರ್ಕಾರಕ್ಕೆ ಹಾಗೂ ಸಹಕಾರ ಇಲಾಖೆಗೆ ಮನವಿ ಮಾಡಿದೆ ಹಾಗೂ ಕರ್ನಾಟಕ ಹಣಕಾಸು ಸಂಸ್ಥೆಗಳ ಠೇವಣಿದಾರರ ಹಿತಸಂರಕ್ಷಣಾ ಕಾಯ್ದೆ 2004ರನ್ವಯ "ಸಕ್ಷಮ ಪ್ರಾಧಿಕಾರ (ಕಾಂಪಿಟೆಂಟ್ ಅಥಾರಿಟಿ)" ವನ್ನು ನೇಮಕ ಮಾಡುವಂತೆ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಗೆ ಪತ್ರ ಬರೆಯಲಾಗಿದೆ.

ಈ ನಡುವೆ ಕಣ್ವ ಸಹಕಾರಿಗೆ ಸಂಬಂಧಿಸಿದ ಕೆಲವು ವ್ಯಕ್ತಿಗಳು ಸಾರ್ವಜನಿಕ/ಸದಸ್ಯರು ಇಟ್ಟಿರುವ ಠೇವಣಿ ಬದಲಾಗಿ ನಿವೇಶನ, ಕಣ್ವ ರೆಸಾರ್ಟ್ ಸದಸ್ಯತ್ವ, ಕಣ್ವ ಫ್ಯಾಷನ್ಸ್ ಶೇರು ಇತ್ಯಾದಿ ನೀಡುವುದಾಗಿ ಆಮೀಷಗಳ ಮೂಲಕ ಮತ್ತು ಠೇವಣಿದಾರರಿಂದ ಹೆಚ್ಚಿನ ಹಣವನ್ನು ಸಂಗ್ರಹಿಸುವ ಕೆಲಸ ಮತ್ತು ಕಣ್ವ ಸೌಹಾರ್ದ ಸಹಕಾರಿಯ ಠೇವಣಿ ಮೂಲ ಪ್ರಮಾಣ ಪತ್ರಗಳನ್ನು ಹಿಂಪಡೆಯುತ್ತಿರುವುದು ತಿಳಿದು ಬಂದಿರುತ್ತದೆ. ಯಾರೂ ಸಹ ಈ ರೀತಿಯ ಆಮೀಷಗಳಿಗೆ ಒಪ್ಪಿಕೊಳ್ಳದೆ ತಮ್ಮ ಠೇವಣಿಯ ಮೂಲಪ್ರಮಾಣ ಪತ್ರಗಳನ್ನು ನೀಡದಿರಲು ಹಾಗೂ ಯಾವುದೇ ಆಸೆ ಆಮೀಷಗಳಿಗೆ ಮೋಸಕ್ಕೆ ಒಳಗಾಗದಿರಲು ಈ ಮೂಲಕ ತಿಳಿಸಿದೆ.

ಶ್ರೀ ಕಣ್ವ ಸೌಹಾರ್ದ ಕೋ–ಆಪರೇಟಿವ್ ಕ್ರೆಡಿಟ್ ಲಿ.,ಯಿಂದ ಕಣ್ವ ಸಮೂಹ ಸಂಸ್ಥೆಗಳು ರೂ.422 ಕೋಟಿ ಸಾಲ ಪಡೆದಿದ್ದು, ಸುಸ್ತಿಯಾಗಿರುತ್ತದೆ. ಈ ಸಾಲ ಪೂರ್ಣವಾಗಿ ಸಹಕಾರಿಗೆ ಮರುಪಾವತಿಸದೇ ಯಾವುದೇ ಆಸ್ತಿಗಳನ್ನು ಪರಭಾರೆ ಮಾಡುವಂತಿಲ್ಲ. ಆದ್ದರಿಂದ ಕಣ್ವ ಸಮೂಹಕ್ಕೆ ಸಂಬಂಧಿಸಿದ ಯಾವುದೇ ಆಸ್ತಿಗಳನ್ನು ಯಾರಾದರು ಖರೀದಿಸಿದರೆ ಅದಕ್ಕೆ ತಾವೇ ಜವಾಬ್ದಾರರು. ಸಾರ್ವಜನಿಕರ/ಠೇವಣಿದಾರರ ಹಿತದೃಷ್ಟಿಯಿಂದ ಈ ಪ್ರಕಟಣೆ ನೀಡಿದೆ.

(ಶರಣಗೌಡ ಜಿ. ಪಾಟೀಲ)
ವ್ಯವಸ್ಥಾಪಕ ನಿರ್ದೇಶಕ

# ಪಟ್ಟಣ ಸಹಕಾರ ಬ್ಯಾಂಕುಗಳ ಹಾಗೂ ಸಹಕಾರ ಸಂಸ್ಥೆಗಳ ರಾಜ್ಯ ಸಮ್ಮೇಳನ - 2020

ದೇಶದ ಸಹಕಾರ ಕ್ಷೇತ್ರದ ಬೆಳವಣಿಗೆ ಹಾಗೂ ಸಹಕಾರ ಕ್ಷೇತ್ರ ಎದುರಿಸುತ್ತಿರುವ ಸವಾಲುಗಳ ನಿವಾರಣೆಯಲ್ಲಿ ಮುಂಚೂಣಿಯಲ್ಲಿ ನಿಂತು ಸಹಕಾರ ಭಾರತಿ ಸಂಘಟನೆಯು ನಿರಂತರವಾಗಿ ಶ್ರಮಿಸುತ್ತಿದೆ. ಸಹಕಾರ ಕ್ಷೇತ್ರದ ಪ್ರಮುಖ ಭಾಗವಾಗಿರುವ ಸಹಕಾರಿ ಪಟ್ಟಣ ಬ್ಯಾಂಕುಗಳ ಅಭಿವೃದ್ಧಿ ಹಾಗೂ ಪ್ರಸಕ್ತ ಆರ್ಥಿಕ ಸನ್ನಿವೇಶದಲ್ಲಿ ಸಹಕಾರ ಬ್ಯಾಂಕುಗಳ ಪಾತ್ರದ ಕುರಿತು ಚಿಂತನೆ ನಡೆಸಲು ಪಟ್ಟಣ ಸಹಕಾರ ಬ್ಯಾಂಕುಗಳ ಹಾಗೂ ಸಹಕಾರ ಸಂಘಗಳ ರಾಜ್ಯ ಸಮ್ಮೇಳನವನ್ನು "ಸಹಕಾರ ಭಾರತಿ – ಕರ್ನಾಟಕ" ದಿಂದ ದಿನಾಂಕ 07 ಮಾರ್ಚ್ 2020ರಂದು ಪುಟ್ಟಣ್ಣ ಚೆಟ್ಟಿ ಪುರಭವನ, ಜೆ ಸಿ ರಸ್ತೆ, ಬೆಂಗಳೂರು ಇಲ್ಲಿ ಆಯೋಜಿಸಲಾಗಿದೆ. ಈ ಸಮ್ಮೇಳನದ ಉದ್ಘಾಟನೆಯನ್ನು ಕೇಂದ್ರ ಹಣಕಾಸು ಸಚಿವರಾದ ಶ್ರೀಮತಿ ನಿರ್ಮಲಾ ಸೀತಾರಾಮನ್ ಇವರು ನಡೆಸಿಕೊಡಲಿದ್ದಾರೆ. ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಲಕ್ಷ್ಮಣ ಸವದಿ, ಮಾನ್ಯ ಸಹಕಾರ ಸಚಿವರಾದ ಶ್ರೀ ಎಸ್ ಟಿ ಸೋಮಶೇಖರ್, ಮಾಜಿ ಸಚಿವರು ಹಾಗೂ NAFCUB ಗೌರವ ಅಧ್ಯಕ್ಷರು ಆದ ಶ್ರೀ ಹೆಚ್ ಕೆ ಪಾಟೀಲ್, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ನಿರ್ದೇಶಕರು, ಸಹಕಾರ ಭಾರತಿಯ ಮಹಾಪೋಷಕರು ಹಾಗೂ ಎನ್‌ಸಿಡಿಸಿ, ನವದೆಹಲಿ ಇದರ ನಿರ್ದೇಶಕರಾದ ಶ್ರೀ ಸತೀಶ್ ಮರಾಠೆ, ಸಹಕಾರ ಭಾರತಿಯ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ರಮೇಶ ವೈದ್ಯ, NAFCUB ಅಧ್ಯಕ್ಷರಾದ ಶ್ರೀ ಜ್ಯೋತೀಂದ್ರ ಮೆಹ್ತಾ ಹಾಗೂ ಇನ್ನಿತರ ಪ್ರಮುಖ ಹಿರಿಯ ಸಹಕಾರಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ. ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಹಾಗೂ ಸಹಕಾರ ಸಂಘಗಳ ಅಧ್ಯಕ್ಷರು/ನಿರ್ದೇಶಕರು/ವೃತ್ತಿಪರ ನಿರ್ದೇಶಕರು/ವ್ಯವಸ್ಥಾಪಕರು ಸೇರಿದಂತೆ 1000ಕ್ಕೂ ಹೆಚ್ಚು ಸಹಕಾರ ಪ್ರತಿನಿಧಿಗಳು ಭಾಗವಹಿಸುವ ನಿರೀಕ್ಷೆಯಿದೆ.

**ಮಾನ್ಯ ಕೇಂದ್ರ ಹಣಕಾಸು ಸಚಿವರಿಗೆ ಮನವಿ :** ಸಹಕಾರ ಸಂಘಗಳ ಆದಾಯ ತೆರಿಗೆ ತೊಂದರೆ ನಿವಾರಣೆ ಕುರಿತಂತೆ ಈ ಸಮ್ಮೇಳನದಲ್ಲಿ ಮಾನ್ಯ ಹಣಕಾಸು ಸಚಿವರಿಗೆ ಮನವಿ ಸಲ್ಲಿಸಲಾಗುವುದು. ಸದರಿ ಮನವಿಯು ಈ ಕೆಳಕಂಡ ವಿಷಯಗಳನ್ನೊಳಗೊಂಡಿರುತ್ತದೆ.

- ಸಹಕಾರ ಸಂಸ್ಥೆಗಳಿಗೆ 80ಪಿ ಅಡಿಯಲ್ಲಿ ತೆರಿಗೆ ವಿನಾಯಿತಿ ಇರುವುದನ್ನು ರಾಜ್ಯ ಉಚ್ಚನ್ಯಾಯಾಲಯ ಕೂಡ ಪ್ರತಿಪಾದಿಸಿದ್ದು, ಈ ವಿಷಯಕ್ಕೆ ಸಂಬಂಧಿಸಿದಂತೆ ಆದಾಯ ತೆರಿಗೆ ಇಲಾಖೆಗೆ ಸ್ಪಷ್ಟತೆ ಮೂಡಿಸುವುದು.
- ರಾಜ್ಯ ಕಾಯ್ದೆಯಲ್ಲಿರುವ ಸಹ ಸದಸ್ಯರು ಹಾಗೂ ನಾಮ ಮಾತ್ರ ಸದಸ್ಯರ ಅವಕಾಶವನ್ನು ಪರಿಗಣಿಸದೆ ಇವರೊಂದಿಗಿನ ವ್ಯವಹಾರಕ್ಕೆ ತೆರಿಗೆ ವಿಧಿಸುತ್ತಿರುವುದನ್ನು ನಿಲ್ಲಿಸಲು ಕ್ರಮವಿಡುವುದು.
- ಸಹಕಾರ ಬ್ಯಾಂಕುಗಳಿಗೆ ಅನ್ವಯವಾಗುವ ಪ್ರಾವಧಾನವನ್ನು ಸಹಕಾರ ಸಂಸ್ಥೆಗಳಿಗೂ ಅನ್ವಯಿಸಿ ತೆರಿಗೆ ವಿಧಿಸುತ್ತಿರುವುದನ್ನು ಹಾಗೂ ಸಹಕಾರಿಗಳು ಬ್ಯಾಂಕಿನಲ್ಲಿಟ್ಟಿರುವ ಮೀಸಲು ನಿಧಿಗಳ ಮೇಲಿನ ಬಡ್ಡಿಗೆ ತೆರಿಗೆ ಪಾವತಿ ಮಾಡಲು ಸೂಚಿಸುತ್ತಿರುವುದನ್ನು ತಡೆಯುವುದು.
- ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್‌ಗಳಾದ 269ಎಸ್‌ಟಿ, 194ಎನ್, 269ಎಸ್‌ಎಸ್ & 269ಟಿ ಮೂಲಕ ಸಹಕಾರ ಸಂಸ್ಥೆಗಳಿಗೆ ವಿಧಿಸಿರುವ ನಗದು ವ್ಯವಹಾರದ ಮಿತಿಯಿಂದ ವಿನಾಯಿತಿ ನೀಡುವುದು.

**ಮಾನ್ಯ ಕೇಂದ್ರ ಹಣಕಾಸು ಸಚಿವರಿಗೆ ಅಭಿನಂದನೆ :** ಕೇಂದ್ರ ಹಣಕಾಸು ಸಚಿವರಾದ ಶ್ರೀಮತಿ ನಿರ್ಮಲಾ ಸೀತಾರಾಮನ್‌ರವರು ದಿನಾಂಕ 01.02.2020ರಂದು ಸಂಸತ್‌ನಲ್ಲಿ ಮಂಡಿಸಿದ ಬಜೆಟ್‌ನಲ್ಲಿ ಪ್ರಪ್ರಥಮ ಭಾರಿಗೆ ಸಹಕಾರಿ ಕ್ಷೇತ್ರದ ಬಗ್ಗೆ, ವಿಶೇಷವಾಗಿ ಪಟ್ಟಣ ಸಹಕಾರ ಬ್ಯಾಂಕುಗಳ ಬಗ್ಗೆ ಪ್ರಸ್ತಾಪಿಸಿರುವುದು ಸಹಕಾರಿಗಳಿಗೆ ಸಂತೋಷದ ವಿಷಯವಾಗಿದೆ. ಸಹಕಾರ ಕ್ಷೇತ್ರದ ಬೆಳವಣಿಗೆಯ ಬಗ್ಗೆ ಇನ್ನಷ್ಟು ಸುಧಾರಣೆಯ ಅಗತ್ಯತೆಯಿದೆ. ಈ ಸಮ್ಮೇಳನದ ಮೂಲಕ ಮಾನ್ಯ ಕೇಂದ್ರ ಹಣಕಾಸು ಸಚಿವರಿಗೆ ಸಹಕಾರ ಕ್ಷೇತ್ರದ ತೊಂದರೆಗಳನ್ನು ಮನವರಿಕೆ ಮಾಡುವುದರ ಜೊತೆಗೆ ಅಭಿನಂದನೆ ಸಲ್ಲಿಸುವ ಉದ್ದೇಶ ಹೊಂದಲಾಗಿದೆ.


## ಉದ್ಘಾಟನೆ



**ಉಡುಪಿ:** ಸ್ವದೇಶಿ ವರ್ತಕರ ಸೌಹಾರ್ದ ಸಹಕಾರಿ ನಿ., ಕುಂದಾಪುರ ಸಹಕಾರಿಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ ಇವರು ನೇರವೇರಿಸಿದರು.




**ಚಿಕ್ಕೋಡಿ:** ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿಯ 11ನೇ ಶಾಖಾ ಕಛೇರಿ ಹಾಗೂ ಬೆಳಗಾವಿ ನಗರದ 3ನೇ ಶಾಖೆಯ ಇ–ಸ್ಟಾಂಪಿಂಗ್ ಕೇಂದ್ರ ಉದ್ಘಾಟನಾ ಸಮಾರಂಭವು ದಿನಾಂಕ 29.01.2020ರಂದು ಮುಂಜಾನೆ 10.30ಗಂಟೆಗೆ ಬೆಳಗಾವಿ ನಗರದ ಕಛೇರಿ ರೋಡ, ಬಡಕಲ್ ಗಲ್ಲಿಯಲ್ಲಿರುವ ಬಡವನ್ನಾಚೆ ಕಾಂಪ್ಲೆಕ್ಸ್‌ನಲ್ಲಿ ಪೂಜಾ ಸಮಾರಂಭದೊಂದಿಗೆ ಉದ್ಘಾಟನೆ ಮಾಡಲಾಯಿತು. ಸದರಿ ಸಮಾರಂಭದ ಉದ್ಘಾಟನೆಯನ್ನು ಶ್ರೀ ಅನೀಲ ಮುಳವಾಡಮಠ, ಅಧ್ಯಕ್ಷರು, ಬೆಳಗಾವಿ ನ್ಯಾಯಾವಾಧಿಗಳ ಸಂಘ ಬೆಳಗಾವಿ ಇವರ ಅಮೃತ ಹಸ್ತದಿಂದ ನೇರವೇರಿಸಲಾಯಿತು. ಸದರಿ ಸಮಾರಂಭಕ್ಕೆ ಶ್ರೀ ಚಂದ್ರಶೇಖರ ಮಜ್ಜಗಿ, ಉಪಾಧ್ಯಕ್ಷರು ನ್ಯಾಯಾವಾದಿಗಳ ಸಂಘ, ಬೆಳಗಾವಿ, ಹಾಗೂ ಶ್ರೀ ಅನೀಲ ಮಾಂಗಳೇಕರ, ನಿರ್ದೇಶಕರು, ಕರ್ನಾಟಕ ರಾಜ್ಯ ನ್ಯಾಯವಾದಿಗಳ ಸಂಘ, ಬೆಂಗಳೂರು ಹಾಗೂ ನ್ಯಾಯಾವಾದಿಗಳಾದ ಶ್ರೀ ರಾಜಶೇಖರ ಪಾಟೀಲ ಹಾಗೂ ಸಹಕಾರಿಯ ಬೆಳಗಾವಿ ಶಾಖೆಯ ಉಪಾಧ್ಯಕ್ಷರಾದ ಶ್ರೀ ಬಿ.ಬಿ.ಪಾಟೀಲ ಹಾಗೂ ನಿರ್ದೇಶಕರುಗಳಾದ ಶ್ರೀ ಪ್ರವೀಣ ಮೋತಿಮಠ, ಶ್ರೀ ಎಸ್. ಆರ್ ಹಿರೇಮಠ, ಶ್ರೀ ಎ.ಎಸ್. ಕೇರೂರೆ, ಶ್ರೀ ಅರುಣ ಮಾನೆ ಹಾಗು ಶ್ರೀ ಬಸವೇಶ್ವರ ಸಹಕಾರಿ ಬ್ಯಾಂಕ್ ಬೆಳಗಾವಿಯ ನಿರ್ದೇಶಕರಾದ ಶ್ರೀ ಗಿರೀಶ ಕತ್ತಿಶೆಟ್ಟಿ ಹಾಗೂ ಸಹಕಾರಿ ಸದಸ್ಯರು, ಠೇವುದಾರರು ಮತ್ತು ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಎಮ್.ಬಿ. ಬಡಿಗೇರ ಮತ್ತು ಶಾಖಾ ವ್ಯವಸ್ಥಾಪಕರಾದ ಶ್ರೀ ನಾಗೇಶ ಪಚ್ಚಾಪೂರ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಕಲಬುರಗಿ:** ದಿನಾಂಕ 26.02.2020ರಂದು ಕಲಬುರಗಿ ಜಿಲ್ಲೆಯ ಶ್ರೀ ಧನಲಕ್ಷ್ಮೀ ಸೌಹಾರ್ದ ಸಹಕಾರಿ ನಿ., ಸರಸಂಬಾ ಸಹಕಾರಿ ಶಾಖೆಯ ಉದ್ಘಾಟನೆಯನ್ನು ಆಳಂದ ತಾಲೂಕಿನ ಮಾನ್ಯ ಶಾಸಕರಾದ ಶ್ರೀ ಸುಭಾಷ ಆರ್ ಗುತ್ತೆದಾರ ಇವರು ನೇರವೇರಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನರವರು ಹಾಗೂ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ. ಹೆಚ್ ಉಪಸ್ಥಿತರಿದ್ದರು.



**ಚಿಕ್ಕೋಡಿ:** ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿಯ 12ನೇ ಶಾಖಾ ಕಛೇರಿ ಹಾಗೂ ಬೈಲಹೊಂಗಲ ಪಟ್ಟಣದ 2ನೇ ಶಾಖೆಯ ಇ–ಸ್ಟಾಂಪಿಂಗ್ ಕೇಂದ್ರ ಉದ್ಘಾಟನಾ ಸಮಾರಂಭವು ದಿನಾಂಕ 31.01.2020ರಂದು ಮುಂಜಾನೆ 10.30ಗಂಟೆಗೆ ಬೈಲಹೊಂಗಲ ಪಟ್ಟಣದಲ್ಲಿರುವ ಮಹಾಂತೇಶ ಜಿನ್ನಿಂಗ್ ಕಾರ್ಖಾನೆ ಆವರಣದಲ್ಲಿರುವ ಮೆಟಗುಡ್ಡ ಕಾಂಪ್ಲೆಕ್ಸ್‌ದಲ್ಲಿ ಶ್ರೀ ಮ.ನಿ.ಪ್ರ. ನೀಲಕಂಠಪ್ರಭು ಮಹಾಸ್ವಾಮಿಗಳು, ಮೂರು ಸಾವಿರ ಮಠ ಬೈಲಹೊಂಗಲ, ಇವರ ದಿವ್ಯ ಸಾನಿಧ್ಯ ಹಾಗೂ ಅಮೃತ ಹಸ್ತದಿಂದ ಪೂಜಾ ಸಮಾರಂಭದೊಂದಿಗೆ ಉದ್ಘಾಟಿಸಿಲಾಯಿತು. ಸದರಿ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಶ್ರೀಮತಿ ವಿದ್ಯಾ ಹಂಡಿಭಾಗ, ಹಿರಿಯ ನೋಂದಣಾಧಿಕಾರಿಗಳು, ಬೈಲಹೊಂಗಲ ಇವರು ಉಪಸ್ಥಿತರಿದ್ದರು. ಹಾಗೂ ಶ್ರೀ ವಿಶ್ವನಾಥ ಹಿರೇಮಠ ವೇದಮೂರ್ತಿಗಳು ಬೈಲಹೊಂಗಲ, ಉದ್ಯಮಿ ಶ್ರೀ ವಿಜಯ ಮೆಟಗುಡ್ಡ, ಶ್ರೀ ವಿಶ್ವನಾಥ ಗಚ್ಚಿನಮಠ ಹಾಗೂ ಶಾಖಾ ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಕುಲಕರ್ಣಿ, ನಿರ್ದೇಶಕರುಗಳಾದ ಶ್ರೀ ಮಲ್ಲಿಕಾರ್ಜುನ ವಕ್ಕುಂದಮಠ, ಶ್ರೀ ಮೇಹಬೂಬಸುಬಾನಿ, ನದಾಫ, ಶ್ರೀ ಸುಭಾಷ್ ಬಾಗೇವಾಡಿ, ಹಾಗೂ ಸಹಕಾರಿಯ ಸದಸ್ಯರು, ಠೇವುದಾರರು ಮತ್ತು ಪ್ರ.ಕ. ಉಪ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಸಂತೋಷ್ ಶಿವಮೊಗ್ಗಿಮಠ, ಶಾಖಾ ವ್ಯವಸ್ಥಾಪಕರಾದ ಶ್ರೀ ಫಕ್ರುಸಾಬ ಹಳೇಮನಿ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ದಾವಣಗೆರೆ:** ಸುಕೋ ಬ್ಯಾಂಕ್ 01.02.2020 ರಂದು ಶನಿವಾರ ದಾವಣಗೆರೆಯಲ್ಲಿ ಏರ್ಪಡಿಸಿದ್ದ 'ಸುಕೋ ಸಂಜೆ' ಸಾಂಸ್ಕೃತಿಕ ಕಾರ್ಯಕ್ರಮವನ್ನು ದಾವಣಗೆರೆ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಭೆಯ ಕಾರ್ಯದರ್ಶಿ ಅಜ್ಜಂಪುರ ಶೆಟ್ರು ಶಂಭುಲಿಂಗಪ್ಪ ಅವರು ಉದ್ಘಾಟಿಸಿದರು. ವೇದಿಕೆಯಲ್ಲಿ ಬ್ಯಾಂಕ್‌ನ ಅಧ್ಯಕ್ಷ ಮೋಹಿತ್ ಮಸ್ಕಿ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಕಲಾವಿದರಾದ ಎಸ್.ಟಿ. ಗಂಗಾಧರ, ಕೆ.ಇ. ಪ್ರಕಾಶ್, ಡಾ. ರುದ್ರೇಶ್, ರಮೇಶ್ ಹೆಗಡೆ, ಹಾಸ್ಯನಟ ಯಶವಂತ ಸರದೇಶಪಾಂಡೆ ಹಾಗೂ ಬ್ಯಾಂಕ್‌ನ ಆಡಳಿತ ಮಂಡಳಿಯ ಕಾರ್ಯದರ್ಶಿ ಉಪಸ್ಥಿತರಿದ್ದರು.



**ಕೊಪ್ಪಳ:** ದಿನಾಂಕ 31-01-2020 ರಂದು ಕೊಪ್ಪಳ ಜಿಲ್ಲೆಯ ಹಿರೇಬಗನಾಳ ಗ್ರಾಮದಲ್ಲಿ ನೂತನ ಸೌಹಾರ್ದ ಸಹಕಾರಿಯಾದ ನೇಗಿಲಯೋಗಿ ಹಿರೇಬಗನಾಳ ಪತ್ತಿನ ಸೌಹಾರ್ದ ಸಹಕಾರಿಯ ಉದ್ಘಾಟನೆಯನ್ನು ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಬಿ.ಪತ್ತಾರ, ಶುಕಪುರಿ ಪತ್ತಿನ ಸೌಹಾರ್ದ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಶರಣಪ್ಪ ಹ್ಯಾಟಿ, ಜ್ಯೋತಿಶ್ರೀ ಪತ್ತಿನ ಸೌಹಾರ್ದ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ನಾರಾಯಣಪ್ಪ ಪತ್ತಾರ, ಉದಯೋನ್ಮುಖ ಪತ್ತಿನ ಸೌಹಾರ್ದ ಸಹಕಾರಿಯ ಮಾನ್ಯ ಅಧ್ಯಕ್ಷರು, ಮಾತೋಶ್ರೀ ಪತ್ತಿನ ಸೌಹಾರ್ದ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಮುದ್ದಪ್ಪ ಜಿ, ನೂತನ ಸಹಕಾರಿಯ ಪ್ರತಿನಿಧಿಗಳು ಮತ್ತು ಸದಸ್ಯರು ಮತ್ತು ಜಿಲ್ಲಾ ಸಂಯೋಜಕರಾದ ಶ್ರೀ ಪವನ ಉಪಸ್ಥಿತರಿದ್ದರು.

## ಸಂಯುಕ್ತ ಸಹಕಾರಿ ನಿರ್ದೇಶಕರಾದ ಶ್ರೀ ಆರ್. ತಿಮ್ಮಯ್ಯಶೆಟ್ಟಿ ಇವರಿಗೆ ವಾಸವಿ ಜೀವಮಾನ ಸಾಧನೆ ಪ್ರಶಸ್ತಿ



**ರಾಯಚೂರು:** ರಾಯಚೂರು: ದಿನಾಂಕ 01.03.2020 ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರು ಹಾಗೂ ಮಾನ್ವಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಆರ್. ತಿಮ್ಮಯ್ಯ ಶೆಟ್ಟಿ ಇವರು ಸಹಕಾರ ಕ್ಷೇತ್ರಕ್ಕೆ ತಮ್ಮನ್ನು ತಾವು ತೊಡಗಿಸಿ ಸಹಕಾರ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಗುರುತಿಸಿ ಆರ್ಯ ವೈಶ್ಯ ಸಮಾಜ, ಸುವರ್ಣ ನ್ಯೂಸ್ ಟಿವಿ ಮತ್ತು ಕನ್ನಡ ಪ್ರಭ ದಿನಪತ್ರಿಕೆ ಇವರುಗಳು ಜಂಟಿಯಾಗಿ "ವಾಸವಿ ಜೀವಮಾನ ಅವಾರ್ಡ್-2019" ಪ್ರಶಸ್ತಿ ದೊರಕಿದೆ.

ಇವರಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ನಿರ್ದೇಶಕರಿಂದ ಅಭಿನಂದನೆಗಳು.

## ಸಾಮಾಜಿಕ ಕಾರ್ಯಕ್ರಮ



**ಮೂಡುಬಿದಿರೆ:** ಶ್ರೀ ಪಂಚಶಕ್ತಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ಮೂಡುಬಿದಿರೆ ಇವರು ಸಹಕಾರಿಯ ಸ್ವಸಹಾಯ ಸಂಘದ 4 ತಂಡಗಳಿಗೆ ಉಚಿತವಾಗಿ ಶೌಚಾಲಯವನ್ನು ನಿರ್ಮಿಸಿ ದಿನಾಂಕ 17.02.2020ರಂದು ಅಧ್ಯಕ್ಷರಾದ ಶ್ರೀ ರಂಜಿತ್ ಪೂಜಾರಿಯವರು ಹಸ್ತಾಂತರಿಸಿದರು. ಈ ಸಮಾರಂಭದಲ್ಲಿ ಸಹಕಾರಿಯ ನಿರ್ದೇಶಕರುಗಳಾದ ಶ್ರೀ ಗೋಪಾಲ ಶೆಟ್ಟಿಗಾರ್, ಶ್ರೀ ರವೀಂದ್ರ ಕರ್ಕೇರ, ಶ್ರೀ ಶರತ್ ಜೆ ಶೆಟ್ಟಿ, ಶ್ರೀ ಶಂಕರನಾರಾಯಣ ಭಟ್, ಶ್ರೀ ರಮೇಶ್ ಎಸ್ ಶೆಟ್ಟಿ, ಶ್ರೀ ರತ್ನಾಕರ ಪೂಜಾರಿ ಹಾಗೂ ಶಾಖಾಧಿಕಾರಿ ಶ್ರೀ ಯು.ಆರ್.ಮಧ್ಯಸ್ಥ ಉಪಸ್ಥಿತರಿದ್ದರು. ಸಹಕಾರಿಯ ಪ್ರಸಕ್ತ ವರ್ಷದ 7ನೇ ಸಮಾಜಸೇವೆ ಕಾರ್ಯಕ್ರಮ ಎಂದು ಅಧ್ಯಕ್ಷರು ತಿಳಿಸಿದರು.

## ಭೇಟಿ



**ಮಂಗಳೂರು:** ಆದರ್ಶ ಸೌಹಾರ್ದ ಸಹಕಾರಿ ನಿ. ಬೆಳಟ್ಟಿ ಮತ್ತು ಕರ್ನಾಟಕ ಕ್ರೆಡಿಟ್ ಸೌಹಾರ್ದ ಸಹಕಾರಿ ಗದಗ ಇದರ ಅಧ್ಯಕ್ಷರು ಮತ್ತು ನಿರ್ದೇಶಕರ ತಂಡ ಸ್ವ ಸಹಾಯ ಸಂಘಗಳ ಅಧ್ಯಯನ ಮಾಡುವ ದೃಷ್ಟಿಯಿಂದ ಉಜಿರೆಯ ಕಾಳಭೈರವ ಸೌಹಾರ್ದ ಸಹಕಾರಿ, ಮೂಡುಬಿದಿರೆ, ವಂದೇಮಾತರಂ ಮಾತರಂ ಸೌಹಾರ್ದ ಸಹಕಾರಿ, ಕೈಕಂಬದ ಮಾತೃಭೂಮಿ ಸೌಹಾರ್ದ ಸಹಕಾರಿ, ಮಂಗಳೂರಿನ ಒಡಿಯೂರು ಶ್ರೀ ವಿವಿದ್ದೋದ್ದೇಶ ಸೌಹಾರ್ದ ಸಹಕಾರಿಗೆ ಭೇಟಿ ನೀಡಿದರು.

## ಉದ್ಘಾಟನೆ



**ಚಾಮರಾಜನಗರ:** ಶ್ರೀ ಮುರುಘರಾಜೇಂದ್ರಸ್ವಾಮಿ ಸೌಹಾರ್ದ ಸಹಕಾರಿ ನಿ., ಮರಿಯಾಲ, ಚಾಮರಾಜನಗರ ಜಿಲ್ಲೆ ಇದರ ಉದ್ಘಾಟನೆ ಮತ್ತು ಪ್ರಥಮ ಸರ್ವಸದಸ್ಯರ ವಾರ್ಷಿಕ ಮಹಾ ಸಭೆಯನ್ನು ಶ್ರೀ ಹೆಚ್.ವಿ ರಾಜೀವ್, ನಿರ್ದೇಶಕರು, ಸಂಯುಕ್ತ ಸಹಕಾರಿ, ಬೆಂಗಳೂರು ಇವರು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಶ್ರೀ ಇಮ್ಮಡಿ ಮುರುಘರಾಜೇಂದ್ರಸ್ವಾಮಿಗಳು ದಿವ್ಯ ಸಾನಿಧ್ಯ ವಹಿಸಿದ್ದರು. ಕಾರ್ಯಕ್ರಮದಲ್ಲಿ ಶ್ರೀ ಬಿ. ನಂಜುಂಡಸ್ವಾಮಿ ಇವರು ಅಧ್ಯಕ್ಷತೆಯನ್ನು ವಹಿಸಿದ್ದರು.

## ಉಚಿತ ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟನೆ




**ಕೊಪ್ಪಳ:** ದಿನಾಂಕ 21.02.2020ರಂದು ಕುದರಿಮೊತಿ ಗ್ರಾಮದ ಶ್ರೀ ಜಗದ್ಗುರು ವಿಜಯಮಹಾಂತೇಶ್ವರ ಜಾತ್ರಾ ಮಹೋತ್ಸವ ಮತ್ತು ನೂತನ ರಥೋತ್ಸವದ ಪ್ರಯುಕ್ತ ಗಂಗಾ–ಕಾವೇರಿ ಪತ್ತಿನ ಸೌಹಾರ್ದ ಸಹಕಾರಿ ನಿ., ಇರಕಲ್ಲಗಡ, ಕೊಪ್ಪಳ ಸಹಕಾರಿಯ ವತಿಯಿಂದ ಉಚಿತ ಶುದ್ಧ ಕುಡಿಯುವ ನೀರಿನ ಸೇವೆಯನ್ನು ಮಾನ್ಯ ಲೋಕಸಭೆಯ ಸದಸ್ಯರಾದ ಶ್ರೀ ಕರಡಿ ಸಂಗಣ್ಣ ರವರು ಉದ್ಘಾಟನೆಯ ಮಾಡುವುದರ ಮುಖಾಂತರ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಯಲ್ಲಪ್ಪ ವಕೀಲರು, ಉಪಾಧ್ಯಕ್ಷರಾದ ಶ್ರೀ ಮುತ್ತಣ್ಣ ಪಟ್ಟಣ್ಣಶೆಟ್ಟಿ ಮತ್ತು ನಿರ್ದೇಶಕರಾದ ಶ್ರೀ ಪಂಪಣ್ಣ ಮನ್ನಾಪುರ ಮತ್ತು ಸಿಬ್ಬಂದಿವರ್ಗ ಹಾಗೂ ಪಿಗ್ಮಿಏಜೆಂಟರು ಉಪಸ್ಥಿತರಿದ್ದರು.




**ಶಿವಮೊಗ್ಗ:** ವಿಪ್ರ ವಿವಿದೋದ್ದೇಶ ಸೌಹಾರ್ದ ಸಹಕಾರಿಯ 2020–25ನೇ ಸಾಲಿನ ಸಹಕಾರಿಯ ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಶ್ರೀ ನಾರಾಯಣಮೂರ್ತಿ ಎಸ್ ಎ ಹಾಗೂ ಉಪಾಧ್ಯಕ್ಷರಾಗಿ ಶ್ರೀ ಗೋಪಾಲ್ ಎಸ್ ಜಿ ರವರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ.



**ಕೊಪ್ಪಳ :** ಶ್ರೀ ಗುರು ಸೃಷ್ಠಿಕರ್ತ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ ಗಿಣಿಗೇರಾ ದಿನಾಂಕ 01–01–2020 ರಂದು ಮಂಗಳವಾರ ಬೆಳಗ್ಗೆ 8:30 ರಂದು ಸೌಹಾರ್ದ ಸಹಕಾರಿ ದಿನಾಚರಣೆಯ ಧ್ವಜಾರೋಹಣವನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಸುರೇಶರಾವ್ ಕುಲಕರ್ಣಿ ನೇರವೇರಿಸಿದರು. ಈ ಕಾರ್ಯಕ್ರಮದಲ್ಲಿ ಸಹಕಾರಿಯ ಸದಸ್ಯರು, ಆಡಳಿತ ಮಂಡಳಿಯ ಸದಸ್ಯರು ಮತ್ತು ಸಿಬ್ಬಂದಿಯವರು ಹಾಗೂ ಪಿಗ್ಮಿ ಸಂಗ್ರಕರು ಉಪಸ್ಥಿತರಿದ್ದರು.

## ಶ್ರೀ ಕುಶ ರಮೇಶ ಕತ್ತಿ , ಬೆಲ್ಲದ ಬಾಗೇವಾಡಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾಗಿ ಆಯ್ಕೆ



**ಬೆಲ್ಲದ ಬಾಗೇವಾಡಿ:** ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕಿಗೆ ಸನ್ 2020ರಿಂದ 2025ರ ವರೆಗಿನ ಐದು ವರ್ಷಗಳ ಅವಧಿಗಾಗಿ ದಿನಾಂಕ 24.01.2020ರಂದು ಜರುಗಿದ ನಿರ್ದೇಶಕ ಮಂಡಳಿ ಚುನಾವಣೆಯಲ್ಲಿ ಸಾಮಾನ್ಯ ಕ್ಷೇತ್ರದಿಂದ ಶ್ರೀ ಕುಶ ರಮೇಶ ಕತ್ತಿ, ಶ್ರೀ ಮಲ್ಲಿಕಾರ್ಜುನ ಸಂಗಪ್ಪಾ ಬೆಲ್ಲದ, ಶ್ರೀ ಶಿವಗೌಡಾ ಸಾತಗೌಡಾ ಪಾಟೀಲ, ಶ್ರೀ ಸುರೇಶ ಬಸಲಿಂಗಪ್ಪಾ ಬೆಲ್ಲದ, ಶ್ರೀ ಮುರಗೇಶ ಬಸವರಾಜ ಕತ್ತಿ, ಶ್ರೀ ಮೋಹನ ಸತ್ತೆಪ್ಪಾ ಮುನ್ನೋಳಿ, ಶ್ರೀ ರಮೇಶ ಬಂಡಪ್ಪಾ ಮುನ್ನೋಳಿ, ಶ್ರೀ ಮಹಾವೀರ ಪಾರೆಸಪ್ಪಾ ಖೆಮಲಾಪೂರೆ, ಶ್ರೀ ಕಿಶೋರ ಸದಾಶಿವ ಕತ್ತಿ, ಶ್ರೀ ಸಿದ್ದಪ್ಪಾ ವೀರಪ್ಪಾ ಹಾಗರಗಿ, ಶ್ರೀ ವಿನಾಯಕ ಶಶಿಕಾಂತ ಬುರ್ಜಿ ಮಹಿಳಾ ಕ್ಷೇತ್ರದಿಂದ ಶ್ರೀಮತಿ ವಿಜಯಲಕ್ಷ್ಮೀ ಶಿವಪುತ್ರ ಶೆಟ್ಟಿ, ಶ್ರೀಮತಿ ಸಂಜೀವಿನಿ ಶ್ರೀಮಂತ ತೇರದಾಳ ಹಿಂದುಳಿದ ವರ್ಗ 'ಅ' ಕ್ಷೇತ್ರದಿಂದ ಶ್ರೀ ರಾಜಾರಾಮ ತುಕಾರಾಮ ಶಿರಾಳಕರ, ಶ್ರೀ ಶಮಸುದ್ದೀನ ದಸ್ತಗೀರಸಾಬ ಪಠಾಣ ಮತ್ತು ಪರಿಶಿಷ್ಟ ಜಾತಿ ಕ್ಷೇತ್ರದಿಂದ ಶ್ರೀ ಮನೋಹರ ನಾಗಪ್ಪಾ ಶ್ರೀಖಂಡೆ ಇವರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ ಹಾಗೂ ವೃತ್ತಿಪರ ನಿರ್ದೇಶಕರಾಗಿ ಶ್ರೀ ಲಕ್ಷ್ಮಣ ಸಿದ್ದಪ್ಪಾ ಕರಿಗಾರ ಮತ್ತು ಕು. ಆಫ್ರೀನ್ ಕುತುಬುದ್ದಿನ್ ಅಮ್ಮಣಗಿ ಇವರು ಸಹಮತದಿಂದ ಆಯ್ಕೆಯಾಗಿರುತ್ತಾರೆ.

ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ದಿನಾಂಕ 31.01.2020 ರಂದು ಜರುಗಿದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಶ್ರೀ ಕುಶ(ಪವನ) ರಮೇಶ ಕತ್ತಿ ಸಾ॥ ಬೆಲ್ಲದ ಬಾಗೇವಾಡಿ ಹಾಗೂ ಉಪಾಧ್ಯಕ್ಷರಾಗಿ ಶ್ರೀ ರಮೇಶ ಬಂಡಪ್ಪಾ ಮುನ್ನೋಳಿ ಸಾ॥ ಬೆಲ್ಲದ ಬಾಗೇವಾಡಿ ಇವರು ಅವಿರೋಧವಾಗಿ ಆಯ್ಕೆಯಾಗಿರುವ ಬಗ್ಗೆ ಚುನಾವಣಾಧಿಕಾರಿಯಾದ ಶ್ರೀ ಶಂಕರ ಎಸ್. ಕರಬಸನ್ನವರ ಮಾರಾಟಾಧಿಕಾರಿಗಳು ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಚೇರಿ ಬೆಳಗಾವಿ ಇವರು ಘೋಷಿಸಿರುತ್ತಾರೆ.

## ಮ್ಯಾಮಕೋಸ್ ಉಪಾಧ್ಯಕ್ಷರಾಗಿ ಆಯ್ಕೆ



**ಚಿಕ್ಕಮಂಗಳೂರು:** ಯಡಗೆರೆ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಯಡಗೆರೆ ಸುಬ್ರಮಣ್ಯ ಇವರು ಮ್ಯಾಮಕೋಸ್ ಚುನಾವಣೆಯಲ್ಲಿ ಉಪಾಧ್ಯಕ್ಷರಾಗಿ ಆಯ್ಕೆಯಾಗಿರುತ್ತಾರೆ.

## ಮ್ಯಾಮಕೋಸ್ ನಿರ್ದೇಶಕರಾಗಿ ಆಯ್ಕೆ



**ಸಾಗರ:** ಅಕ್ಷಯಸಾಗರ ಸೌಹಾರ್ದ ಸಹಕಾರಿ ನಿ., ಇದರ ಅಧ್ಯಕ್ಷರಾದ ಶ್ರೀ ಬಿ ಜಿ ದಿನೇಶ ಬರದವಳ್ಳಿ ರವರು ಇತ್ತೀಚೆಗೆ ನಡೆದ ಮ್ಯಾಮಕೋಸ್ ಚುನಾವಣೆಯಲ್ಲಿ ಆಯ್ಕೆಯಾಗಿರುತ್ತಾರೆ.

## ಸಹಕಾರ ಸಚಿವರಿಗೆ ಸನ್ಮಾನ



**ಬೆಂಗಳೂರು:** ದಿನಾಂಕ 12.02.2020 ರಂದು ಸಹಕಾರ ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್ ಇವರನ್ನು ಸ್ಪಂದನ ಕ್ರೆಡಿಟ್ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಟಿ.ಹೆಚ್.ಕರಿಯಪ್ಪ ಮತ್ತು ಆಡಳಿತ ಮಂಡಳಿಯ ನಿರ್ದೇಶಕರುಗಳು ಸಚಿವರನ್ನು ಭೇಟಿ ಮಾಡಿ ಸನ್ಮಾನಿಸಿ ಅಭಿನಂದನೆ ಸಲ್ಲಿಸಿದರು.



## ಶ್ರೀಮತಿ ಶಾಂತ ಭಟ್ ಪ್ರತಿಷ್ಠಿತ ದಕ್ಷಿಣ ಕನ್ನಡ ಜಿಲ್ಲಾ ಮಹಿಳಾ ಕೋ– ಆಪರೇಟಿವ್ ಬ್ಯಾಂಕ್ ನಿರ್ದೇಶಕಿಯಾಗಿ ಆಯ್ಕೆ

**ಮಂಗಳೂರು:** ಸನ್ನಿಧಿ ಮಹಿಳಾ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ಶಾಂತ ಭಟ್ ಇವರು ದಿನಾಂಕ 30–01–2020ರಂದು ನಡೆದ ದಕ್ಷಿಣ ಕನ್ನಡ ಜಿಲ್ಲಾ ಮಹಿಳಾ ಕೋ–ಆಪರೇಟಿವ್ ಬ್ಯಾಂಕ್ ಲಿ,. ಮಂಗಳೂರು ಇದರ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ.

## ಅಧ್ಯಕ್ಷರು – ಉಪಾಧ್ಯಕ್ಷರ ಆಯ್ಕೆ

### ಶ್ರೀ ವೈಷ್ಣವಿ ಪತ್ತಿನ ಸೌಹಾರ್ದ ಸಹಕಾರಿ ನಿ., ಗಂಗಾವತಿ



ಶ್ರೀ ಬಸವರಾಜ ಸ್ವಾಮಿ ಮಳೇಮಠ
ಅಧ್ಯಕ್ಷರು



ಶ್ರೀ ಬಾಗೋಡಿ ಮಲ್ಲಯ್ಯ
ಉಪಾಧ್ಯಕ್ಷರು

### ಆರ್ಶಿವಾದ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ. ಬೆಳಗಾವಿ



ಶ್ರೀ ಶಾಂತಿನಾಥ ಅಣ್ಣಾಸಾಹೇಬ ನಾಯಿಕ
ಅಧ್ಯಕ್ಷರು



ಶ್ರೀ ವಿಮಲ ಬಾಬು ಜನಗೌಡಾ
ಉಪಾಧ್ಯಕ್ಷರು

### ಕೆ.ಆರ್ ಪೇಟೆ ತಾಲ್ಲೂಕು ಶ್ರೀ ಶಿವಜ್ಯೋತಿ ಗಾಣಿಗರ ಸೌಹಾರ್ದ ಸಹಕಾರಿ ನಿ., ಮಂಡ್ಯ



ಶ್ರೀ ಸಾರಂಗಿ ನಾಗರಾಜು
ಅಧ್ಯಕ್ಷರು



ಶ್ರೀ ಸುರೇಶ್ ಕೆ.ಆರ್
ಉಪಾಧ್ಯಕ್ಷರು

### ಮಾರುತಿ ಸೌಹಾರ್ದ ಸಹಕಾರಿ ನಿ., ಬೇಲೂರು, ಮಂಡ್ಯ



ಶ್ರೀ ಬಿ. ಮಹೇಶ್
ಅಧ್ಯಕ್ಷರು



ಶ್ರೀ ವಿ.ಎನ್ ಸುಬ್ರಹ್ಮಣ್ಯ
ಉಪಾಧ್ಯಕ್ಷರು

### ಶ್ರೀ ಉದಯರವಿ ಸೌಹಾರ್ದ ಪತ್ತಿನ ಸಹಕಾರಿ ನಿ., ತಿಪಟೂರು



ಶ್ರೀ ಕೆ. ಎಂ ರಾಜಣ್ಣ
ಅಧ್ಯಕ್ಷರು



ಶ್ರೀಮತಿ ಪುಷ್ಪಾವತಿ
ಉಪಾಧ್ಯಕ್ಷರು

## ಅನ್ನದಾಸೋಹ ಕಾರ್ಯಕ್ರಮ



**ಪಾವಗಡ:** ದಿನಾಂಕ 23.02.2020 ರಂದು ಪಾವಗಡ ಸೌಹಾರ್ದ ಸಹಕಾರಿ ವತಿಯಿಂದ ಹೆಂಜೇರ ಸಿದ್ದೇಶ್ವರ ಸ್ವಾಮಿ ಜಾತ್ರ ಮಹೋತ್ಸವ ಪ್ರಯುಕ್ತ ಅನ್ನದಾಸೋಹ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಹಾಗೂ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಭಾವಪೂರ್ಣ ಶ್ರದ್ಧಾಂಜಲಿ



**ಪಾವಗಡ:** ಪಾವಗಡ ಮಲ್ಟಿಪರ್ಪಸ್ ಸೌಹಾರ್ದ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಗೋವಿಂದಪ್ಪನವರು ದಿನಾಂಕ 22.02.2020ರಂದು ನಿಧನ ಹೊಂದಿದ್ದಾರೆ. ಪಾವಗಡ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು, ಆಡಳಿತ ಮಂಡಳಿಯ ಎಲ್ಲ ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗದವರೆಲ್ಲ ಶೋಕ ವ್ಯಕ್ತಪಡಿಸಿದ್ದಾರೆ. ಶ್ರೀಯುತರ ನಿಧನದಿಂದ ಪಾವಗಡ ಮಲ್ಟಿಪರ್ಪಸ್ ಸೌಹಾರ್ದ ಸಹಕಾರಿಯು ಒಬ್ಬ ಹಿರಿಯ ಕ್ರಿಯಾಶೀಲ ಸಹಕಾರಿಯನ್ನು ಕಳೆದುಕೊಂಡಂತಾಗಿದೆ ಎಂದು ಸಂಯುಕ್ತ ಸಹಕಾರಿಯ ಅಧ್ಯಕ್ಷರೂ ಆಗಿರುವ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ತಿಳಿಸಿದ್ದಾರೆ.

# ವಿವಿಧ ಕಾಯ್ದೆಗಳಲ್ಲಿ ಇತ್ತೀಚಿನ ಬದಲಾವಣೆಯ ಕಾರಣ ಸೌಹಾರ್ದ ಸಹಕಾರಿಗಳು ಗಮನಿಸಬೇಕಾದ ಪ್ರಮುಖ ಅಂಶಗಳು

– ಶ್ರೀ ಬಿ.ವಿ.ರವೀಂದ್ರನಾಥ, ಚಾರ್ಟರ್ಡ್ ಅಕೌಂಟೆಂಟ್, ಸಾಗರ

## ಆದಾಯ ತೆರಿಗೆ ಕಾಯ್ದೆಯ ಅಂಶಗಳು

**ವಾರ್ಷಿಕ ವರದಿ ಸಲ್ಲಿಸುವಿಕೆ :**

- ಎಲ್ಲ ಸೌಹಾರ್ದ ಸಹಕಾರಿಗಳೂ ಆದಾಯ ತೆರಿಗೆ ವರದಿ ಸಲ್ಲಿಸುವುದು ಕಡ್ಡಾಯ, ಯಾವುದೇ ವಿನಾಯಿತಿಯಿರುವುದಿಲ್ಲ.
- ನಿಗದಿಪಡಿಸಿದ ದಿನಾಂಕದೊಳಗಾಗಿ ಆದಾಯ ವಿವರವನ್ನು ಸಂಬಂಧಿಸಿದ ಆದಾಯ ತೆರಿಗೆ ಕಛೇರಿಗೆ ಸಲ್ಲಿಸಬೇಕು
- ಎಲ್ಲ ಸಹಕಾರ ಸಂಘಗಳಿಗೆ ಪ್ರತಿ ವರ್ಷ ಸೆಪ್ಟೆಂಬರ್ 30 ತೆರಿಗೆ ವರದಿ ಸಲ್ಲಿಸಲು ಕೊನೆಯ ದಿನ ತಪ್ಪಿದಲ್ಲಿ 10,000 ರೂ. ವರೆಗೆ ದಂಡ ವಿಧಿಸಬಹುದು
- ಅಲ್ಲದೆ 80ಪಿಯೂ ಸೇರಿದಂತೆ ಎಲ್ಲ ರೀತಿಯ ಕಡಿತಗಳಿಗೆ ಅನರ್ಹತೆಯುಂಟಾಗುತ್ತದೆ.

**ಆದಾಯ ತೆರಿಗೆ ಕಾಯ್ದೆ ಲೆಕ್ಕಪರಿಶೋಧನೆ :**

- ಪತ್ತಿನ ಸಹಕಾರಿಗಳ ವಾರ್ಷಿಕ ಒಟ್ಟು ಆದಾಯ ಅಥವಾ ವ್ಯಾಪಾರೀ ಸಹಕಾರಿಗಳ ವಾರ್ಷಿಕ ವಹಿವಾಟು ಒಂದು ಕೋಟಿ ರೂಗಳನ್ನು ಮೀರಿದಲ್ಲಿ ಅಂತಹ ಸಹಕಾರಿಗಳು ತಮ್ಮ ಲೆಕ್ಕಪುಸ್ತಕಗಳನ್ನು ಚಾರ್ಟರ್ಡ್ ಅಕೌಂಟೆಂಟ್‌ರವರಿಂದ ಆದಾಯ ತೆರಿಗೆ ಕಾಯ್ದೆ ಪ್ರಕರಣ 44AB ಅಡಿಯಲ್ಲಿ ಲೆಕ್ಕಪರಿಶೋಧನೆ ಮಾಡಿಸಬೇಕು
- ತಪ್ಪಿದಲ್ಲಿ 1,50,000 ರೂಗಳವರೆಗೆ ದಂಡ ವಿಧಿಸಬಹುದಾಗಿರುತ್ತದೆ.

**ಟಿಡಿಎಸ್ ನಿಯಮಗಳು (ಮೂಲದಲ್ಲಿ ತೆರಿಗೆ ಕಡಿತ : TDS) :**

- ಆದಾಯ ತೆರಿಗೆಯ ಕಾಯಿದೆಯ ಪ್ರಕಾರ ಯಾವುದೇ ವ್ಯಕ್ತಿಯು ಈ ಕೆಳಕಂಡ ಬಾಬ್ತುಗಳಿಗೆ ಪಾವತಿಗಳನ್ನು ಮಾಡಬೇಕಾದರೆ ಪಾವತಿಸುವ ಸಂದರ್ಭದಲ್ಲಿಯೇ ತೆರಿಗೆಯನ್ನು ಕಡಿತ ಮಾಡಿಕೊಳ್ಳಬೇಕು.

| ಕ್ರ.ಸಂ | ಕಾಯ್ದೆಯ ಕಲಂ | ಪಾವತಿಯ ಸ್ವರೂಪ | ವಾರ್ಷಿಕ ಮಿತಿ | ತೆರಿಗೆಯ ದರ | |
|---|---|---|---|---|---|
| | | | | Individuals and HUFs | Others |
| 1 | 192 | ವೇತನ | Slab | Slab rate | – |
| 2 | 194ಎ | ಠೇವಣಿಗಳ ಮೇಲೆ ಪಾವತಿಸುವ ಬಡ್ಡಿ | 5,000 | 10% | 10% |
| 3 | 194ಸಿ | ಗುತ್ತಿಗೆ (Contract) (ಒಮ್ಮೆ ಪಾವತಿ) | 30,000 | 1% | 2% |
| | | ಗುತ್ತಿಗೆ (ಇಡೀ ವರ್ಷ ಪಾವತಿ) | 1,00,000 | 1% | 2% |
| 4 | 194ಹೆಚ್ | ಕಮಿಷನ್/ ದಲ್ಲಾಳಿ | 15,000 | 5% | 5% |
| 5 | 194ಐ | ಬಾಡಿಗೆ – ಕಟ್ಟಡ | 2,40,000 | 10% | 10% |
| 6 | 194ಜೆ | ವೃತ್ತಿಪರ ಶುಲ್ಕ | 30,000 | 10% | 10% |

**ಪ್ರಕರಣ 192 : ವೇತನ :**

- ಪ್ರತಿಯೊಂದು ಸಂಸ್ಥೆಯೂ ತನ್ನ ಸಿಬ್ಬಂದಿಗಳಿಗೆ ನೀಡುವ ವೇತನದಲ್ಲಿ ನಿಗದಿತ ದರದಲ್ಲಿ ಆದಾಯ ತೆರಿಗೆಯನ್ನು ಮೂಲದಲ್ಲಿಯೇ ಕಡಿತಮಾಡತಕ್ಕದ್ದು. ಆದರೆ ಯಾವುದೇ ಸಿಬ್ಬಂದಿಯ ವೇತನವು ಕಾಯ್ದೆಯ ನಿಯಮಗಳಂತೆ ವಿನಾಯಿತಿಗಳು, ಕಡಿತಗಳು, ಮತ್ತು ರಿಯಾಯಿತಿಗಳನ್ನು ಪರಿಗಣಿಸಿ ಗಣನೆ ಮಾಡಿದಾಗ ತೆರಿಗೆದಾಯಕ ಕನಿಷ್ಠ ಮಿತಿಗಿಂತ ಕಡಿಮೆಯಿದ್ದರೆ ಅಂತಹ ವೇತನದಲ್ಲಿ ತೆರಿಗೆ ಕಡಿತ ಮಾಡುವ ಅಗತ್ಯವಿಲ್ಲ. ತೆರಿಗೆಯನ್ನು ವೇತನದಲ್ಲಿ ಕಡಿತಗೊಳಿಸಿದ ಸಂದರ್ಭದಲ್ಲಿ ನೌಕರನಿಗೆ ನಮೂನೆ 16 ರಲ್ಲಿ ಪ್ರಮಾಣ ಪತ್ರ ನೀಡಬೇಕು.

**ಪ್ರಕರಣ 194 ಎ: ಬಡ್ಡಿ :**

- ಪ್ರತಿಯೊಂದು ಸಹಕಾರಿ ಸಂಸ್ಥೆಯೂ ಯಾವುದೇ ಗ್ರಾಹಕನು ತನ್ನಲ್ಲಿ ಇಟ್ಟಿರುವ ಠೇವಣಿಗಳ ಮೇಲೆ ನೀಡುವ ಬಡ್ಡಿಯು ಒಂದು ಆರ್ಥಿಕ ವರ್ಷದಲ್ಲಿ 5,000–00 ರೂ.ಗಳಿಗೆ ಮೀರಿದಲ್ಲಿ ಅಂತಹ ಬಡ್ಡಿಯ ಮೇಲೆ ನಿಗದಿತ ದರದಲ್ಲಿ ಆದಾಯ ತೆರಿಗೆಯನ್ನು ಮೂಲದಲ್ಲಿಯೇ

ಕಡಿತಮಾಡಿ ನೀಡತಕ್ಕದ್ದು.

- ಯಾವುದೇ ಸಹಕಾರಿಯ ಸದಸ್ಯನು ಆ ಸಹಕಾರಿ ಸಂಸ್ಥೆಯಲ್ಲಿ ತಾನು ಹೊಂದಿದ ಯಾವುದೇ ಠೇವಣಿಯ ಮೇಲೆ ಎಷ್ಟೇ ಮೊತ್ತದ ಬಡ್ಡಿ ಬಂದಿರಲಿ ಅದನ್ನು ಪ್ರಕರಣ 194 ಎ ರಡಿಯಲ್ಲಿ ಆದಾಯ ತೆರಿಗೆ ಕಡಿತವಿಲ್ಲದೆ ಸ್ವೀಕರಿಸಲು ಅರ್ಹನಾಗಿರುತ್ತಾನೆ.

**ಪ್ರಕರಣ 194 ಸಿ: ಗುತ್ತಿಗೆ :**

- ಸಹಕಾರ ಸಂಸ್ಥೆಯು ಕಾರ್ಮಿಕ ಗುತ್ತಿಗೆ ಸಹಿತ ಯಾವುದೇ ಕಾಮಗಾರಿ ಒಪ್ಪಂದದನ್ವಯ ಗುತ್ತಿಗೆದಾರನಿಗೆ ಒಮ್ಮೆ 30,000 ರೂಗಳಿಗೆ ಯಾ ಒಂದು ವರ್ಷದಲ್ಲಿ 1,00,000 ರೂಗಳಿಗೆ ಮೀರಿ ಹಣ ನೀಡುವಾಗ ಅಂತಹ ಮೊಬಲಗಿನ ಮೇಲೆ ನಿಗದಿತ ದರದಲ್ಲಿ ಆದಾಯ ತೆರಿಗೆಯನ್ನು ಮೂಲದಲ್ಲಿಯೇ ಕಡಿತಮಾಡಿ ನೀಡತಕ್ಕದ್ದು.

**ಪ್ರಕರಣ 194 ಹೆಚ್ : ಕಮೀಷನ್ ಯಾ ದಲ್ಲಾಳಿ ಶುಲ್ಕ :**

- ಸಹಕಾರ ಸಂಸ್ಥೆಯು 15,000 ರೂಗಳಿಗೆ ಮೀರಿ ಕಮೀಷನ್ ಯಾ ದಲ್ಲಾಳಿ ಶುಲ್ಕ ನೀಡುವಾಗ ಅಂತಹ ಮೊಬಲಗಿನ ಮೇಲೆ ನಿಗದಿತ ದರದಲ್ಲಿ ಆದಾಯ ತೆರಿಗೆಯನ್ನು ಮೂಲದಲ್ಲಿಯೇ ಕಡಿತಮಾಡಿ ನೀಡತಕ್ಕದ್ದು.
- ಸಹಕಾರಿಯಿಂದ ಪಡೆಯುವ ಕಮೀಷನ್ ವಾರ್ಷಿಕ 15,000 ರೂಗಳಿಗೆ ಮೀರಿದ್ದಲ್ಲಿ ಮತ್ತು ಅಂತಹವರ ವಾರ್ಷಿಕ ತೆರಿಗೆದಾಯಕ ಆದಾಯವು ತೆರಿಗೆಯ ಮಿತಿಗಿಂತ ಕಡಿಮೆ ಇದ್ದಲ್ಲಿ ಸಂಬಂಧಿಸಿದ ಆದಾಯ ತೆರಿಗೆ ಅಧಿಕಾರಿಗಳಿಗೆ ನಮೂನೆ 13 ರಲ್ಲಿ ಅರ್ಜಿ ಸಲ್ಲಿಸಿ ವಿನಾಯಿತಿ ಪಡೆದಲ್ಲಿ ಅಂತಹವರಿಗೆ ಮೂಲದಲ್ಲಿ ತೆರಿಗೆ ಕಡಿತ ಮಾಡದೆ ಕಮೀಷನ್ ಪಾವತಿಸಬಹುದಾಗಿರುತ್ತದೆ.
- ಇಂತಹ ತೆರಿಗೆ ಕಡಿತ ವಿನಾಯಿತಿ ಪತ್ರವನ್ನು ಆಯಾ ಪಿಗ್ಮಿ ಸಂಗ್ರಾಹಕರು ಸಂಬಂಧಿಸಿದ ತೆರಿಗೆ ಅಧಿಕಾರಿಗಳಿಂದ ಪ್ರತಿವರ್ಷ ಪಡೆದು ಏಪ್ರಿಲ್ 30ರೊಳಗಾಗಿ ಸಹಕಾರಿಗೆ ಸಲ್ಲಿಸಬೇಕಿರುತ್ತದೆ.

**ಪ್ರಕರಣ 194 ಐ : ಬಾಡಿಗೆ :**

- ಸಹಕಾರ ಸಂಸ್ಥೆಯು ವಾರ್ಷಿಕ 2,40,000–00 ರೂಗಳಿಗೆ ಮೀರಿ ಬಾಡಿಗೆ ನೀಡುವಾಗ ಅಂತಹ ಮೊಬಲಗಿನ ಮೇಲೆ ನಿಗದಿತ ದರದಲ್ಲಿ ಆದಾಯ ತೆರಿಗೆಯನ್ನು ಮೂಲದಲ್ಲಿಯೇ ಕಡಿತಮಾಡಿ ನೀಡತಕ್ಕದ್ದು. ಇಲ್ಲಿ ಬಾಡಿಗೆ ಎಂದರೆ ಲೀಸ್ ಯಾ ಯಾವುದೇ ಒಪ್ಪಂದದ ಮೇರೆಗೆ ಯಾವುದೇ ಭೂಮಿ ಯಾ ಕಟ್ಟಡ (ಪೀಠೋಪಕರಣ, ಜೋಡಣೆಗಳ ಸಹಿತ/ರಹಿತ)ಗಳ ಉಪಯೋಗಕ್ಕಾಗಿ ನೀಡುವ ಹಣ.

**ಪ್ರಕರಣ 194 ಜೆ : ವೃತ್ತಿಪರ ಅಥವಾ ತಾಂತ್ರಿಕ ಸೇವೆಗಳ ಶುಲ್ಕ :**

- ಸಹಕಾರ ಸಂಸ್ಥೆಯು ಯಾವುದೇ ವ್ಯಕ್ತಿಗೆ ವಾರ್ಷಿಕ 30,000 ರೂಗಳಿಗೆ ಮೀರಿ ವೃತ್ತಿಪರ ಅಥವಾ ತಾಂತ್ರಿಕ ಸೇವೆಗಳ ಶುಲ್ಕ ನೀಡುವಾಗ ಅಂತಹ ಮೊಬಲಗಿನ ಮೇಲೆ ನಿಗದಿತ ದರದಲ್ಲಿ ಆದಾಯ ತೆರಿಗೆಯನ್ನು ಮೂಲದಲ್ಲಿಯೇ ಕಡಿತಮಾಡಿ ನೀಡತಕ್ಕದ್ದು.

**ಟಿಡಿಎಸ್ : ಮಾಡು ಮತ್ತು ಮಾಡದಿರುಗಳು :**

- ಮೂಲದಲ್ಲಿ ತೆರಿಗೆ ಕಡಿತ ಮಾಡಬೇಕಾದ ಸಂದರ್ಭಗಳಲ್ಲಿ ತಪ್ಪದೇ ತೆರಿಗೆ ಕಡಿತ ಮಾಡಿ ಪಾವತಿಸುವುದು
- ತೆರಿಗೆಯನ್ನು ಕಡಿತ ಮಾಡಿದ ತಿಂಗಳಿನ ಕೊನೆಯ ದಿನದಿಂದ ಏಳು ದಿನಗಳೊಳಗಾಗಿ ಕೇಂದ್ರ ಸರಕಾರಕ್ಕೆ ಜಮಾ ಮಾಡತಕ್ಕದ್ದು.
- ಕಡಿತ ಮಾಡಿ ಪಾವತಿಸಿದ ತೆರಿಗೆಯ ವಿವರಗಳನ್ನು ಮೂರು ತಿಂಗಳಿಗೊಮ್ಮೆಯಂತೆ ಸೂಕ್ತ ನಮೂನೆಯಲ್ಲಿ ದಾಖಲಿಸಿ ಸಂಬಂಧಿಸಿದ ಆದಾಯ ತೆರಿಗೆ ಇಲಾಖೆಗೆ ಸಲ್ಲಿಸತಕ್ಕದ್ದು.
- ಕಡಿತ ಮಾಡಿದ ತೆರಿಗೆ ಪ್ರಮಾಣ ಪತ್ರವನ್ನು ನಮೂನೆ 16ಎ ನಲ್ಲಿ ಸಂಬಂಧಿಸಿದ ವ್ಯಕ್ತಿಗೆ ನೀಡತಕ್ಕದ್ದು.
- ತಪ್ಪಿದಲ್ಲಿ ಕಾಯ್ದೆಯಲ್ಲಿ ನಿಗದಿಪಡಿಸಿದ ದಂಡವನ್ನು ಪಾವತಿಸಬೇಕಾಗುತ್ತದೆ.

**ಟಿಡಿಎಸ್ : ನೋಟಿಸು : ಸಾಮಾನ್ಯ ಕಾರಣಗಳು : ನ್ಯೂನತೆಗಳ ಪರಿಣಾಮಗಳು**

- o Non Deduction/Short Deduction : Interest & Penalty on non deduction/short deduction
- o Late Deduction/Late Payment of tax : Interest & Penalty on late deduction/Late payment
- o Non payment/Short payment : Interest & Penalty on Non payment/Short Payment
- o Wrong Deduction/Wrong payment ;Late filing fee u/s 234E for non filing/late filing
- o Non Filing/Late Filing : Penalty for non filing/non issue of forms
- o Non issue - Form16/16A. : Prosecution for failure to pay the TDS.

**ತೆರಿಗೆ ವಿನಾಯಿತಿ/ಕಡಿತಗಳು**

- ಕಲಂ 80ಪಿ(2) ಪ್ರಕರಣದನ್ವಯ ಸಹಕಾರ ಸಂಘಗಳಿಗೆ ಕೆಳಕಾಣಿಸಿದ ಕಡಿತಗಳು ದೊರೆಯುತ್ತವೆ
- ಬ್ಯಾಂಕಿಂಗ್ ವ್ಯವಹಾರ ನಡೆಸುತ್ತಿರುವ ಯಾ ಸದಸ್ಯರಿಗೆ ಸಾಲ ಸೌಲಭ್ಯ ನೀಡುತ್ತಿರುವ ಸಹಕಾರ ಸಂಘಗಳಿಗೆ ತನ್ನ ಸದಸ್ಯರೊಂದಿಗೆ ನಡೆಸಿದ ವ್ಯವಹಾರದಿಂದ ಬಂದ ಸಂಪೂರ್ಣ ಆದಾಯ
- ಸದಸ್ಯರ ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆಯನ್ನು ಒದಗಿಸುವುದರಿಂದ ಗಳಿಸುವ ಸಂಪೂರ್ಣ ಆದಾಯ.
- ಸದಸ್ಯರಿಗೆ ಕೃಷಿ ಉಪಕರಣ ಯಾ ಸಂಬಂಧಿತ ವಸ್ತುಗಳ ಪೂರೈಕೆಯಿಂದ ಬಂದ ಸಂಪೂರ್ಣ ಆದಾಯ
- ಸದಸ್ಯರು ಉತ್ಪಾದಿಸುವ ಹಾಲು, ಹಣ್ಣು, ತರಕಾರಿ ಉತ್ಪನ್ನಗಳಿಗೆ ಮಾರುಕಟ್ಟೆಯನ್ನು ಒದಗಿಸುವುದರಿಂದ ಗಳಿಸುವ ಸಂಪೂರ್ಣ ಆದಾಯ.
- ಮೇಲ್ಕಂಡವುಗಳಲ್ಲದೆ ಬಳಕೆದಾರರ ಸಹಕಾರ ಸಂಘಗಳ ವ್ಯವಹಾರದ

ಆದಾಯದಲ್ಲಿ ಒಂದು ಲಕ್ಷ ರೂಗಳ ಕಡಿತವಿರುತ್ತದೆ

- ಮೇಲ್ಕಂಡವುಗಳಲ್ಲದ ಇತರೆ ಸಹಕಾರ ಸಂಘಗಳ ವ್ಯವಹಾರದ ಆದಾಯದಲ್ಲಿ ಐವತ್ತು ಸಾವಿರ ರೂಗಳ ಕಡಿತವಿರುತ್ತದೆ.
- ಪ್ರಕರಣ 80ಪಿ(2)(ಡಿ)ನಲ್ಲಿ ಒಂದು ಸಹಕಾರ ಸಂಘ ಸಂಘವು ಬೇರೊಂದು ಸಹಕಾರ ಸಂಘದಲ್ಲಿ ಮಾಡಿದ ಹೂಡಿಕೆಗಳ ಮೇಲೆ ಬಂದ ಆದಾಯದ ಮೇಲೆ ಸಂಪೂರ್ಣ ಕಡಿತವನ್ನು ನೀಡಲಾಗಿದೆ. ಆದ್ದರಿಂದ ಸಹಕಾರ ಸಂಘಗಳಲ್ಲಿಯೇ ಹೂಡಿಕೆಗಳನ್ನು ಮಾಡುವುದು ಒಳ್ಳೆಯದು

## ನಗದು ವ್ಯವಹಾರ ಮಿತಿಗಳು

### ದೇಣಿಗೆ ನೀಡುವುದು (2000.00)

- ಒಬ್ಬ ವ್ಯಕ್ತಿ ಯಾ ಸಂಸ್ಥೆಗೆ ದೇಣಿಗೆಯಾಗಿ ಒಮ್ಮೆ ರೂ 2,000 ಯಾ ಅದಕ್ಕಿಂತ ಹೆಚ್ಚು ಮೊತ್ತವನ್ನು ನಗದಾಗಿ ಪಾವತಿಸುವಂತಿಲ್ಲ.

### ವೆಚ್ಚಗಳ ಪಾವತಿ (10,000.00)

- ಒಬ್ಬ ವ್ಯಕ್ತಿಗೆ ಯಾವುದೇ ವೆಚ್ಚದ ಬಾಬ್ತು ಒಂದು ದಿನ ರೂ 10,000 ಯಾ ಅದಕ್ಕಿಂತ ಹೆಚ್ಚು ಮೊತ್ತವನ್ನು ನಗದಾಗಿ ಪಾವತಿಸುವಂತಿಲ್ಲ.

### ಠೇವಣಿ ಸ್ವೀಕಾರ/ಮರುಪಾವತಿ (20,000–00)

- ಯಾವುದೇ ವ್ಯಕ್ತಿಯು ಯಾವುದೇ ವ್ಯಕ್ತಿಯಿಂದ ಠೇವಣಿ ಅಥವಾ ಸಾಲವಾಗಿ ಯಾ ಸ್ಥಿರಾಸ್ತಿ ವ್ಯವಹಾರದ ಸಲುವಾಗಿ ಒಟ್ಟು ಇಪ್ಪತ್ತು ಸಾವಿರ ರೂಗಳು ಅಥವಾ ಅದನ್ನು ಮೀರುವ ಮೊತ್ತವನ್ನು ಬ್ಯಾಂಕಿನ ಅಕೌಂಟ್ ಪೇಯೀ ಚೆಕ್ ಯಾ ಬ್ಯಾಂಕಿನ ಅಕೌಂಟ್ ಪೇಯೀ ಡ್ರಾಫ್ಟ್ ಹೊರತಾಗಿ ಬೇರೆ ಯಾವುದೇ ರೂಪದಲ್ಲಿ ಸ್ವೀಕರಿಸುವಂತಿಲ್ಲ
- ಯಾವುದೇ ವ್ಯಕ್ತಿಯು ಯಾವುದೇ ವ್ಯಕ್ತಿಯಿಂದ ಸ್ವೀಕರಿಸಿರುವ ಠೇವಣಿ ಅಥವಾ ಸಾಲವಾಗಿ ಯಾ ಸ್ಥಿರಾಸ್ತಿ ವ್ಯವಹಾರದ ಸಲುವಾಗಿ ಪಡೆದ ಮೊತ್ತವು ಒಟ್ಟು ಇಪ್ಪತ್ತು ಸಾವಿರ ರೂಗಳು ಅಥವಾ ಅದನ್ನು ಮೀರುವಂತಿದ್ದರೆ ಅದನ್ನು ಸ್ವೀಕರಿಸುವವನ ಹೆಸರಿನಲ್ಲಿ ಬ್ಯಾಂಕಿನ ಅಕೌಂಟ್ ಪೇಯೀ ಚೆಕ್ ಯಾ ಬ್ಯಾಂಕಿನ ಅಕೌಂಟ್ ಪೇಯೀ ಡ್ರಾಫ್ಟ್ ಹೊರತಾಗಿ ಬೇರೆ ಯಾವುದೇ ರೂಪದಲ್ಲಿ ಮರುಪಾವತಿಸುವಂತಿಲ್ಲ
- ಈ ನಿಯಮಗಳನ್ನು ಪಾಲಿಸದಿದ್ದಲ್ಲಿ ಸಮಾನ ಮೊತ್ತದ ದಂಡ ಪಾವತಿಸಬೇಕಾಗಿರುತ್ತದೆ.

### ಇಲ್ಲಿ ಗಮನಿಸಬೇಕಾದ ಅಂಶಗಳು :

- ಈ ನಿಯಮ 1984ರಿಂದಲೂ ಇದೆ.
- ಸಹಕಾರ ಸಂಘಗಳಿಗೂ ಸಂಪೂರ್ಣವಾಗಿ ಅನ್ವಯಿಸುತ್ತದೆ
- ಠೇವಣಿ ಯಾ ಸಾಲದ ಒಟ್ಟು ಮೊತ್ತ ಎಂದಿದೆ ಒಮ್ಮೆ ಸ್ವೀಕರಿಸುವ ಅಥವಾ ಮರುಪಾವತಿಸುವ ಮೊತ್ತ ಎಂದಿಲ್ಲ
- ಒಂದು ದಿನ ಯಾ ವರ್ಷ ಎಂದು ಹೇಳಿಲ್ಲ
- ಎಲ್ಲಿಯೂ ನಗದು ರೂಪದಲ್ಲಿ ಎಂದು ಹೇಳಿಲ್ಲ
- ಬ್ಯಾಂಕಿನ ಅಕೌಂಟ್ ಪೇಯೀ ಚೆಕ್ ಯಾ ಅಕೌಂಟ್ ಪೇಯೀ ಡ್ರಾಫ್ಟ್ ರೂಪದಲ್ಲಿ ಎಂದು ಹೇಳಿದೆ.
- ಪಿಗ್ಮಿ, ಆರ್‌ಡಿಗಳೂ ಸೇರಿದಂತೆ ಎಲ್ಲ ಠೇವಣಿಗಳಿಗೆ ಅನ್ವಯಿಸುತ್ತದೆ.

### ಪಿಗ್ಮಿ ಠೇವಣಿ ಸ್ವೀಕಾರ/ ಮರುಪಾವತಿ :

- ಪತ್ತಿನ ಸಹಕಾರ ಸಂಘಗಳಲ್ಲಿ ಹೆಚ್ಚಿನ ಸಹಕಾರ ಸಂಘಗಳು ಪಿಗ್ಮಿಠೇವಣಿಗಳನ್ನು ಸಂಗ್ರಹಿಸುತ್ತಿದ್ದು ಅವರಿಗೆ ಈ ಕೆಳಗಿನ ಅಂಶಗಳನ್ನು ಗಮನದಲ್ಲಿಟ್ಟಕೊಂಡು ವ್ಯವಹರಿಸುವುದೊಳಿತು.
- ಶ್ರೇಷ್ಠ ನ್ಯಾಯಾಲಯದ ಇತ್ತೀಚಿನ ತೀರ್ಪೊಂದರ ಹಿನ್ನೆಲೆಯಲ್ಲಿ ಸಹಕಾರ ಸಂಘಗಳು ನಾಮಮಾತ್ರ ಸದಸ್ಯರಿಂದಾಗಲೀ ಸದಸ್ಯೇತರರಿಂದಾಗಲೀ ಪಿಗ್ಮಿ ಯಾ ಅನ್ಯ ಠೇವಣಿಗಳನ್ನು ಸಂಗ್ರಹಿಸಿದ್ದರೆ ಅಂತಹ ಠೇವಣಿಗಳಿಗೆ ಸಂಬಂಧಿಸಿದ ವ್ಯವಹಾರಗಳ ಮೇಲೆ ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ತೆರಿಗೆ ವಿಧಿಸುತ್ತಿದ್ದಾರೆ. ಸುಪ್ರೀಂ ಕೋರ್ಟಿನ ಆದೇಶವಾಗಿದ್ದ–ರಿಂದ ಅದರ ವಿರುದ್ಧ ಮೇಲ್ಮನವಿ ಮಾಡಲು ಕಷ್ಟಸಾಧ್ಯವಾಗಿರುತ್ತದೆ.
- ಆದಾಯ ತೆರಿಗೆ ಕಾಯ್ದೆಯ ಕಲಂ 269ಎಸ್‌ಎಸ್‌ರನ್ವಯ ಸಹಕಾರ ಸಂಘವು ಯಾರಿಂದಲೂ (ಸದಸ್ಯರಿಂದಲೂ) ಒಟ್ಟು 20,000 ರೂಗಳಿಗೆ ಮೀರಿದ ಠೇವಣಿಯನ್ನು ಕಾಯ್ದೆಯಲ್ಲಿ ತಿಳಿಸಿದ ರೂಪದ ಹೊರತಾಗಿ ಬೇರೆ ಯಾವುದೇ ರೂಪದಲ್ಲಿ ಸ್ವೀಕರಿಸುವಂತಿಲ್ಲ ಮತ್ತು ಕಲಂ 269ಟಿರನ್ವಯ 20,000 ರೂಗಳಿಗೆ ಮೀರಿ ಠೇವಣಿ ಮರುಪಾವತಿಯನ್ನು ಕಾಯ್ದೆಯಲ್ಲಿ ತಿಳಿಸಿದ ರೂಪದ ಹೊರತಾಗಿ ಬೇರೆ ಯಾವುದೇ ರೂಪದಲ್ಲಿ ಮಾಡುವಂತಿಲ್ಲ. ಈ ನಿಯಮಗಳಲ್ಲಿ ಯಾವುದೇ ಬದಲಾವಣೆಯಾಗಿರುವುದಿಲ್ಲ
- ಠೇವಣಿಯ ಒಟ್ಟು ಮೊತ್ತ ಎಂದಿದೆ ಒಮ್ಮೆ ಸ್ವೀಕರಿಸುವ ಅಥವಾ ಮರುಪಾವತಿಸುವ ಮೊತ್ತ ಎಂದು ಹೇಳಿಲ್ಲ. ಒಂದು ದಿನ ಯಾ ವರ್ಷ ಎಂದು ಹೇಳಿಲ್ಲ. ಅಂದರೆ ಒಬ್ಬ ವ್ಯಕ್ತಿಯಿಂದ ಠೇವಣಿ ರೂಪದಲ್ಲಿ ಸಂಗ್ರಹಿಸಿರುವ ಒಟ್ಟು ಹಣ 20,000 ರೂಗಳನ್ನು ಮೀರಿದಲ್ಲಿ ನಂತರ ಒಂದು ರೂಪಾಯಿಯನ್ನೂ ನಗದು ರೂಪದಲ್ಲಿ ಸಂಗ್ರಹಿಸುವಂತಿಲ್ಲ.
- ಅಂದರೆ ನಿಮ್ಮ ಸಹಕಾರ ಸಂಘದಲ್ಲಿ ಈಗಾಗಲೇ ಒಟ್ಟು 20,000 ರೂಗಳಿಗಿಂತ ಹೆಚ್ಚಿನ ಮೊತ್ತದ ಯಾವುದೇ ಠೇವಣಿಗಳನ್ನು ಹೊಂದಿರುವ ವ್ಯಕ್ತಿಯಿಂದ (ಸದಸ್ಯನೂ ಸೇರಿದಂತೆ) ಮತ್ತೆ ಒಂದು ರೂಪಾಯಿಯ ಠೇವಣಿಯನ್ನೂ ನಗದು ರೂಪದಲ್ಲಿ ಸಂಗ್ರಹಿಸುವಂತಿಲ್ಲ.
- ಇದೆಲ್ಲದರ ಪರಿಣಾಮವಾಗಿ ಪ್ರತಿನಿತ್ಯ ಕೇವಲ 50 ಯಾ 100 ರೂಗಳ ಪಿಗ್ಮಿ ಠೇವಣಿಯನ್ನು ಸಂಗ್ರಹಿಸುತ್ತಿದ್ದರೂ ಸದರಿ ಠೇವಣಿ ಒಟ್ಟು 20,000 ರೂಗಳಾದರೆ ನಂತರ ಒಂದು ರೂಪಾಯಿಯನ್ನೂ ನಗದು ರೂಪದಲ್ಲಿ ಸಂಗ್ರಹಿಸುವಂತಿಲ್ಲ! ಮತ್ತು ಅಂತಹ ಠೇವಣಿಯನ್ನು ನಗದಾಗಿ ಮರುಪಾವತಿ ಮಾಡುವಂತಿಲ್ಲ!
- ಇಂತಹ ಸನ್ನಿವೇಶಗಳಲ್ಲಿ ಒಂದೋ ಠೇವಣಿ ಸಂಗ್ರಹಣೆಯನ್ನು ನಿಲ್ಲಿಸಬೇಕು ಅಥವಾ ಅಂತಹ ಠೇವಣಿಯನ್ನು ಪೂರ್ತಿ ಮರುಪಾವತಿಸಿ ಖಾತೆ ಚುಕ್ತಾ ಮಾಡಿ ಮತ್ತೆ ಹೊಸದಾಗಿ ಠೇವಣಿಯನ್ನು ಸಂಗ್ರಹಿಸಲು ಪ್ರಾರಂಭಿಸಬೇಕು.
- ಇವುಗಳ ಜೊತೆಯಲ್ಲಿ ಪಿಗ್ಮಿ ಸಂಗ್ರಾಹಕರಿಗೆ ನೀಡುವ ಕಮೀಷನ್ ಮೇಲೆ

ಲೇಖನ

ಸರಕು ಮತ್ತು ಸೇವಾ ತೆರಿಗೆ ಕಾಯ್ದೆಯಡಿಯಲ್ಲಿ 18%ರಂತೆ ಜಿಎಸ್‌ಟಿ ಯನ್ನು ಹಿಮ್ಮುಖ ಹೊಣೆಗಾರಿಕೆ ವಿಧಾನದಲ್ಲಿ (RCM) ಸಹಕಾರ ಸಂಘವು ಭರಿಸಬೇಕು.

**ಇತರೆ ವ್ಯವಹಾರಗಳ ಸ್ವೀಕೃತಿ (2,00,000–00)**

- ಯಾವುದೇ ವ್ಯಕ್ತಿಯು ಎರಡು ಲಕ್ಷ ರೂಗಳು ಅಥವಾ ಹೆಚ್ಚು ಮೊತ್ತವನ್ನು ಒಂದು ದಿನದಲ್ಲಿ ಒಬ್ಬ ವ್ಯಕ್ತಿಯಿಂದ ಅಥವಾ ಒಂದು ವ್ಯವಹಾರಕ್ಕೆ ಸಂಬಂಧಿಸಿದಂತೆ ಅಥವಾ ಒಂದು ಘಟನೆ ಯಾ ಸಂದರ್ಭಕ್ಕೆ ಸಂಬಂಧಿಸಿದಂತೆ ಒಬ್ಬ ವ್ಯಕ್ತಿಯಿಂದ ಬ್ಯಾಂಕಿನ ಅಕೌಂಟ್ ಪೇಯೀ ಚೆಕ್ ಯಾ ಬ್ಯಾಂಕಿನ ಅಕೌಂಟ್ ಪೇಯೀ ಡ್ರಾಫ್ಟ್ ಯಾ ಬ್ಯಾಂಕ್ ಅಕೌಂಟಿನ ಮೂಲಕ ನಡೆಸುವ ಪಾವತಿ ತೀರುವಳಿ ವ್ಯವಸ್ಥೆಯ (Electronic Clearing System) ಹೊರತಾಗಿ ಬೇರೆ ಯಾವುದೇ ರೂಪದಲ್ಲಿ ಸ್ವೀಕರಿಸುವಂತಿಲ್ಲ
- ಈ ನಿಯಮದಿಂದಾಗಿ ಸಹಕಾರ ಸಂಘಗಳು ಇನ್ನು ಮುಂದೆ ಸಾಲ, ಠೇವಣಿಯ ಹೊರತಾಗಿ ಉಳಿತಾಯ ಖಾತೆ, ನೀಡಿದ ಸಾಲ ಮರುಪಾವತಿ, ಬಂಡವಾಳ ಸ್ವೀಕಾರ, ಆದಾಯ ಸ್ವೀಕಾರವೂ ಸೇರಿದಂತೆ ಯಾವುದೇ ಬಾಬ್ತುಗಳಿಗೆ ಒಂದು ದಿನದಲ್ಲಿ ಒಬ್ಬ ವ್ಯಕ್ತಿಯಿಂದ ಎರಡು ಲಕ್ಷ ರೂಗಳು ಅಥವಾ ಹೆಚ್ಚು ಮೊತ್ತವನ್ನು ಮೇಲೆ ತಿಳಿಸಿದ ರೀತಿಯ ಹೊರತಾಗಿ ಬೇರೆ ಯಾವುದೇ ರೂಪದಲ್ಲಿ ಸ್ವೀಕರಿಸುವಂತಿಲ್ಲ. ಈ ನಿಯಮಗಳನ್ನು ಪಾಲಿಸದಿದ್ದಲ್ಲಿ ಸಮಾನ ಮೊತ್ತದ ದಂಡ ಪಾವತಿಸಬೇಕಾಗಿರುತ್ತದೆ.

**PAN & TAN**

- ಸಹಕಾರಿಯು ನಮೂನೆ 49ಎನಲ್ಲಿ ಅರ್ಜಿ ಸಲ್ಲಿಸಿ ಖಾಯಂ ನೋಂದಣಿ ಸಂಖ್ಯೆಯನ್ನು (PAN) ಪಡೆಯತಕ್ಕದ್ದು
- ಆದಾಯ ತೆರಿಗೆ ಪಾವತಿಸುವ ಎಲ್ಲ ಚಲನ್‌ಗಳಲ್ಲಿ ಮತ್ತು ವಾರ್ಷಿಕ ಆದಾಯ ತೆರಿಗೆ ವಿವರ ಸಲ್ಲಿಸುವಾಗ ಈ ಖಾಯಂ ನೋಂದಣಿ ಸಂಖ್ಯೆಯನ್ನು ತಪ್ಪದೇ ನಮೂದಿಸತಕ್ಕದ್ದು
- ಮೂಲದಲ್ಲಿ ತೆರಿಗೆ ಕಡಿತ ಮಾಡುವ ಪ್ರತಿಯೊಂದು ಸಹಕಾರಿಯೂ ನಮೂನೆ 49(ಬಿ)ನಲ್ಲಿ ಅರ್ಜಿ ಸಲ್ಲಿಸಿ ತೆರಿಗೆ ಖಾತೆ ಸಂಖ್ಯೆಯನ್ನು (TAN) ಪಡೆಯತಕ್ಕದ್ದು
- ಮೂಲದಲ್ಲಿ ಕಡಿತ ಮಾಡಿದ ತೆರಿಗೆ ಪಾವತಿಸುವ ಎಲ್ಲ ಚಲನ್‌ಗಳಲ್ಲಿ ಮತ್ತು ಎಲ್ಲ ಮೂಲದಲ್ಲಿ ತೆರಿಗೆ ಕಡಿತ ಮಾಡಿದ ಪ್ರಮಾಣಪತ್ರಗಳಲ್ಲಿ ಈ ತೆರಿಗೆ ಖಾತೆ ಸಂಖ್ಯೆಯನ್ನು ತಪ್ಪದೇ ನಮೂದಿಸತಕ್ಕದ್ದು.

**ಆದಾಯ ತೆರಿಗೆ ಕಾಯ್ದೆಯಲ್ಲಿನ ಇತ್ತೀಚಿನ ಬದಲಾವಣೆಗಳು**

ಹಣಕಾಸು ಮಸೂದೆ 2019ರನ್ವಯ ಅಂಚೆ ಕಛೇರಿಗಳು, ಸಹಕಾರಿ ಬ್ಯಾಂಕೂ ಸೇರಿದಂತೆ ಯಾವುದೇ ಬ್ಯಾಂಕು ತಮ್ಮಲ್ಲಿ ವ್ಯವಹರಿಸುತ್ತಿರುವ ಯಾವುದೇ ವ್ಯಕ್ತಿಯು ಒಂದು ಆರ್ಥಿಕ ವರ್ಷದಲ್ಲಿ ತನ್ನ ಒಂದು ಯಾ ಅನೇಕ ಖಾತೆಗಳಿಂದ ಒಟ್ಟು ಒಂದು ಕೋಟಿ ರೂಗಳಿಗಿಂತ ಹೆಚ್ಚಿನ ಮೊತ್ತವನ್ನು ನಗದು ರೂಪದಲ್ಲಿ ಹಿಂಪಡೆದಲ್ಲಿ ಅಂಥಹವರಿಗೆ ನಗದು ಪಾವತಿ ಮಾಡುವಾಗ ಶೇ.2ರಷ್ಟು ಮೊತ್ತವನ್ನು ತೆರಿಗೆಯಾಗಿ ಮೂಲದಲ್ಲಿ ಕಡಿತ ಮಾಡಬೇಕಿರುತ್ತದೆ. ಎಲ್ಲ ವ್ಯಕ್ತಿಗಳು ಬ್ಯಾಂಕ್ ಖಾತೆಗಳಲ್ಲಿ ಮಾಡುವ ದೊಡ್ಡ ಮೊತ್ತದ ನಗದು ವ್ಯವಹಾರಗಳಿಗೆ ಕಡಿವಾಣ ಹಾಕಲು ಈ ಹೊಸ ನಿಯಮ ಸಹಕಾರಿಯಾಗಲಿದೆ ಎಂಬುದು ಸರ್ಕಾರದ ಆಶಯ.

ಈ ರೀತಿ ಕಟಾವಣೆ ಮಾಡಲಾದ ತೆರಿಗೆಯನ್ನು ಅವರ ಖಾತೆಗೆ ಪಾವತಿಸಿ ಅವರಿಗೆ ತೆರಿಗೆ ಹೊಂದಾಣಿಕೆ ಮಾಡಿಕೊಳ್ಳಲು ಅನುವುಮಾಡಿಕೊಡಲಾಗುವುದು. ಉದಾಹರಣೆಗೆ ಒಬ್ಬ ವ್ಯಕ್ತಿಯು ಒಂದು ಆರ್ಥಿಕ ವರ್ಷದಲ್ಲಿ ಮೂರು ಕೋಟಿ ರೂಗಳನ್ನು ನಗದು ರೂಪದಲ್ಲಿ ಹಿಂಪಡೆದಲ್ಲಿ ನಾಲ್ಕು ಲಕ್ಷ ರೂಗಳನ್ನು [(3,00,00,000–1,00,00,000)*2%] ಅವನ ಖಾತೆಗೆ ಖರ್ಚುಹಾಕಿ ಕೇಂದ್ರ ಸರಕಾರದ ಖಾತೆಗೆ ಜಮಾ ಮಾಡಲಾಗುತ್ತದೆ. ಈ ಮೊತ್ತವು ಸದರಿ ವ್ಯಕ್ತಿಯ ತೆರಿಗೆ ಪಾವತಿ ಮೊತ್ತದಲ್ಲಿ ಸೇರಿಕೊಳ್ಳುತ್ತದೆ. ನಂತರ ಆ ವರ್ಷಕ್ಕೆ ಸಂಬಂಧಿಸಿದ ತಮ್ಮ ಆದಾಯ ತೆರಿಗೆ ವರದಿಯಲ್ಲಿ ಸದರಿ ತೆರಿಗೆ ಕಡಿತ ಮೊತ್ತವನ್ನೂ ಸೇರಿಸಿ ವಿವರ ಸಲ್ಲಿಸಬೇಕಾಗಿರುತ್ತದೆ.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಇದು ದಿನಾಂಕ 01–09–2019ರಿಂದ ಜಾರಿಗೆ ಬಂದಿರುವುದಾದರೂ 2019–20ನೇ ವರ್ಷದ ಆರ್ಥಿಕ ವಹಿವಾಟು ಲೆಕ್ಕ ಹಾಕುವಾಗ ದಿನಾಂಕ 01–04–2019ರಿಂದ 31–08–2019ರವರೆಗಿನ ನಗದು ಹಿಂಪಡೆತವನ್ನೂ ಪರಿಗಣಿಸಲಾಗುತ್ತದೆ. 2018–19ನೇ ಸಾಲಿನಲ್ಲಿ ಈಗಾಗಲೇ ಒಂದು ಕೋಟಿ ರೂಗಳಿಗೂ ಹೆಚ್ಚು ನಗದು ಹಿಂಪಡೆತವಾಗಿದ್ದರೆ 01–09–2019ರ ನಂತರ ಹಿಂಪಡೆಯುವ ಎಲ್ಲ ಮೊತ್ತಗಳಿಗೂ ತೆರಿಗೆ ಕಡಿತ ಮಾಡಲಾಗುತ್ತದೆ. ವ್ಯಕ್ತಿಯ ಪರಿಭಾಷೆಯಲ್ಲಿ ಸಹಕಾರ ಸಂಸ್ಥೆಗಳೂ ಸೇರಿರುತ್ತವೆ. ಈ ಎಲ್ಲ ಅಂಶಗಳೂ ಸಹಕಾರ ಸಂಸ್ಥೆಗಳಿಗೂ ಸಂಪೂರ್ಣವಾಗಿ ಅನ್ವಯವಾಗುವುದರಿಂದ ಸಹಕಾರ ಸಂಸ್ಥೆಗಳು ತಮ್ಮ ನಗದು ವ್ಯವಹಾರಗಳನ್ನು ಮಿತಿಗೊಳಿಸುವುದು ಉತ್ತಮ.

- ಇದು ಬ್ಯಾಂಕೇತರ ಎಲ್ಲ ಸಹಕಾರ ಸಂಸ್ಥೆಗಳಿಗೂ ಅನ್ವಯ
- ಸಹಕಾರ ಸಂಸ್ಥೆಗಳು ತಾವು ವ್ಯವಹರಿಸುವ ಸಹಕಾರೀ (ಡಿಸಿಸಿ) ಬ್ಯಾಂಕೂ ಸೇರಿದಂತೆ ಯಾವುದೇ ಬ್ಯಾಂಕಿನಿಂದ ಪಡೆಯುವ ಹಿಂಪಡೆತಗಳಿಗೆ ಅನ್ವಯ
- ನಗದು ಹಿಂಪಡೆತಗಳಿಗೆ ಮಾತ್ರ ಅನ್ವಯ
- ಬೇರರ್ ಚೆಕ್, ಕ್ರಾಸ್ ಮಾಡದ ಚೆಕ್, ಕೇವಲ ಕ್ರಾಸ್ ಮಾಡಿದ ಚೆಕ್, ಸೆಲ್ಫ್ ಚೆಕ್, ಇತ್ಯಾದಿಗಳ ಮೂಲಕ ಮಾಡಿದರೂ ತೊಂದರೆಯಾಗಬಹುದು
- ಒಂದು ಬ್ಯಾಂಕಿನ ಎಲ್ಲ ಖಾತೆಗಳಿಂದ ಒಟ್ಟು ಹಿಂಪಡೆತ. ಒಂದು ಶಾಖೆ ಯಾ ಒಂದು ಖಾತೆ ಎಂಬುದಲ್ಲ
- ಒಂದು ಆರ್ಥಿಕ ವರ್ಷದಲ್ಲಿ ಪಡೆದ ಹಿಂಪಡೆತಗಳ ಮೊತ್ತ. ಒಂದು ದಿನ ಯಾ ಒಮ್ಮೆ ಎಂದಿಲ್ಲ
- ತೆರಿಗೆ ಕಡಿತದ ದರ 2%
- ಒಂದು ಕೋಟಿ ಮೀರಿದ ಮೊತ್ತಕ್ಕೆ ಮಾತ್ರ ಅನ್ವಯ
- ತೆರಿಗೆ ಕಡಿತದ ಪ್ರಮಾಣ ಪತ್ರ ನೀಡಲಾಗುವುದು. ಸದರಿ ಸಹಕಾರ ಸಂಸ್ಥೆಯು ತನ್ನ ತೆರಿಗೆ ವರದಿ ಸಲ್ಲಿಸಿ ಈ ತೆರಿಗೆ ಮೊತ್ತವನ್ನು ಹಿಂಪಡೆಯಬಹುದು.

# ಮಹಿಳಾ ದಿನಾಚರಣೆ ಅಂಗವಾಗಿ ವಿಶೇಷ ಲೇಖನಗಳು

## ಸ್ತ್ರೀ ದಿನ –ಸಮಾನತೆಯ ಜಪ

### "ಯತ್ರ ನಾರ್ಯಸ್ತು ಪೂಜ್ಯಂತೆ ರಮಂತೆ ತತ್ರ ದೇವತಾಃ"

– ಶ್ರೀಮತಿ ಸವಿತ ಎನ್. ಇ

**Each for Equal**

**ಧ್ಯೇಯ : "I am Generation Equality : Real izing Women's Rights"**

**ಪೀಠಿಕೆ :** ಪ್ರತಿ ನಡೆಯ ಮೇಲೂ ನಿಗಾ ಇಡುವ ನಾಲ್ಕಾರು ಕಣ್ಣುಗಳ ನಡುವಲ್ಲಿ, ಹೆಜ್ಜೆ ಹೆಜ್ಜೆಯನ್ನೂ ಎಚ್ಚರಿಕೆಯಿಂದ ಇಡಬೇಕಾದ ಪರಿಸ್ಥಿತಿ. ಅಪ್ಪ–ಅಮ್ಮನ ಸ್ಥಾನವನ್ನು ಅತ್ತೆ–ಮಾವ ತುಂಬಿಯಾರು ಎಂಬ ಭರವಸೆ. ಪತಿ, ಅತ್ತೆ–ಮಾವ, ಮಗು ಎಂಬ ತನ್ನದೇ ಒಂದು ಪುಟ್ಟ ಪ್ರಪಂಚ ಕಟ್ಟಿಕೊಂಡು, ಅದರ ಸುತ್ತ ಅಕ್ಕರೆಯ ರೇಖೆ ಎಳೆವ ತವಕ! ಹೀಗೇ ಹುಟ್ಟಿದಾಗಿನಿಂದ ಸಾಯುವ ತನಕ ಆಕೆ ವಹಿಸುವ ಪಾತ್ರಗಳು ನೂರಾರು. ಇಂದು(ಮಾ.08) ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ. ಪ್ರತಿ ವ್ಯಕ್ತಿಯ ಬದುಕಿನಲ್ಲೂ ಆಕೆ ವಹಿಸಿದ ಪಾತ್ರವನ್ನೊಮ್ಮೆ ಸ್ಮರಿಸಿ, ಆಕೆಗೆ ಕೃತಜ್ಞತೆ ಸಲ್ಲಿಸುವುದಕ್ಕೆ ಇದು ಸಕಾಲ. ಪ್ರತಿ ಮನೆ, ಪ್ರತಿ ಹೃದಯ, ಪ್ರತಿ ಭಾವನೆ, ಸಂತೋಷದ ಪ್ರತಿಕ್ಷಣ... ಇವೆಲ್ಲವೂ ಅವಳಿಲ್ಲದೆ ಅಪೂರ್ಣ. ಅಪೂರ್ಣವನ್ನು ಪರಿಪೂರ್ಣವಾಗಿಸಬಲ್ಲ ಎಲ್ಲ ಮಹಿಳೆಯರಿಗೂ ಮಹಿಳಾ ದಿನಾಚರಣೆಯ ಹಾರ್ದಿಕ ಶುಭಾಶಯಗಳು.

**ಸಾರಾಂಶ :**

**"ಹ್ಯಾಪಿ ವುಮೆನ್ಸ್ ಡೇ"** ಎಂದು ಶುಭ ಕೋರಿದರು ಒಬ್ಬ ಹಿತಚಿಂತಕರು. ವಿದ್ಯೆ, ಕ್ರೀಡೆ, ರಾಜಕೀಯ, ಕಲೆ ಹೀಗೆ ಬಹುತೇಕ ಕ್ಷೇತ್ರಗಳಲ್ಲಿ ಪುರುಷರಿಗೆ ಸರಿಸಮನಾಗಿ ನಿಂತು ಸ್ವತಂತ್ರರಾಗಿ, ಸ್ವಾವಲಂಬಿಗಳಾಗಿ ಬದುಕುತ್ತಿರುವ ಮಹಿಳೆಯರ ನೆನಪಾಗಿ ಮನ ಹರುಷಗೊಂಡಿತು. ಅಂಥವರು ಬೆರಳೆಣಿಕೆಯಷ್ಟು ಮಾತ್ರ. ಆದರೆ ನಿತ್ಯ ಹೆಣ್ಣಿನ ಮೇಲೆ ನಡೆಯುವ ಅತ್ಯಾಚಾರ, ದೌರ್ಜನ್ಯ, ಭ್ರೂಣ ಹತ್ಯೆ, ವೇಶ್ಯಾವಾಟಿಕೆ, ಆಸಿಡ್ ದಾಳಿ, ವರದಕ್ಷಿಣೆ ಹಿಂಸೆ, ಬಲಿ ಇವೂ ಕಣ್ಮುಂದೆ ಹಾಯ್ದು 'ಮಹಿಳಾ ದಿನಾಚರಣೆ'ಗೆ ಅರ್ಥವಿದೆಯೇ ಎಂಬ ಕಟುಸತ್ಯವನ್ನು ಹೇಗೆ ಸಹಿಸುವುದು. ಈ ದಿನಾಚರಣೆ ಬರೀ ಕ್ಯಾಲೆಂಡರ್, ಸಭೆ–ಸಮಾರಂಭಗಳಲ್ಲಿ ನಡೆಸುವ ಒಂದು ದಿನದ ಆಚರಣೆ ಮಾತ್ರ ಅನ್ನಿಸುತ್ತಿದೆ.

ಮಹಿಳಾ ದಿನಾಚರಣೆ ಹಬ್ಬವೂ ಅಲ್ಲ, ಆನಂದದಿಂದ ಆಚರಣೆಗೊಂಡ ದಿನವೂ ಅಲ್ಲ. ನ್ಯೂಯಾರ್ಕ್‌ನಲ್ಲಿ ಕ್ಲಾರಾ ಜೆಟ್ಕಿನ್ ಎಂಬ ಮಹಿಳಾ ಕಾರ್ಮಿಕೆ ಕೆಲಸಕ್ಕಾಗಿ, ಸಮಾನ ವೇತನಕ್ಕಾಗಿ, ಹೆರಿಗೆ ಸೌಲಭ್ಯಕ್ಕಾಗಿ ತಿಂಗಳುಗಟ್ಟಲೆ ಹೋರಾಟ ನಡೆಸಿ ಗೆಲುವು ಸಾಧಿಸಿದ ದಿನ. ಹುಟ್ಟಿನಿಂದ ಸಾಯುವವರೆಗೂ ದಿನ ನಿತ್ಯ ಒಂದಿಲ್ಲೊಂದು ಸಂಘರ್ಷದಲ್ಲಿ ಬಿದ್ದು ಸಾಧಿಸಲು ಪ್ರಯತ್ನ ಪಡುತ್ತಿರುವ, ಸಂಘರ್ಷದಿಂದ ಸಾಧಿಸಿದ ದಿನದ ಒಂದು ಸ್ಮರಣೆಯ ದಿನ ಮಾತ್ರ.

ವಿಶ್ವಸಂಸ್ಥೆ 1975ರಲ್ಲಿ ಈ ದಿನವನ್ನು "ವಿಶ್ವ ಮಹಿಳಾ ದಿನ" ಎಂದು ಘೋಷಿಸಿತು. ದುಡಿವ ಮಹಿಳೆಯರನ್ನು ಗೌರವಿಸಿ, ಪ್ರೋತ್ಸಾಹ ನೀಡುವುದಕ್ಕೆ "ಮಹಿಳಾ ದಿನ" ಆಚರಿಸಲಾಗುತ್ತದೆ. ಇದು ಮಹಿಳೆಯರ ಆರ್ಥಿಕ, ಸಾಮಾಜಿಕ, ರಾಜಕೀಯ ಹಾಗೂ ಇನ್ನಿತರ ಕ್ಷೇತ್ರಗಳಲ್ಲಿ ಸಾಧನೆಯ ಸಂಕೇತ ದಿನವಾಗಿದೆ. ಮಹಿಳಾ ದಿನಾಚರಣೆ ಹೊತ್ತಲ್ಲಿ ಭಾರತದಲ್ಲಿ ನಿಜಕ್ಕೂ ಮಹಿಳೆಯರ ಸ್ಥಿತಿ ಗತಿ ಏನು? ಅವರು ಎದುರಿಸುತ್ತಿರುವ ನೈಜ ಸಮಸ್ಯೆಗಳು ಯಾವುವು? ಹುಟ್ಟು ಸಾವಿನ ಪ್ರಮಾಣ, ಅತ್ಯಾಚಾರಕ್ಕೆ ಒಳಗಾಗುತ್ತಿರುವವರ ಆತಂಕ ಎಲ್ಲವನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಮಹಿಳಾ ದಿನದ ಸಂದರ್ಭದಲ್ಲಿ ಭಾರತೀಯರ ಮಹಿಳೆಯರ ಜೀವನದ ಮೇಲಿನ ವಾಸ್ತವದ ಜೀವನದ ಕುರಿತು ನಾವು ಯೋಚಿಸಬೇಕಿದೆ.

ಮಹಿಳಾ ಸಬಲೀಕರಣ ಎಂಬುದು ಒಂದು ಪ್ರಬಲ ಅಂಶ ಹುಟ್ಟಿಕೊಂಡಿದೆ. ವಿವಿಧ ಕ್ಷೇತ್ರಗಳಲ್ಲಿ ಮಹಿಳೆ ಮುನ್ನಡೆದಿದ್ದರೂ ಅವಳ ಸ್ಥಿತಿಗತಿ, ಸ್ಥಾನಮಾನ, ಆರ್ಥಿಕ, ಸಾಮಾಜಿಕ, ರಾಜಕೀಯ ಕ್ಷೇತ್ರಗಳಲ್ಲಿ ಮೇಲಕ್ಕೇರಿಸುವುದು ಹೆಚ್ಚು ಸಾಧ್ಯವಾಗಿಲ್ಲ. ಇದಕ್ಕೆ ಕಾರಣಗಳು ಹಲವಾರು ಇದ್ದರೂ ಉತ್ತರ ಅತ್ಯಂತ ಸರಳ. ಮಹಿಳಾ ಅಭಿವೃದ್ಧಿ ಎಂದಾಕ್ಷಣ ಕೇವಲ ಬೆರಳೆಣಿಕೆಯ ಮಹಿಳೆಯರಿಗೆ ಅವಕಾಶ ಕಲ್ಪಿಸುವುದು, ಸಬಲೀಕರಣ ಎಂದಾಕ್ಷಣ ಮನೆಯವರ ಮೇಲೆ ದಬ್ಬಾಳಿಕೆ ಮಾಡುವುದು ಎಂದರ್ಥವಲ್ಲ. 'ಮಹಿಳಾ ಪರ ಸಂಘರ್ಷ' ಎನ್ನುವುದು ಒಂದು ದಿನದ ಕಾರ್ಯಕ್ರಮ ಮಾಡಿ ಮುಗಿಸುವಂತದ್ದಲ್ಲ. 'ದೆಹಲಿ ಅತ್ಯಾಚಾರ ಘಟನೆ ಸಾಂಕೇತಿಕ ಮಾತ್ರ. ಈಗಾಗಲೇ ಸಾಕಷ್ಟು ಅತ್ಯಾಚಾರ ಪ್ರಕರಣಗಳು ನ್ಯಾಯಾಲಯಗಳಲ್ಲಿ ಇತ್ಯರ್ಥಕ್ಕೆ ಬಾಕಿ ಉಳಿದಿವೆ. ತ್ವರಿತ ನ್ಯಾಯಾಲಯಕ್ಕೆ ರವಾನಿಸಿ, ಅಪರಾಧಿಗಳಿಗೆ ಬೇಗನೇ ಶಿಕ್ಷೆ ಕೊಡುವಂತಾಗಬೇಕು. ಅದಕ್ಕಾಗಿಯೇ ಒಂದು ಕಾನೂನನ್ನು ಜಾರಿಗೊಳಿಸಬೇಕು'. ಶಿಕ್ಷಣ, ಆರ್ಥಿಕ ಸಬಲೀಕರಣ ಸಾಧಿಸಿ ಸ್ವಾವಲಂಬಿ ಬದುಕು ನಡೆಸುತ್ತಿರುವ ಮಹಿಳೆ ಇನ್ನೂ ಮೀಸಲಾತಿಯಡಿಯಲ್ಲಿ ದುಡಿಯಬೇಕಾದ ಅನಿವಾರ್ಯತೆ. ಮಹಿಳೆಯರಿಗೆ ಹಕ್ಕು, ಹಿತರಕ್ಷಣೆ, ಜಾಗತಿಕ ಮಟ್ಟದಲ್ಲಿ ತಿಳಿವಳಿಕೆ, ಶಿಕ್ಷಣ, ತರಬೇತಿ, ವಿಜ್ಞಾನ,

ತಂತ್ರಜ್ಞಾನಕ್ಕೆ ನೆರವು ನೀಡಿ, ಸಮಾಜದಲ್ಲಿ ಸಮಾನತೆಯ ವೈಶಿಷ್ಟ್ಯಪೂರ್ಣ ಬದಲಾವಣೆಗಳಿಗೆ ಅವಕಾಶ ಕಲ್ಪಿಸಬೇಕು.

ದೇವತೆ ಎಂದು ಪೂಜಿಸುವ ಹೆಣ್ಣುಮಕ್ಕಳನ್ನು ಈಗಲೂ ಅಳೆಯುವುದು ಅವಳ ಬುದ್ಧಿಮತ್ತೆಯಿಂದ, ಅವಳ ಕಲೆಯಿಂದ, ಅವಳ ಸೌಂದರ್ಯದಿಂದ ಅಲ್ಲದೇ ಅವಳ ಅಡಿಗೆ ಕಲೆ, ಮನೆ ನಡೆಸುವ ಕಲೆಯಿಂದಷ್ಟೇ ಎನ್ನುವುದು ಸತ್ಯ. "ಎಲ್ಲರೂ ಊಟ ಮಾಡುತ್ತಾರೆ. ಆದರೆ ಅಡಿಗೆ ಕೆಲಸದ ಜವಾಬ್ದಾರಿಯನ್ನು ಮಾತ್ರ ಯಾಕೆ ಒಂದು ಗುಂಪಿಗೆ ಹೊರಿಸಲಾಗಿದೆ. ಒಮ್ಮೊಮ್ಮೆ ಈ ಅಸಮಾನತೆ ಕೋಪ ತರಿಸುತ್ತದೆ. ನೀನು ಮಹಿಳೆಯರನ್ನು ಗೌರವಿಸು ಇಡೀ ಪ್ರಪಂಚ ನಿನ್ನನ್ನು ಗೌರವಿಸುತ್ತದೆ. ಮಹಿಳೆಯರಿಗೆ ಅನುಕಂಪದ ನುಡಿಗಳು ಬೇಡ. ಗೌರವ ಬೇಕು. ಹಿಂದಿನ ಕಾಲಕ್ಕೆ ಹೋಲಿಸಿದರೆ ಆಧುನಿಕತೆಯಲ್ಲಿ ಮಹಿಳೆಯರು ದಿಟ್ಟ ಹೆಜ್ಜೆಯ ಪಯಣ ಆರಂಭಿಸಿದ್ದಾರೆ. ಆತ್ಮವಿಶ್ವಾಸದ ಮನಸ್ಸಿನೊಂದಿಗೆ ಸಾಧನೆಯ ಕಡೆ ಮುಖ ಮಾಡುತ್ತಿದ್ದಾರೆ. ಆದರೆ ಇಲ್ಲಿ ನಯನಾಜೂಕು, ಅಚ್ಚುಕಟ್ಟುತನ, ತಾಳ್ಮೆ, ಸಹನೆ, ಕರುಣೆಯ ಸಾಕಾರ ಮೂರ್ತಿಯಾದ ಈಕೆಗೆ ಒಂದು ದಿನ ಮಾತ್ರ ಮೀಸಲಾದರೆ ಸಾಕೇ?

**ಮಹಿಳೆಯರಿಗೆ ಅನುಕಂಪದ ನುಡಿಗಳು ಬೇಡ. ಗೌರವ ಬೇಕು.**

ಮಹಿಳೆಗೆ ಅನುಕಂಪದ ನುಡಿಗಳು ಬೇಡ, ಗೌರವ ಬೇಕು ಹೆಣ್ಣು ಮೃದುವಾಗಿರಬೇಕು, ಶಾಂತವಾಗಿರಬೇಕು, ತ್ಯಾಗ ಮಾಡಬೇಕು, ತಲೆ ಬಗ್ಗಿಸಬೇಕು, ಜೋರಾಗಿ ಮಾತಾಡಬಾರದು ಎಂಬ ಹುಚ್ಚು ಕಟ್ಟುಪಾಡುಗಳನ್ನು ಇನ್ನಾದರೂ ಮುರಿಯಬೇಕಿದೆ. ಗಂಡು ಜೋರಾಗೇ ಇರಬೇಕು, ಹೆಣ್ಣು ಶಾಂತವಾಗಿರಬೇಕೆಂಬ ವಿಚಿತ್ರ ಮಾತುಗಳು ನನಗೆ ಅರ್ಥವಾಗುವುದಿಲ್ಲ. ತನ್ನ ಕೆಲಸ ಕಾರ್ಯ, ತನ್ನ ಗೌರವವನ್ನು ಕಾಪಾಡಿಕೊಳ್ಳಲು ಹೆಣ್ಣು ಯಾವಾಗಲೂ ಮುಂದಾಗಬೇಕು. ಹೆಣ್ಣು ಎಂದು ಗೌರವ ಕೊಡುವುದಕ್ಕಿಂತ ಆಕೆಯೂ ಮನುಷ್ಯಳು ಎಂದು ಗೌರವಿಸುವ ಪದ್ಧತಿ ಶುರುವಾಗಬೇಕಿದೆ. ಈ ವಿಶ್ವ ಮಹಿಳಾ ದಿವಸದಂದಾದರೂ ಇದು ನಡೆಯಲಿ.

ಆಕೆ ತಾಯಿ, ತಂಗಿ, ಅಕ್ಕ, ಗೆಳತಿ, ಪತ್ನಿ, ಸಖಿ, ಮಗಳು... ಕೆಲವೊಮ್ಮೆ ಎಲ್ಲವೂ. ಪ್ರತಿವ್ಯಕ್ತಿಯ ಬದುಕಿನಲ್ಲೂ ಅವಳದ್ದು ಅವ್ಯಕ್ತ ಪಾತ್ರ. ಅವಳಿಲ್ಲದ ಬದುಕು ಅನೂಹ್ಯ! ಮನೆತುಂಬ ಪುಟ್ಟ ಪುಟ್ಟ ಹೆಜ್ಜೆ ಇಟ್ಟು ಓಡಾಡುವಾಗ ಮನೆಯ ಗೊಂಬೆಯಾಗಿ, ಚಿಕ್ಕ ವಯಸ್ಸಿನಲ್ಲೇ ಮನೆ ಜನರ ಮೇಲೆಲ್ಲ ತುಂಬು ಕಾಳಜಿ ತೋರುವಾಗ ಪ್ರಬುದ್ಧ ಯುವತಿಯಾಗಿ, ತಂಗಿಯಾಗಿ, ಓದದ ತಮ್ಮನಿಗೆ ಗದರುವ ಅಕ್ಕನಾಗಿ, ಕೈತುತ್ತು ನೀಡುವಾಗ ತಾಯಿಯಾಗಿ, ಪ್ರತಿ ಹೆಜ್ಜೆಯಲ್ಲೂ ಜೊತೆಯಾಗುವಾಗ ಮಡದಿಯಾಗಿ, ತಪ್ಪನ್ನೆಲ್ಲ ತಡೆವಾಗ ಮಾರ್ಗದರ್ಶಿಯಾಗಿ... ಅವಳ ಪಾತ್ರ ಅನಂತ, ಅನಿರ್ವಚನೀಯ!

ಅಪ್ಪ-ಅಮ್ಮನ ಬೆಚ್ಚನೆ ಮಡಿಲಲ್ಲಿ ಬಾಲ್ಯ, ಯೌವನದ ಆರಂಭವನ್ನೆಲ್ಲ ಕಳೆದು, ಕೊನೆಗೆ ಗುರುತು-ಪರಿಚಯವಿಲ್ಲದ ವ್ಯಕ್ತಿಯೊಂದಿಗೆ ಸಪ್ತಪದಿ ತುಳಿವ ಅವಳ ಬದುಕು ಒಂದರ್ಥದಲ್ಲಿ ಸಾಹಸವೇ. ತನ್ನೊಳಗಿನ ಮಗುತನದ ಹುಡಗಾಟವನ್ನೆಲ್ಲ ತೊರೆದು, ಪ್ರಬುದ್ಧ ಮಹಿಳೆಯ ಮುಖವಾಡ ತೊಡಬೇಕಾದ ಕಾಲ ಅದು! ಮನೆಯಲ್ಲಿ ಕಸ ಗುಡಿಸೋಕೆ ಹೆಣ್ಣಿಗೆ ಮಾತ್ರ ಹೇಳಿಕೊಟ್ಟು, ಗಂಡು ಮಕ್ಕಳಿಗೆ ಅದರ ಅವಶ್ಯಕತೆ ಇಲ್ಲ ಎನ್ನುವ ಎಲ್ಲರಿಗೂ ನನ್ನ ಧಿಕ್ಕಾರ. Where is equality?" ನಮಗೆ ಗೊತ್ತಿಲ್ಲದೇ ಬರುವ ಇಂತಹ ಮಾತುಗಳು ನಮ್ಮ ಜೀವನದಲ್ಲಿ ಏನೇನು ಪರಿಣಾಮ ಬೀರುತ್ತದೆ ಎಂದು ನಾವು ಯೋಚಿಸುತ್ತಾ ಹೋದರೆ ಅದಕ್ಕೆ ಎಲ್ಲೆಯೇ ಇಲ್ಲ. ಸಮಾಜ ನಮಗೆ ಕಟ್ಟುಪಾಡು ಹಾಕಿದೆ. ನಾವು ಅದನ್ನು ಬಿಡಿಸಿಕೊಳ್ಳುವ ಪ್ರಯತ್ನ ಮಾಡಬೇಕು. ಅಥವಾ ಈ ಸಮಾಜದಲ್ಲಿ ಬದಲಾವಣೆ ತರುವ ಪ್ರಯತ್ನ ಮಾಡಬೇಕು. ಅದು ಬಿಟ್ಟು ಇವತ್ತು ತನ್ನ ಮಗಳಿಗೆ ಕೆಲಸ ಮಾಡಲು ಕಲಿಸುವ ಹೆಣ್ಣುಮಕ್ಕಳೇ ಜಾಸ್ತಿ ಆಗಿದ್ದಾರೆ. ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣು ಮಕ್ಕಳನ್ನು ಎರಡನೇ ದರ್ಜೆ ನಾಗರೀಕರನ್ನಾಗಿ ನೋಡುವ ಪರಿ ಬದಲಿಸುವ ಪ್ರಯತ್ನ ಮಾಡಬೇಕಾಗಿದೆ.

ಹೆಣ್ಣು ಮಕ್ಕಳು ಬಾಹ್ಯಾಕಾಶ ನೋಡಿ ಬಂದಿದ್ದಾರೆ, ವಿಮಾನ ಹಾರಿಸಿದ್ದಾರೆ, ರೈಲು ಓಡಿಸಿದ್ದಾರೆ, ಜಗದಗಲ ಓಡಾಡಿ ದೇಶಕ್ಕೆ ಹೆಸರು ತಂದಿದ್ದಾರೆ ನಾನು ಇದನ್ನು ಒಪ್ಪಿಕೊಳ್ಳೇನೆ. ಆದರೆ ಅಡುಗೆಮನೆ ಕಡೆ ಮುಖ ಮಾಡದೆ ಅವರು ಇರುವರೇ. ಚಂದದ ಅಡುಗೆ ಮಾಡಿ ಮನೆಮಂದಿಗೆಲ್ಲಾ ಬಡಿಸದೇ ಇರುವರೇ?. ಅದರ ಆನಂದವನ್ನು ಸವಿಯದೇ ಇರುವರೇ? ಈ ಎಲ್ಲಾ ಮಾತುಗಳನ್ನು ಹೇಳುವ ನಾನು ಪುರುಷರ ಎಲ್ಲಾ ತಪ್ಪು-ಒಪ್ಪುಗಳನ್ನು ಒಪ್ಪಿ ತಲೆಬಾಗಿ ನಡೆಯುತ್ತೇನೆಂದು ಭ್ರಮಿಸಬೇಡಿ. ಅಂದರೆ ನಾನು ಇಡೀ ಕುಟುಂಬದ ಸಹನೆಯ ಕಟ್ಟೆ ಒಡೆಯದಂತೆ ನೋಡಿಕೊಳ್ಳುತ್ತೇನೆ ಎಂದು ಹೇಳ ಬಯಸುತ್ತೇನೆ.

**ಉಪಸಂಹಾರ :**

ಸಮತೋಲನದ ಬದುಕಿನಲ್ಲಿ ಗೃಹಿಣಿಯೇ ಪ್ರಥಮ. ಆಕೆಯ ಸ್ಥಾನವನ್ನು ಮತ್ತೊಬ್ಬರು ತುಂಬಲು ಸಾಧ್ಯವೇ ಇಲ್ಲ. ದುಡಿಯುವ ಮಹಿಳೆಯ ಜೊತೆ, ಗೃಹಿಣಿಯನ್ನು ಗೌರವಿಸಿ, ಗೃಹಿಣಿಗೂ ವಿಶ್ವ ಮಹಿಳಾ ದಿನಾಚರಣೆಯ ಶುಭಾಶಯ ಹೇಳಿ.

**'ಯತ್ರ ನಾರ್ಯಸ್ತು ಪೂಜ್ಯಂತೆ ರಮಂತೆ ತತ್ರ ದೇವತಾಃ'** ಎಂಬ ಮಾತು ಕೇವಲ ಮಾತಾಗಿಯೇ ಇರಬಾರದು, ಅದನ್ನು ಆಚರಣೆಗೆ ತರಬೇಕು. ಆಗ ಮಾತ್ರ ಈ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ಒಂದು ಒಳ್ಳೆಯ ಸ್ಥಾನ ಸಿಗಲು ಸಾಧ್ಯ. ಹೀಗಾದಲ್ಲಿ ಮಾತ್ರ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಉದ್ದೇಶ ಅರ್ಥಪೂರ್ಣ. ಮಹಿಳೆಯರಿಗೆ "ಮಹಿಳಾ ದಿನಾಚರಣೆಯ ಶುಭಾಶಯಗಳು".

# ಸಹಕಾರಿ ಕ್ಷೇತ್ರ ಮತ್ತು ಮಹಿಳೆ

– ಶ್ರೀ ವೆಂಕಟೇಶ ರಾಠೋಡ

ಒಂದು ಜೀವನ್ನು ಸೃಷ್ಟಿಮಾಡುವ ಶಕ್ತಿ ಮಹಿಳೆಗೆ ಇದೆ ಎಂದಾದರೆ, ಖಂಡಿತವಾಗಿ ಅವಳಲ್ಲಿ ಅನಂತವಾದ ಶಕ್ತಿ ಇದೆ ಎಂದರ್ಥ. ಮಾತೃ ಶಕ್ತಿ, ವಾತ್ಸಲ್ಯ, ಸಹನೆ, ಪ್ರೀತಿ, ತಾಳ್ಮೆ, ಆರೆಕೆ, ಸತ್ಕಾರ, ಸಾಂತ್ವನ ಗುಣಗಳು ಆಕೆಗೆ ಹುಟ್ಟಿನಿಂದಲೇ ಬೆಳೆಸಿಕೊಂಡು ಬಂದಿರುತ್ತದೆ. ಸಮಾಜದಲ್ಲಿ ಇರುವ ಪರಿಸ್ಥಿತಿಗಳು, ಕಟ್ಟುಪಾಡುಗಳಿಗೆ ಮತ್ತು ಆಕೆಗೆ ಸಿಗುತ್ತಿರುವ ಪ್ರಾಧಾನ್ಯತೆಗಳಿಗೆ ಸರಿಯಾಗಿ ಅವಳಿಗೆ ಸ್ಥಾನಮಾನ ಸಿಗುತ್ತಿದೆ. ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಮಹಿಳೆ ಪುರುಷರಿಗೆ ಸಮಾನಳು, ತನ್ನ ಜೀವನವನ್ನು ತಾನೇ ರೂಪಿಸಿಕೊಂಡಿರುವುದನ್ನು ನೋಡಬಹುದು. ನಮ್ಮ ದೇಶದಲ್ಲಿ ಕೌಟುಂಬಿಕ ಪದ್ದತಿ, ಸಂಸ್ಕೃತಿ, ಸಂಸ್ಕಾರಗಳು, ಕುಟುಂಬ ನಿರ್ವಹಣೆ, ಆರೈಕೆ ಮಾಡುವ ಜವಾಬ್ದಾರಿ ಅನಾಧಿ ಕಾಲದಿಂದಲೂ ಬಂದಿರುವುದರಿಂದ ಸಣ್ಣ ವಯಸ್ಸಿನಿಂದಲೇ ಆಕೆಗೆ ಹಲವಾರು ನೀತಿ ನಿಯಮಗಳು, ಕಟ್ಟುಪಾಡುಗಳು, ಹಬ್ಬ ಹರಿದಿನ, ಸಂಸ್ಕಾರಗಳನ್ನು ಪಾಲಿಸುವವಳು ಎಂದು ಆಗಿ ಬಿಡುತ್ತಾಳೆ. ಅವಳು ಹುಟ್ಟಿನಿಂದ ಬಂದಂತಹ ಗುಣಗಳನ್ನು ಕೌಶಲ್ಯಗಳನ್ನು ತನ್ನ ಮನೆಯ ನಿರ್ವಹಣೆಯಲ್ಲಿ ತೋರಿಸುತ್ತಿದ್ದಾಳೆ.

ಆದರೆ ಇಂದು ಕಾಲ ಬದಲಾಗಿದೆ. ಕೂಡು (ಒಟ್ಟು ಕುಟುಂಬ)ಕುಟುಂಬ ಪದ್ಧತಿ ಒಡೆದು ಸಣ್ಣ ಕುಟುಂಬ ಆಗಿದೆ. ಗಂಡ, ಮಕ್ಕಳು ತಾನು ಎಂದಾಗಿದೆ. ತನ್ನ ಕುಟುಂಬದ ಆರ್ಥಿಕ ಪರಿಸ್ಥಿತಿ ಸುಧಾರಣೆಗೋಸ್ಕರ ಸಮಾಜದಲ್ಲಿ ತಾನೂ ದುಡಿದು ಸಂಸಾರ ಸುಗಮವಾಗುವಲ್ಲಿ ಸಹಕರಿಸುತ್ತಿದ್ದಾಳೆ. ಅನಾದಿ ಕಾಲದಿಂದ ಬಂದಂತಹ ಜವಾಬ್ದಾರಿಗಳ ಜೊತೆಯಲ್ಲಿ ಪುರುಷರಿಗೆ ಸಮಾನವಾಗಿ ಹೊರಗಡೆಯೂ ದುಡಿಯಲು ತಾನು ಶಕ್ತಳು ಮತ್ತು ತನ್ನ ಕರ್ತವ್ಯನಿರ್ವಹಣೆಯಲ್ಲಿ ಪರುಷರಿಗಿಂತಲೂ ಮೇಲು ಎಂಬುದನ್ನು ತೋರಿಸಿ ಕೊಟ್ಟಿದ್ದಾಳೆ.

ಇಂದು ದೇಶಾದ್ಯಂತ ಹಲವಾರು ಮಹಿಳಾ ಪರ ಸಂಘಟನೆಗಳು ಸಂಸ್ಥೆಗಳು ಕಾರ್ಯಾಚರಿಸುತ್ತಿದೆ. ಮಹಿಳಾಪರ ಕಾನೂನು, ಮಹಿಳಾ ದೌರ್ಜನ್ಯ, ಮಹಿಳಾ ಸಬಲೀಕರಣ, ಮಹಿಳೆ ಮತ್ತು ಮಕ್ಕಳ ಕಲ್ಯಾಣಾರ್ಥ ಕಾರ್ಯಕ್ರಮಗಳು, ಪಾಲನಾ ಕೇಂದ್ರಗಳು ಹೀಗೆ ಹಲವಾರು ಕ್ಷೇತ್ರಗಳಲ್ಲಿ ಈ ಸಂಸ್ಥೆಗಳು ಕರ್ತವ್ಯ ನಿರ್ವಹಿಸುತ್ತಿದೆ.

ಪ್ರಸ್ತುತ ದಿನಗಳಲ್ಲಿ ಬೆಳೆಯುತ್ತಿರುವ ಸ್ವಸಹಾಯ ಸಂಘಗಳು ಮಹಿಳಾ ಸಂಘಟನೆಗೆ ಒಂದು ಉತ್ತಮ ಉದಾಹರಣೆ ಇಂದು ಸರ್ಕಾರಗಳು, ಸ್ವಯಂ ಸೇವಾ ಸಂಸ್ಥೆಗಳು, ಬ್ಯಾಂಕುಗಳು, ಸಹಕಾರಿ ಸಂಘಗಳು ಮತ್ತು ಸೌಹಾರ್ದ ಸಹಕಾರಿಗಳನ್ನು ಪ್ರಾಯೋಜಿಸುತ್ತಿವೆ. ಅವರಿಗೆ ಆರ್ಥಿಕ ಸವಲತ್ತುಗಳನ್ನು ಒದಗಿಸುತ್ತಿದೆ. ಮಹಿಳಾ ಸಬಲೀಕರಣದತ್ತ ಒಂದು ದಿಟ್ಟ ಹೆಜ್ಜೆಯೇ ಈ ಸ್ವಸಹಾಯ ಸಂಘಗಳು, ಸಹಕಾರಿ ಸಂಘಗಳು. ಇಂದು ಆರ್ಥಿಕವಾಗಿ ಮಹಿಳೇಯರು ಸಬಲರಾಗಿದ್ದಾರೆ. ತನ್ನ ಕುಟುಂಬದಲ್ಲಿಯೂ ಒಂದು ವಿಶಿಷ್ಟ ಸ್ಥಾನಮಾನ ಅವಳಿಗೆ ಇವತ್ತು ಸಿಕ್ಕಿದ್ದರೆ ಅದು ಸಹಕಾರಿ ಕ್ಷೇತ್ರವೂ ಕಾರಣ.

**ಸಹಕಾರ ಕ್ಷೇತ್ರದಲ್ಲಿ ಮಹಿಳೆಯರ ಪಾತ್ರ :**

ಮಹಿಳೆಯರು ಸ್ವಾವಲಂಬಿ ಬದುಕು ರೂಪಿಸಿಕೊಳ್ಳಲು ಸಹಕಾರಿ ಕ್ಷೇತ್ರ ಮಹತ್ವದ ಕೊಡುಗೆ ನೀಡುವ ಮೂಲಕ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಪ್ರಗತಿಗೆ ಸಹಕಾರಿಯಾಗಿದೆ. ಮಹಿಳೆಯರು ತಮ್ಮನ್ನು ಸಹಕಾರಿ ಕ್ಷೇತ್ರದಲ್ಲಿ ತೊಡಿಸಿಕೊಂಡರೆ ಆರ್ಥಿಕ, ಸಾಮಾಜಿಕವಾಗಿ ಬದಲಾವಣೆ ಕಂಡು, ಘನತೆ ಗೌರವ ಹೆಚ್ಚುತ್ತದೆ. ಮಹಿಳೆಯರಿಗೆ ಸಹಕಾರ ಕ್ಷೇತ್ರವು ಒಂದು ಪ್ರಮುಖವಾದ ವೇದಿಕೆ, ಸ್ವಸಹಾಯ ಸಂಘಗಳ ಮೂಲಕ, ಮಹಿಳಾ ಸಹಕಾರ ಸಂಘಗಳ ಮೂಲಕ ಬೆಳೆಯಲು ಸಾದ್ಯ. ಸಹಕಾರ ಸಂಘಗಳಲ್ಲಿ ಮಹಿಳಾ ಸದಸ್ಯರು ಪ್ರತಿಯೊಬ್ಬರ ಕೊಡುಗೆಯನ್ನು ನೀಡಿ ಸಭೆಗಳನ್ನು ನಡೆಸುವುದು, ದಾಖಲಾತಿಗಳನ್ನು ಬರೆಯುವುದು ಮೊತ್ತ ಸಂಗ್ರಹಣೆ ಮಾಡುವುದು, ಸಭೆ ನಿರ್ವಹಣೆ ಹೀಗೆ ಸಂಘದ ಸಂಪೂರ್ಣ ನಿರ್ವಹಣೆಯನ್ನು ಸದಸ್ಯರು ಸೇರಿ ಮಾಡುತ್ತಿದ್ದಾರೆ. ಇದರಿಂದ ಅವರ ಜ್ಞಾನ ಮಟ್ಟ ವೃದ್ಧಿಯಾಗುತ್ತದೆ, ಮತ್ತು ಸಾಮಾಜಿಕ, ಆರ್ಥಿಕವಾಗಿ ಹಾಗೂ ರಾಜಕೀಯವಾಗಿ ಬೆಳೆಯಲು ಸಾಧ್ಯವಾಗಿದೆ. ಸಹಕಾರ ಕ್ಷೇತ್ರದಲ್ಲಿ ಮಹಿಳೆಯರು ಸೇರಿ ಮಹಿಳಾ ಸಂಘಗಳನ್ನು ಹುಟ್ಟು ಹಾಕಿ, ಅಧ್ಯಕ್ಷರು, ಉಪಾಧ್ಯಕ್ಷರಾಗಿ ಮತ್ತು ನಿರ್ದೇಶಕರಾಗಿ ಒಂದು ಸಂಸ್ಥೆಯನ್ನು ಯಶಸ್ವಿಯಾಗಿ ನಡೆಸಿಕೊಂಡು ಹೊಗುತ್ತಿರುವ ಹಲವಾರು ಉದಾಹರಣೆಗಳು ನಾವು ನೋಡುತ್ತೇವೆ. ಜವಾಬ್ದಾರಿ ಅಧಿಕಾರಿಗಳಾಗಿ, ಮುಖ್ಯ ಕಾರ್ಯನಿರ್ವಾಹಕರಾಗಿ, ಸಿಬ್ಬಂದಿಗಳಾಗಿ ಸಂಘ ಸಂಸ್ಥೆಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗುತ್ತಿರುವುದು ಮಹಿಳಾ ಸಬಲತೆಗೆ ಸಾಕ್ಷೀಕರಿಸಿದಂತಿದೆ.

ಸರ್ಕಾರವು ಎಲ್ಲಾ ಹಂತದಲ್ಲಿಯೂ ಸ್ತ್ರೀಯರ ಅಭ್ಯುದಯಕ್ಕಾಗಿ ಅನೇಕ ಯೋಜನೆಗಳನ್ನು ರೂಪಿಸುವ ಮೂಲಕ ಸ್ತ್ರೀ ಶಕ್ತಿ ಸಂಘಗಳನ್ನು ಸ್ಥಾಪಿಸಿ ಮಹಿಳೆಯರು ಸ್ವಾವಲಂಬಿಗಳಾಗಲು ಉತ್ತೇಜನೆ ನೀಡಿದೆ. ಇದರಿಂದ ಸಹಕಾರ ಸಂಘಗಳ ಮೂಲಕ ಮಹಿಳೆ ಸೇರಿದಂತೆ ಇಡೀ ಸಮಾಜದ ಸುಧಾರಣೆಯಾಗುತ್ತಿದೆ.

ಮಹಿಳೆಯರು ಪಡೆದ ಸಾಲವನ್ನು ಸ್ವ ಉದ್ಯೋಗದಲ್ಲಿ ತೊಗಡಿಸಿಕೊಂಡು ಪ್ರಾಮಾಣಿಕವಾಗಿ ಸಾಲ ಮರುಪಾವತಿ ಮಾಡುವ ಮೂಲಕ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಕೊಡುಗೆ ನೀಡಿ ಆರ್ಥಿಕವಾಗಿ ಸಧೃಢರಾಗುತ್ತಿರುವುದಲ್ಲದೇ ಇತರರಿಗೂ ಮಾದರಿಯಾಗಿದ್ದಾರೆ.

ಮಹಿಳೆ ಇವತ್ತು ಸಬಲೆಯಾಗುವುದಕ್ಕೆ ಯಾವುದೇ ತೊಡಕ್ಕಿಲ್ಲ. ಆದರೆ ತನ್ನನ್ನು ತಾವು ತೊಡಗಿಸಿ ಕೊಳ್ಳುವುದು ಅತ್ಯಂತ ಅವಶ್ಯವಾಗಿದೆ. ಸಮಾಜದಲ್ಲಿ ಆಗುತ್ತಿರುವ ಬದಲಾವಣೆಗಳು, ಅಭಿವೃದ್ಧಿಗಳು, ಬೆಳವಣಿಗೆಗಳಿಗೆ ಸರಿಯಾಗಿ ತನ್ನನ್ನು ತಾನು ಹೊಂದಿಸಿಕೊಳ್ಳುವುದರಲ್ಲಿ ಆಕೆಯ ಜಾಣ್ಮೆ ಅಡಗಿದೆ. ಸರ್ಕಾರ, ಸಂಘ ಸಂಸ್ಥೆಗಳು, ಕಾಯಿದೆ. ಕಾನೂನುಗಳು ಇಂದು ಆಕೆಯ ಬೆನ್ನೆಲುಬಾಗಿ ನಿಂತಿದೆ. ಇದನ್ನು ಅರಿತುಕೊಂಡು ಉತ್ತಮ ಭ್ರವಿಷ್ಯವನ್ನು ರೂಪಿಸಿಕೊಳ್ಳುವಲ್ಲಿ ಮಹಿಳೆಗೆ ಶಕ್ತಿತರಲಿ ಎಂದು ಹಾರೈಸೋಣ.

# ಹೊಸ ಯುಗದ ಆರಂಭ – ಈ ಯುಗಾದಿ

– ಶ್ರೀ ಶಂಕರ್ ಎಸ್

ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ
ಹೊಸ ವರುಷಕೆ ಹೊಸ ಹರುಷವ, ಹೊಸತು ಹೊಸತು ತರುತಿದೆ.
ಈ ಯುಗಾದಿ
ಹೊಂಗೆಹೂವ ತೊಂಗಲಲ್ಲಿ, ಭೃಂಗದ ಸಂಗೀತಕೇಳಿ
ಮತ್ತೆ ಕೇಳಿಬರುತಿದೆ, ಬೇವಿನ ಕಹಿ ಬಾಳಿನಲ್ಲಿ
ಹೂವಿನ ನಸುಗಂಪು ಸೂಸಿ, ಜೀವಕಳೆಯ ತರುತಿದೆ.
ಈ ಯುಗಾದಿ

– ದ.ರಾ. ಬೇಂದ್ರೆ



ಯುಗಾದಿ ಎಂದರೆ ಸೃಷ್ಟಿಯ ಆರಂಭ ಅಥವಾ ಹೊಸ ಸಂವತ್ಸರ ಎಂದು ಹೇಳುತ್ತಾರೆ. ಸೃಷ್ಟಿಕರ್ತನಾದ ಬ್ರಹ್ಮದೇವರು ಈ ದಿನದಿಂದಲೇ ತನ್ನ ಸೃಷ್ಟಿಕ್ರಿಯೆ ಆರಂಭಿಸಿದ್ದು ಎನ್ನುವ ಅಂಶವೂ ಯುಗಾದಿಯ ಆಚರಣೆಯೊಂದಿಗೆ ಸೇರಿಕೊಂಡಿದೆ.

ಹಣ್ಣೆಲೆಗಳೆಲ್ಲ ಉದುರಿ, ಮರಗಿಡಗಳನ್ನು ಹೊಸ ಚಿಗುರಿನೊಂದಿಗೆ ಕಂಗೊಳಿಸುವ ಕಾಲ, ಪ್ರಕೃತಿಯ ತನ್ನ ಮೈಕೊಡವಿ ಹಸಿರನ್ನುಟ್ಟ ಅಪ್ಸರೆಯಂತೆ ಮೆರೆಯುವ ಸವಿಗಾಲ, ಪ್ರಾಣಿಪಕ್ಷಿ ಸಂಕುಲದೊಂದಿಗೆ ಇಡಿ ನಿಸರ್ಗವೇ ನವಚೈತನ್ಯದೊಂದಿಗೆ ಸಂಭ್ರಮಿಸುವ ನವಕಾಲವೇ ಚೈತ್ರ ಮಾಸದ ಆಗಮನ, ಅದರ ಜೊತೆಜೊತೆಗೆ ಹಿಂದೂಗಳ ಪ್ರಮುಖ ಹಬ್ಬ ಯುಗಾದಿಯ ಅಗಮನವೋ ಆಗುತ್ತದೆ. ಯುಗಾದಿಯೆಂದರೆ ದಕ್ಷಿಣ ಭಾರತೀಯರಿಗೆ ಅದರಲ್ಲೂ ವಿಶೇಷವಾಗಿ ಕರ್ನಾಟಕ ಮತ್ತು ಆಂಧ್ರಪ್ರದೇಶದ ಜನತೆಗೆ ನೂತನ ಸಂವತ್ಸರವೂ ಪ್ರಾರಂಭವಾಗುವುದರಿಂದ ಈ ಹಬ್ಬಕ್ಕೆ ತನ್ನದೇ ಆದ ವಿಶೇಷತೆಯೂ, ವೈಶಿಷ್ಟ್ಯತೆಯೂ ಆಗಿದೆ.

ಈ ದಿನದಂದು ಮನೆಯ ಬಾಗಿಲಿನಲ್ಲಿ ಮಾವಿನ ಎಲೆಯ ತೋರಣದಿಂದ ಸಿಂಗರಿಸಿ, ಎಲ್ಲರೂ ಎಣ್ಣೆಯ ಸ್ನಾನ ಮಾಡಿ, ಹಿರಿಯರು ಕಿರಿಯರೆಲ್ಲ ಹೊಸ ಬಟ್ಟೆಯನ್ನು ಉಟ್ಟು ಸಂಭ್ರಮಿಸುವರು, ಮುಂಜಾನೆ ದೇವರ ಆರಾಧನೆಯ ನಂತರ ಬೇವು-ಬೆಲ್ಲವನ್ನು ಸೇವಿಸುವ ಸಂಪ್ರದಾಯ ನಮ್ಮಲ್ಲಿದ್ದು, ಇದು ಜೀವನದ ಸಿಹಿಕಹಿಯ ಸಮನ್ವಯದ ಸಂಕೇತವೂ ಆಗಿದೆ.

ಬೇವು-ಬೆಲ್ಲ ವೆಂಬುದು ಸುಖ-ದುಃಖಗಳ ಸಂಕೇತವಾಗಿದ್ದು, ನಮ್ಮ ಜೀವನದಲ್ಲಿ ಈ ಎರಡನ್ನೂ ಸರಿದೂಗಿಸಿಕೊಂಡು ನಾವು ಬದುಕಬೇಕೆಂಬ ನಿತ್ಯ ಸತ್ಯವನ್ನೂ ನಮಗೆ ತಿಳಿಸುತ್ತಾ, ನೋವುಗಳು ಬೇವಿನಂತೆ ಕಹಿಯೆನಿಸಿದರೂ, ಅದನ್ನೂ ಮರೆಸುವ ಬೆಲ್ಲದಂತಹ ನಲಿವಿನ ಅನುಭೂತಿಗಳು ಜೀವನದ ಭಾಗವೇ ಎಂಬುದನ್ನು ನಾವು ಮರೆಯಬಾರದೆಂಬ ಪಾಠವಾಗಿದೆ.

ಯುಗಾದಿಯ ಆಚರಣೆಯಲ್ಲಿ ಸೌರಮಾನ ಹಾಗೂ ಚಾಂದ್ರಮಾನ ಯುಗಾದಿಗಳು ಆಚರಣೆಯ ಪ್ರಚಲಿತದಲ್ಲಿದ್ದು ಕರ್ನಾಟಕದಲ್ಲಿ ಹಾಗೂ ಆಂಧ್ರಪ್ರದೇಶದಲ್ಲಿ ಚಾಂದ್ರಮಾನ ಯುಗಾದಿಯನ್ನು ಆಚರಿಸಿದರೆ, ತಮಿಳುನಾಡು, ಕೇರಳ ಹಾಗೂ ಉತ್ತರ ಭಾರತದಲ್ಲಿ ಸೌರಮಾನ ಯುಗಾದಿಯನ್ನು ಆಚರಿಸಲಾಗುತ್ತದೆ. ಅಲ್ಲದೆ ಯುಗಾದಿಗೆ ಬೇರೆ, ಬೇರೆ ರಾಜ್ಯಗಳಲ್ಲಿ ಬೇರೆಬೇರೆ ಹೆಸರುಗಳಿವೆ. ಮಹಾರಾಷ್ಟ್ರ ಮತ್ತು ಗುಜರಾತಿನಲ್ಲಿ ಗುಡಿ ಪಾಡ್ವ ಎಂತಲೂ, ಉತ್ತರದ ಕೆಲವು ರಾಜ್ಯಗಳಲ್ಲಿ ಬೈಸಾಖಿ ಎಂತಲೂ ಕರೆಯಲ್ಪಡುತ್ತದೆ. ಹೆಸರು ಮಾತ್ರವಲ್ಲದೆ, ಹಬ್ಬದ ಆಚರಣೆಯ ವಿಧಿ ವಿಧಾನಗಳು ಕೂಡಾ ವಿಭಿನ್ನವಾಗಿದೆ.

ನಾವು ಬೇವು ಬೆಲ್ಲ ಸೇವಿಸಿದರೆ ಆಂಧ್ರಪ್ರದೇಶದ ಜನ ಉಗಾದಿ ಪಚ್ಚಡಿಯಿಂ ಹುಣಸೇಹಣ್ಣು, ಬೆಲ್ಲ, ಮಾವಿನಕಾಯಿ, ಉಪ್ಪು, ಮೆಣಸು, ಬೇವಿನ ಐದು ರುಚಿಗಳನ್ನು ಸೇರಿಸಿ ಮಾಡಿದ ಪದಾರ್ಥವನ್ನು ಸೇವಿಸುವರು, ಮಹಾರಾಷ್ಟ್ರ ಹಾಗೂ ಗುಜರಾತಿನಲ್ಲಿ ಕೋಲಿಗೆ ವಸ್ತ್ರವನ್ನು ಕಟ್ಟಿ, ಹೂ ಹಾರವನ್ನು ಹಾಕಿ ಗುಡಿಯೆಂದು ಮನೆಯ ಮುಂದೆ ಇರಿಸಿ ಆರಾಧಿಸುವರು, ಹೀಗೆ ಆಚರಣೆಯ ವಿಧಾನದಲ್ಲೂ ಕೂಡಾ ಯುಗಾದಿಗೆ ತನ್ನದೇ ಆದ ಸೊಗಡಿದೆ.

ಒಟ್ಟಾರೆ ಯುಗಾದಿಯ ಸಾಂಪ್ರದಾಯಿಕ ಆಚರಣೆಯೊಂದಿಗೆ ಪ್ರಕೃತಿಯೊಂದಿಗಿನ ನಮ್ಮ ಅವಿನಾಭಾವ ಸಂಬಂಧದ ಪ್ರತೀಕವೆಂದರೆ ತಪ್ಪಾಗಲಾರದು, ಪ್ರಕೃತಿಯ ತನ್ನಲ್ಲಿ ಹೊಸತನವನ್ನು ತರುತ್ತದೆ. ಪ್ರತಿ ಯುಗಾದಿಗೂ ಎಲ್ಲರ ಜೀವನದಲ್ಲಿ ಹೊಸತನದತ್ತ ನಡೆಯುವಂತ್ತ ದಾರಿಯಾಗಲಿ ಈ ಯುಗಾದಿ. ನೂತನ ಸಂವತ್ಸರ ಶಾರ್ವರಿಯು ಎಲ್ಲರ ಜೀವನದಲ್ಲಿ ಹೊಸ ಚೈತನ್ಯವನ್ನು ತುಂಬಲಿ.

# ಸ್ವಸಹಾಯ ಗುಂಪುಗಳು ಪರಿಕಲ್ಪನೆ – ನೊಬೈಲ್ ಪ್ರಶಸ್ತಿ ಮೊಹಮ್ಮದ್ ಯೂನಿಸ್ ಬಾಂಗ್ಲಾದೇಶ

– ಶ್ರೀ ಶಂಕರ್ ಹೆಗಡೆ

**ಯಾವ ಹಳ್ಳಿಯ ಜನರು ಸ್ವಾವಲಂಬಿಗಳಾಗಲು ಪ್ರಯತ್ನಿಸುವುದಿಲ್ಲವೋ ಆ ಹಳ್ಳಿಯ ಅಭಿವೃದ್ಧಿಗಾಗಿ ಲಕ್ಷಗಟಗ್ಗಲೆ ಹಣ ಖರ್ಚ ಮಾಡಿದರೂ ಪ್ರಯೋಜನವಿಲ್ಲ"**

- ಸ್ವಾಮಿ ವಿವೇಕಾನಂದರು.

## ಸ್ವಸಹಾಯ ಗುಂಪುಗಳು ಎಂದರೇನು?



ಸಮಾಜದ ಬಡ ಕುಟುಂಬಗಳ ಸಮಾನ ಮನಸ್ಕರ ಸಾಮಾಜಿಕ ಅಥವಾ ಆರ್ಥಿಕ ಹಿನ್ನೆಲೆಯುಳ್ಳ ಪರಸ್ತರ ವಿಶ್ವಾಸದಿಂದ ರಚಿಸಿಕೊಳ್ಳುವ ಒಂದು ಅನೌಪಚಾರಿಕ ಗುಂಪಿಗಳಿಗೆ ಸ್ವಸಹಾಯ ಗುಂಪುಗಳು ಎಂದು ಕರೆಯಬಹುದು.

ಸ್ವಸಹಾಯ ಗುಂಪುಗಳು ಪರಿಕಲ್ಪನೆಯನ್ನು ವಿಶ್ವಕ್ಕೆ ನೀಡಿದ ಕೀರ್ತಿ ಬಾಂಗ್ಲಾದೇಶದ ಪ್ರೋ॥ ಮೊಹಮದ್ ಯೂನಸ್ ಅವರಿಗೆ ಕಿರುಸಾಲ ಯೋಜನೆಯಲ್ಲಿ ನೋಬಲ್ ಪಾರಿತೋಷಕ ಬಂದಿರುವುದು ಗಮನಾರ್ಹ. ಸ್ವಸಹಾಯ ಗುಂಪುಗಳು ಮಹಿಳೆಯರ ಸಬಲೀಕರಣ ಮತ್ತು ಸ್ವಾವಲಂಬನೆಯ ಹಾದಿಯಲ್ಲಿ ಪ್ರಮುಖ ಹಾಗೂ ಪ್ರಬಲ ಅಸ್ತ್ರವಾಗಿದೆ. ವಿಶೇಷತವಾಗಿ ಗ್ರಾಮೀಣ ಪ್ರದೇಶಗಳ ಮಹಿಳೆಯರು ತಮ್ಮ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಗತಿಗಳನ್ನು ಸುಧಾರಿಸಿಕೊಳ್ಳಲು ಮತ್ತು ಬಡತನ ನಿರ್ಮೂಲನೆಗೆ ಸಹಾಯಕಾರಿಯಾದ ಸ್ವಸಹಾಯ ಗುಂಪುಗಳ ಪ್ರಯೋಗಗಳು ಜಗತ್ತಿನ ಬಾಂಗ್ಲಾದೇಶ ಫಿಲಿಪೈನ್ಸ್ ಮತ್ತು ಇತರ ದೇಶಗಳಲ್ಲಿ ಯಶಸ್ವಿಯಾಗಿ ಕೈಗೊಳ್ಳಲಾಗಿದೆ.

## ಸ್ವಸಹಾಯ ಗುಂಪುಗಳ ರಚನೆಯ ಹಿನ್ನೆಲೆ ಈ ಕೆಳಗಿನಂತಿದೆ.

### ದೇಶದ ಮುಖ್ಯ ಸಮಸ್ಯೆಗಳೇನು?

- ಬಡತನ, ನಿರುದ್ಯೋಗ ಜನಸಂಖ್ಯೆಯಲ್ಲಿ ತೀವ್ರ ಹೆಚ್ಚಳ, ಸಂಪನ್ಮೂಲಗಳ ಮಿತಿಮೀರಿದ ಬಳಕೆ, ಅನಕ್ಷರತೆ, ಭ್ರಷ್ಟಾಚಾರ

### ಬಡವರ ಸಮಸ್ಯೆಗಳೇನು ?

- ಅನಕ್ಷರತೆ, ದೊಡ್ಡ ಕುಟುಂಬ, ನಿರುದ್ಯೋಗ, ಆಸ್ತಿ ಇಲ್ಲ, ಅನಾರೋಗ್ಯ, ಅಸಹಾಯಕತೆ

### ಬಡವರ ಸಮಸ್ಯೆಗಳನ್ನು ಯಾರು ಪರಿಹರಿಸಬೇಕು?

ಸರಕಾರ, ಸ್ವಯಂ ಸೇವಾ ಸಂಸ್ಥೆಗಳು, ಬ್ಯಾಂಕುಗಳು, ದೇವರು, ಅವರೇ

### ಬಡವರ ಸಮಸ್ಯೆಗಳನ್ನು ಅವರೇ ಹೇಗೆ ಪರಿಹರಿಸಿಕೊಳ್ಳಬಹುದೇ?

- ಒಗ್ಗಟ್ಟಿನಿಂದ, ಉಳಿತಾಯ ಮಾಡುವುದರಿಂದ, ಪರಸ್ಪರ ಪ್ರೀತಿ ಮತ್ತು ವಿಶ್ವಾಸದಿಂದ, ಅಕ್ಷರ ಕಲಿಕೆಯಿಂದ
- ತಮ್ಮ ಸಾಲದ ಅವಶ್ಯಕತೆಗಳನ್ನು ತಾವೇ ಪೂರೈಸಿಕೊಂದು, ಸ್ವಸಹಾಯ ಸಂಘಗಳ ರಚನೆಯ ಮೂಲಕ
- ಬ್ಯಾಂಕಿನಿಂದ / ಸಹಕಾರ ಸಂಘಗಳಿಂದ ಸಾಲ ಪಡೆದು ಆರ್ಥಿಕ ಏಳಗೆಯಿಂದ

### ಸ್ವಸಹಾಯ ಎಂದರೇನು?

- ದಿನಾಲೂ ಒಂದು ಮೀನು ಕೊಡುವ ಬದಲು ಮೀನು ಹಿಡಿಯುವುದನ್ನು ಕಲಿಸಿ.
- ಬೇಡುವ ಪ್ರವೃತ್ತಿಯಿಂದ ನೀಡುವ ಪ್ರವೃತ್ತಿಗೆ ಒಯ್ಯುವುದು.
- ಜಗತ್ತನ್ನು ದ್ವೇಷಿಸುವ ಬದಲು ತನ್ನನ್ನು ಪ್ರೀತಿಸಲು ಕಲಿಸುವುದು.
- ಎಲ್ಲರ ಜೊತೆಗೆ ಬದುಕಲು ಕಲಿಸುವುದು.
- ಜೀವನದಲ್ಲಿ ನಂಬಿಕೆ ಮೂಡಲು ಅವಕಾಶ ಕಲ್ಪಿಸುವುದು.
- ದುಶ್ಚಟಗಳಿಂದ ಹೊರಬರಲು ಸಹಕರಿಸುವುದು.

ನಮ್ಮ ದೇಶದಲ್ಲಿ ಮೈರಾಡ ಸಂಸ್ಥೆ, ಸ್ವಸಹಾಯ ಗುಂಪಿನ ಪರಿಕಲ್ಪನೆಯನ್ನು ಅಳವಡಿಸಿಕೊಂಡು ಗ್ರಾಮೀಣಾಭಿವೃದ್ಧಿ ಸಾಧಿಸಿದೆ.

1992 ರಲ್ಲಿ ನಬಾರ್ಡ್ ಇಂತಹ ಗುಂಪುಗಳ ಮತ್ತು ಬ್ಯಾಂಕುಗಳ ಜೊತೆಗೆ ಸಂಪರ್ಕ ಕಲ್ಪಿಸುವ ಮಾದರಿ ಯೋಜನೆಯನ್ನು ಜಾರಿಯಲ್ಲಿ ತಂದಿತು. ತುಮಕೂರು ಜಿಲ್ಲೆಯಲ್ಲಿ ತುಮಕೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕು 2001ರಲ್ಲಿಯೇ ಬ್ಯಾಂಕಿನ ಅಧ್ಯಕ್ಷ ಶ್ರೀ ಕೆ.ಎನ್ ರಾಜಣ್ಣನವರ ಮಾರ್ಗದರ್ಶನದಲ್ಲಿ ಸ್ವಸಹಾಯ ಗುಂಪುಗಳ ರಚನೆ ಮತ್ತು ಜೋಡಣೆ ಕಾರ್ಯವನ್ನು ಪ್ರಾರಂಭಿಸಿ ಪ್ರಗತಿ ಸಾಧಿಸುತ್ತಾ ಬಂದಿದೆ.

**ಸ್ವಸಹಾಯ ಗುಂಪು ಅಂದರೆ ಏನು ?**

- 10 ರಿಂದ 20 ಒಂದೇ ಮನೋಭಾವನೆಯುಳ್ಳ ಬಡ ಜನರು
- ಪ್ರೀತಿ, ವಿಶ್ವಾಸ, ಒಗ್ಗಟ್ಟು, ಒಮ್ಮತದಿಂದ ಇರುವಂತವರು.
- ನಿರಂತರ ಉಳಿತಾಯದ ಮತ್ತು ಸಾಲದ ಮೂಲಕ ತಮ್ಮ ಮತ್ತು ತಮ್ಮ ಹಳ್ಳಿಯ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ಪರಿಸರದ ಪ್ರಗತಿಯನ್ನು ಸಾಧಿಸುವವರು.

**ಸ್ವಸಹಾಯ ಗುಂಪುಗಳ ಗುಣ ವಿಶೇಷಗಳು :**

- ಎಲ್ಲರೂ ಬಡವರು
- ಒಂದು ಕುಟುಂಬದಿಂದ ಒಬ್ಬ ಸದಸ್ಯ
- ಒಂದೇ ಪ್ರದೇಶದಲ್ಲಿ ವಾಸಿಸುವವರು.
- 18 ರಿಂದ 60 ವರ್ಷ ವಯೋಮಿತಿ
- ಸಮಾಜ ಮನಸ್ಕರು (ಉದ್ಯೋಗ, ಜಾತಿ, ಲಿಂಗ)
- ಪ್ರತಿ ವಾರ ಉಳಿತಾಯ ಮಾಡುತ್ತಾರೆ.
- ಪ್ರತಿನಿಧಿ ಒಂದು ಮತ್ತು ಪ್ರತಿನಿಧಿ ಎರಡು ಗುಂಪಿಗೆ ಮುಂದಾಳತ್ವ ನೀಡುತ್ತಾರೆ.
- ಪ್ರತಿನಿಧಿ ಒಂದು ಮತ್ತು ಪ್ರತಿನಿಧಿ ಎರಡು ವರ್ಷಕ್ಕೊಮ್ಮೆ ಒಮ್ಮತದಿಂದ ಬದಲಾಗುತ್ತಾರೆ.
- ವಾರಕ್ಕೊಮ್ಮೆ ತಮ್ಮ ಉಳಿತಾಯವನ್ನು ಬ್ಯಾಂಕಿನಲ್ಲಿ ಜಮಾ ಮಾಡುತ್ತಾರೆ.
- ಮೂರು ತಿಂಗಳವರೆಗಿನ ಸಭೆಗಳಲ್ಲಿ ಉಳಿತಾಯಕ್ಕೆ ಮಹತ್ವ ಕೊಡುತ್ತಾರೆ.
- ಲೆಕ್ಕ ಪತ್ರ ಚೆನ್ನಾಗಿ ಇಡುತ್ತಾರೆ.
- 3 ರಿಂದ 6 ತಿಂಗಳವರೆಗೆ ಆಂತರಿಕ ಸಾಲದ ವ್ಯವಹಾರ ಮಾಡುತ್ತಾರೆ. (ಆರೋಗ್ಯ, ವಿದ್ಯಾಭ್ಯಾಸ, ಆಹಾರ, ಒಂದು ಕುರಿ/ಆಡು, ಕೋಳಿ, ಕಾಯಿಪಲ್ಲೆ ವ್ಯಾಪಾರ, ಹಣ್ಣು ವ್ಯಾಪರ)
- 6 ತಿಂಗಳಿಂದ 36 ತಿಂಗಳವರೆಗೆ ಬ್ಯಾಂಕಿನ ಜೊತೆ ಸಂಪರ್ಕ ಕಲ್ಪಿಸಿ ಆರ್ಥಿಕ ಕಾರ್ಯಕ್ರಮ ಹಮ್ಮಿಕೊಳ್ಳುತ್ತಾರೆ.
- ಗುಂಪು ಆರ್ಥಿಕ ಕಾರ್ಯಕ್ರಮ ಹಾಕಿಕೊಳ್ಳುತ್ತಾರೆ.
- ಸಾಲೇತರ ಚಟುವಟಿಕೆಗಳಲ್ಲಿ (ಸಾಮಾಜಿಕ) ತೊಡಗುತ್ತಾರೆ.
- ಗುಚ್ಛಗಳನ್ನು ರಚಿಸಿಕೊಂಡು ಗುಂಪುಗಳ ನಿರ್ವಹಣೆಯ ಜವಾಬ್ದಾ–ರಿಯನ್ನು ತೆಗೆದುಕೊಳ್ಳುತ್ತಾರೆ.
- ತಮ್ಮ ಹಳ್ಳಿಯ ಸಮಗ್ರ ಅಭಿವೃದ್ಧಿಗಾಗಿ ಕೆಲಸ ಮಾಡುತ್ತಾರೆ.
- ತಮ್ಮ ಗುಂಪಿನ ಸದಸ್ಯರ ಕುಟುಂಬದ ಜೀವನ ಸುಧಾರಣೆಗಾಗಿ ದೀರ್ಘಕಾಲೀನ ಉಳಿತಾಯ ಯೋಜನೆಗಳನ್ನು ಸದಸ್ಯರಿಗಾಗಿ ಯೋಜಿಸುತ್ತಾರೆ.

**ಸ್ವಸಹಾಯ ಗುಂಪುಗಳನ್ನು ರಚಿಸುವ ಬಗ್ಗೆ :**

1. ಗುಂಪಿನ ಹೆಸರು
2. ಯಾವ ವಾರ ಸಭೆ ಮಾಡುತ್ತಾರೆ? ಎಷ್ಟು ಗಂಟೆಗೆ? ಎಲ್ಲಿ?
3. ಪ್ರತಿ ವಾರದ ಪ್ರತಿ ಸದಸ್ಯರ ಉಳಿತಾಯ (ಸದಸ್ಯರ ಪೈಕಿ ಅತಿ ಬಡವೆಗ ಕೂಡಾ ಸಾಧ್ಯವಾಗಿರಬೇಕು)
4. ಪ್ರತಿನಿಧಿ 1 ಮತ್ತು ಪ್ರತಿನಿಧಿ 2 ಆಯ್ಕೆ, ಚರ್ಚಾ ಪುಸ್ತಕ ಬರೆಯುವ ಬಗ್ಗೆ.
5. 6 ತಿಂಗಳ ನಂತರ ಗ್ರೇಡಿಂಗ್ ಮಾಡಿ ಗ್ರೇಡಿಂಗ್ ಪ್ರಕಾರ ಗುಂಪು ಸಾಲಕ್ಕೆ ಅರ್ಹ ಇದ್ದಲ್ಲಿ ಮತ್ತು ಗುಂಪು ಇಚ್ಛಿಸಿದಲ್ಲಿ ಸಾಲದ ಸದ್ಭಳಕೆ ಬಗ್ಗೆ ತರಬೇತಿ ಮಾಡಿ ಅಗತ್ಯವಿರುವ ಸಾಲದ ವ್ಯವಸ್ಥೆ ಮಾಡಿಕೊಳ್ಳುವುದು.

**ಗುಂಪಿನ ಪ್ರಾರಂಭಿಕ ಉಪ ನಿಯಮಗಳು :**

ಪ್ರತಿಯೊಂದು ಸ್ವಸಹಾಯ ಗುಂಪು ತನ್ನ ಪ್ರಥಮ ಸಭೆಯಲ್ಲಿ ಎಲ್ಲ ಸದಸ್ಯರುಗಳ ಸಮಕ್ಷಮ ಪ್ರಾರಂಭಿಕ ಉಪನಿಯಮಗಳನ್ನು ನಬಾರ್ಡ್ ಸಂಸ್ಥೆಯ ನಿರ್ದೇಶನಕ್ಕೆ ಒಳಪಟ್ಟು ಅಂಗೀಕರಿಸಬೇಕು ಮತ್ತು ಉಪನಿಯಮಗಳ ಅನ್ವಯ ಸಂಘದ ಎಲ್ಲ ವ್ಯವಹಾರಗಳನ್ನು ನಡೆಸತಕ್ಕದ್ದು.

ಯಾವುದೇ ಸದಸ್ಯರನ್ನು ಉಚ್ಛಾಟಿಸುವ ಮತ್ತು ಹೊಸ ಸದಸ್ಯರನ್ನು ಸೇರ್ಪಡೆ ಮಾಡಿಕೊಳ್ಳುವ ಅಧಿಕಾರ ಗುಂಪಿನ ಸಭೆಗಿರುತ್ತದೆ, ಸದಸ್ಯರಿಂದ ಸಾಲ ವಸೂಲಿ ಮಾಡುವ ಮತ್ತು ಉಳಿತಾಯ ಹಣವನ್ನು ಸಂಗ್ರಹಿಸುವ ಜವಾಬ್ದಾರಿ ಗುಂಪಿನ ಪ್ರತಿ ಸದಸ್ಯರ ಮೇಲಿರುತ್ತದೆ.

ಉಚ್ಛಾಟಿತ ಅಥವಾ ಗುಂಪನ್ನು ತೊರೆಯುವ ಸದಸ್ಯರಿಗೆ ಅವರ ಉಳಿತಾಯದ ಒಟ್ಟು ಮೊಟ್ಟದಲ್ಲಿ ಶೇಕಡ 25ರಷ್ಟು ಕಡಿತಗೊಳಿಸಿ ಉಳಿದ ಶೇಕಡ 75 ರಷ್ಟು ಹಣವನ್ನು ಹಿಂತಿರುಗಿಸಲಾಗುವುದು. ಆ ಸಮಯದಲ್ಲಿ ಸಾಲವಿದ್ದರೆ, ಆ ಹಣವನ್ನು ಸರಿಹೊಂದಿಸಿಕೊಳ್ಳಲಾಗುವುದು. ಆದಾಗ್ಯೂ ಸಾಲ ಉಳಿದರೆ ಅದನ್ನು ಪೂರ್ತಿ ವಸೂಲಿ ಮಾಡಿದ ನಂತರ ಬಿಡುಗಡೆ

ಮಾಡುವುದು. ಗುಂಪನ್ನು ತ್ಯಜಿಸುವ ಸದಸ್ಯರ ರಾಜೀನಾಮೆ ಗುಂಪಿನಲ್ಲಿ ಅಂಗೀಕರವಾಗಿರಬೇಕು.

ಹೊಸ ಸದಸ್ಯರನ್ನು ಮಧ್ಯದ ಅವಧಿಯಲ್ಲಿ ಸೇರ್ಪಡಿಸಿಕೊಳ್ಳುವ ನಿರ್ಣಯವನ್ನು ಕೈಗೊಂಡಲ್ಲಿ ಪ್ರವೇಶವಾಗುವ ಹೊಸ ಸದಸ್ಯರು ಇತರೆ ಹಾಲಿ ಸದಸ್ಯರ ಒಟ್ಟು ಉಳಿತಾಯದ ಮೊತ್ತಕ್ಕೆ ಸರಿಸಮನಾಗಿ ಉಳಿತಾಯ ಹಣ ಸಂದಾಯ ಮಾಡಿ ಸೇರಬೇಕು. ಅಂಥವರಿಗೆ ಮಧ್ಯ ಪ್ರವೇಶದ ದಿನದಿಂದ ಕನಿಷ್ಠ ಮೂರು ತಿಂಗಳವರೆಗೆ ಯಾವುದೇ ಸಾಲ ಸೌಲಭ್ಯ ವಿಸ್ತರಿಸಲಾಗದು.

ಪ್ರತಿ ಮಾರ್ಚ್ ತಿಂಗಳ ವರ್ಷಾಂತ್ಯಕ್ಕೆ ಗುಂಪಿನ ಲಾಭ–ನಷ್ಟ ಬ್ಯಾಂಕಿನವರ ನೆರವಿನಿಂದ ಲೆಕ್ಕ ಹಾಕಿ ಲೆಕ್ಕಪರಿಶೋಧಕರಿಂದ ಪರಿಶೋಧನೆ ಮಾಡಿಕೊಳ್ಳುವುದು ಒಳಿತು.

**ಉಪಸಂಹಾರ:**

ಒಟ್ಟಿನಲ್ಲಿ ಸ್ವಸಹಾಯ ಗುಂಪುಗಳು ಗ್ರಾಮೀಣ ಪ್ರದೇಶದ ಮಹಿಳೆಯರ ಸಬಲೀಕರಣದಲ್ಲಿ ಪ್ರಮುಖ ಪಾತ್ರ ವಹಿಸಿದ್ದು ದೇಶದ ಆರ್ಥಿಕ ಉನ್ನತಿಗೆ ಸಹಾಯಕಾರಿಯಾಗಿರುವ ಪ್ರಬಲ ಸಾಧನವಾಗಿರುತ್ತದೆ. ತುಮಕೂರು ಜಿಲ್ಲೆಯಲ್ಲಿ ತುಮಕೂರು ಡಿ.ಸಿ.ಸಿ ಬ್ಯಾಂಕ್ ತನ್ನ 28 ಶಾಖೆಗಳ ಮುಖಾಂತರ ಮತ್ತು 236 ಕೃಷಿ ಪತ್ತಿನ ಸಹಕಾರ ಸಂಘಗಳ ಮುಖಾಂತರ ಸ್ವಸಹಾಯ ಗುಂಪುಗಳ ರಚನೆ ಮತ್ತು ಜೋಡಣೆಯಲ್ಲಿ ರಾಜ್ಯದಲ್ಲಿಯೇ ಮುಂಚೂಣಿಯಲ್ಲಿದೆ. ಅಲ್ಲದೆ ಸರ್ಕಾರದ ಕಾಯಕ ಯೋಜನೆ ಎಸ್.ಜಿ.ಎಸ್.ವೈ ಯೋಜನೆಗಳ ಮುಖಾಂತರ ಸ್ವಸಹಾಯ ಗುಂಪುಗಳಿಗೆ ಆರ್ಥಿಕ ನೆರವು ಮತ್ತು ತರಬೇತಿಯನ್ನು ನಡೆಸುತ್ತಾ ಬಂದಿರುತ್ತದೆ.

## SWABHIMANI SAHAKARI

### Form IV (See Rule-8)

| | | |
|---|---|---|
| 1. Place of Publication | : | **Bangalore, Karnataka** |
| 2. Periodicity of its Publications | : | **Monthly** |
| 3. Printer's Name | : | Shakthi Printech, # 552/1, 7th Cross, 3rd Main, Ayyappa Temple Road, Prakash Nagar, Srirampura, Bengaluru, Karnataka - 560021 |
| Whether Citizen of India | : | Yes |
| If foreigner, State the country of origin | | |
| 4. Editor's Name | : | **Sharangouda G. Patil** |
| Whether Citizen of India | : | Yes |
| If foreigner, State the country of origin | | |
| Address | : | Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010 |
| 5. Name and Address of individuals who own the Newspaper and partners or share holders holding more than percent of the total capital | : | Managing Director<br>Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010 |

I, Sharangouda G. Patil here by declare that the particulars given above are true to the best of my knowledge and belief.

**Date : 29/02/2020** — **Sd/-**

**Place : Bangalore** — **Signature of the Publisher / Editor**

ಸ್ವಾಭಿಮಾನಿ ಸಹಕಾರಿ

Swabhimani Sahakari, Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2020-2022 RNI NO. KARBIL-2004/18001/Pages 32
Licensed to post without Prepayment License No. PMG BG/WPP-384/2020-2022.

# We would see a very different banking sector in years to come: RBI governor Shaktikanta Das



**MUMBAI :** The changing technology landscape would challenge the traditional banks withFintech and Big Data driving growth, but banks would continue to be in a position ofprimacy in finance with them adopting evolving technologies, Reserve Bank of IndiaGovernor Shaktikanta Das has said.

Even as technology firms provide the tools for reaching customers and enhancing creditassessments, they would be 'service providers' to customers on their own or act as agents of banks, he said at a conclave in Mumbai.

Laying out how four categories would serve Indian finance, Governor Das said, the first one would be big banks with domestic and global presence, then the mid-sized banks,third one would be small finance banks and the fourth one would be digital players.

The fourth segment may consist of digital players who may act as service providers directly to customers or through banks by acting as their agents or associates,'' said Das.``The reoriented banking system will of course be characterised by a continuum of banks.The banking space would also include both traditional players with strong customer base and new technology led players.''

India is increasingly populated by Fintech firms which are contributing to ease of doingtransactions and improve credit assessments. But the regulator continues to prefer banksover the innovators because of the wider financial stability issues and their capital positions.

The governor also issued a word of warning for the traditional banks. The emergence of big tech companies into the financial serviceslandscape of the country, he warned, will pose a challenge for these traditional lenders if they don't modify business models in line with the changing technology realities of the time.

"Banks are not only facing competition from Fintech companies but also from large technology companies (BigTechs) which are enteringinto financial services industry in a big way, said Das addressing an industry gathering at Mint's Annual banking conclave here onMonday.

The low-cost nature of their businesses and the use of big data to assess the riskiness of borrowers and thereby reducing the need forcollateral these big Tech businesses can easily be scaled up to provide basic financial services to the unbanked population, he said.

"These developments pose a challenge to banks as well as banking regulators," Das said. "All these mean that the future of banking willnot be a continuation of the past. We would see a very different banking sector, in terms of structure and business model, in the comingyears."

Typically, big tech companies include US based Google, Amazon, Facebook and Apple. The financial services arms of these companiesare already making significant headway into the business subsets of India's banking industry such as payments and moneymanagement.

"The focus has to be on ushering in significant improvements in efficiency and rationalisation of scarce capital to meet the capital

adequacy requirements," said Das. "Investments in technology and skill building has to be stepped up. Bigger and agile banks may beable to reposition themselves with better branding exercises, backed by improved technology, skills and business models."

ಕೇಂದ್ರ ಕಛೇರಿ: ದೂರವಾಣಿ ಸಂಖ್ಯೆಗಳು : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ: ನಂ. 62, 2ನೇ ಮಹಡಿ, 18ನೇ ಕ್ರಾಸ್, 3ನೇ ಮುಖ್ಯ ರಸ್ತೆ (ಮಾರ್ಗೋಸಾ ರಸ್ತೆ), ಪೈಪ್‌ಲೈನ್ ರಸ್ತೆ ಮಲ್ಲೇಶ್ವರಂ, ಬೆಂಗಳೂರು–560010 ದೂ: 080 23449933/34
ಬೆಂಗಳೂರು ಪ್ರಾಂತೀಯ ಕಛೇರಿ: ನಂ 141, 1ನೇ ಮೇನ್, 11ನೇ ಕ್ರಾಸ್, ಡಾ. ರಾಜ್‌ಕುಮಾರ ರಸ್ತೆ, 1–ಕೆ–ಬ್ಲಾಕ್, ರಾಜಾಜಿನಗರ, ಬೆಂಗಳೂರು–560010 ದೂ: 080 23525546.
ಮೈಸೂರು ಪ್ರಾಂತೀಯ ಕಛೇರಿ: ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821 2332299
ಬೆಳಗಾವಿ ಪ್ರಾಂತೀಯ ಕಛೇರಿ: ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ: 0831 – 2401551.
ಕಲಬುರಗಿ ಪಾಂತೀಯ ಕಛೇರಿ: ನಂ 1–4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ, ಗಾರ್ಡನ್ ರಸ್ತೆ, ಕಲಬುರಗಿ–585102 ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., Nirman Bhavan complex, Dr. Rajkumar Road, 1st Black, Rajajinagar, Bengaluru-560 010